

# ಹಿಂದೂ ಧರ್ಮಕ್ಕೆ ರಕ್ಷಣೆ ಅಗತ್ಯವಾ?


ಗ್ರಂಥಕರ್ತ : ತ್ರಿಮತ ಏಕೈಕ ಗುರುವು


**ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, ಶತಾಧಿಕ ಗ್ರಂಥಕರ್ತ**

**ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ**

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**



ಗ್ರಂಥ ಮುದ್ರಣ

**ಇಂದೂ ಜ್ಞಾನವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 40 ಪ್ರಥಮ ಮುದ್ರಣ : ಏಪ್ರಿಲ್–2018

ಪ್ರತಿಗಳು : 1000 **ಬೆಲೆ.** /–

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು–ಉತ್ತರಗಳು.
03. ಧರ್ಮ–ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ–ಅಸತ್ಯವಾ?)
06. ದೆವ್ವಗಳಹಾಗೂ–ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ–ಮಹಿಮೆ (ಸತ್ಯವಾ–ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ–ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ–ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ–ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು–963.
38. ಮತ–ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು–ಆಸ್ತಿಕರು.
44. ಹೇತುವಾದ–ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‍ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು-ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ-ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ - ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
73. ಅಂತಿಮ ದೈವಗ್ರಂಥದಲ್ಲಿ ವಜ್ರವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ.
78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು.
80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು-ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು-ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ-ರಾವಣಬ್ರಹ್ಮ-ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ
94. ಪ್ರಾಥಮಿಕ ಜ್ಞಾನ
95. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
96. ಧ್ಯಾನ - ಪ್ರಾರ್ಥನೆ - ನಮಾಜ್
97. ಹಿಂದೂ ಧರ್ಮಕ್ಕೆ ರಕ್ಷಣೆ ಅಗತ್ಯವಾ?
98. ವೇದಗಳು ಮನುಷ್ಯನಿಗೆ ಅಗತ್ಯವಾ?
99. ಸಿದ್ಧಿ ಬೋಧನೆ.
100. ಸತ್ಯಾರ್ಥ ಪ್ರಕಾಶಣೆಯಲ್ಲಿ ಸತ್ಯವೆಷ್ಟು.
101. ಸೊನ್ನೆ.

**ಸೂಚನೆ** : ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಲಾಗದ ಪದಗಳು ಹಾಗೆಯೇ ಮುದ್ರಿಸಲಾಗಿದೆ.

# 04 ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು.
02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ.
20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ.
25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು.
28. ಪ್ರಕೃತಿ–ವಿಕೃತಿ.
29. ಮಾಟ–ಮಂದು.
30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ– ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ– ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ– ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು– ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ – ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖುರಾನ್–ಹದೀಸು.
51. ತಲ್ಲಿ.
52. ಪುಟ್ಟುಟ – ಗಿಟ್ಟುಟ.
53. ಗೋರು – ಗುರು.
54. ಆತ್ಮ.
55. ಕರ್ಮ ಮರ್ಮಮು.
56. ತಾತ.
57. ಗುರುಪೌರ್ಣಮಿ.
58. ಯೋಗೀಶ್ವರುಲ ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.
62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ – ದೇಹಂ ಮೋಹಂ.
65. ಜೀರ್ಣ+ಆಶಯಮು.
66. ಮೇಘಂ ಒಕಭೂತಂ– ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ

**DVD's**

69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ - ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು-
    ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು-
    ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು-ಆನಂದಮು.
81. ದಶ-ದಿಶಲು.
82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು-
    ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ
    ಮಹೇಂದ್ರಜಾಲ,
    ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ
    (ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು-ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು-
    ಆರು-ತೊಮ್ಮಿದಿ
89. 6-3=6
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ-ಭಯಮು.
99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು-ಅಪಾರ್ಥಮು.
102. ತೋಲೇವಾಡು.
103. ಗುರು ಚಿಹ್ನಂ.
104. ಭಕ್ತಿ-ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕವಾಡು.
109. ಗ್ರಂಥಮು - ಬೋಧ.
110. ಆಟ – ದೋಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು-ಅಂತಮು.
114. ಮಾಯ ಮರ್ಮಮು-ಆತ್ಮ ಧರ್ಮಮು
115. ಶ್ರೀಕೃಷ್ಣುಡು
    ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ
    ಪ್ರಥಮವಾಕ್ಯಮುಲು
117. ಅದುರು-ಬೆದುರು
118. ಶವಮು - ಶಿವಮು
119. ಧರ್ಮಚಕ್ರಮು
120. ಗ್ರಾಹಿತ ಶಕ್ತಿ
121. ಭೌತಿಕಮು - ಅಭೌತಿಕಮು
122. ದೇವುನಿ ಆಜ್ಞ ಮರಣಂ
123. ಮತ ಸಾಮರಸ್ಯಂ
124. ಮೋಕ್ಷಮು - ಮೋಸಮು
125. ಅಕ್ಷರ ಜ್ಞಾನಮು
126. ಲಲಾಜಲಮು
127. ದೈವ ಧರ್ಮಗಳು-
    ಮತಸಾಂಪ್ರದಾಯಗಳು
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ-ಮಂದು
130. ಕಾಲಚಕ್ರಂ
131. ಬ್ರಹ್ಮವಿದ್ಯ.
132. ಶಕ್ತಿ
133. ಆಧ್ಯಾತ್ಮಿಕ ಪ್ರಶ್ನಲು-ಜವಾಬುಲು.
134. ಪೌರ್ಣಮಿ-ಅಮಾವಾಸ್ಯ.
135. ಈಶ್ವರ-ಪರಮೇಶ್ವರ.
136. ಪುರುಷೋತ್ತಮ-ಶ್ರೀರಾಮ.

## ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P

Cell : **ಲಕ್ಷ್ಮಿನಾರಾಯಣಾಚಾರಿ**–09440556968. **ವೆಂಕಟೇಶ್**–08096816963.

**(ಇಂದೂ ಜ್ಞಾನ ವೇದಿಕೆ ಸದಸ್ಯರು)**

**ಎ. ರಾಘವೇಂದ್ರ ಶ್ರೇಷ್ಠಿ**
ಹೊಸಪೇಟೆ, ಬಳ್ಳಾರಿ (ಜಿಲ್ಲೆ). K. A
Cell : 9611133635, 09440645005

**ಜಿ. ರಾಧಾಕೃಷ್ಣಾ ರೆಡ್ಡಿ**
ಪ್ರಬೋಧಾ ನಿಲಯ. ರಿಂಗ್ ರೋಡ್,
ಮರಲೂರು, ತುಮಕೂರು (ಜಿ).
ಪಿನ್–572150, Cell : 9448177812

**ಶಿವರಾಜ**
(ಸಾ)(ಕಿ) ಕುಕನೂರು, ಚಿಕ್ಕಸೂಗುರು (ತಾ),
ರಾಯಚೂರು (ಜಿ), Cell:98443 69516

**R.S. ವೀರಾಚಾರಿ**
ಕತ್ತರಗುಪ್ಪೆ, ಬೆಂಗಳೂರು–560085
Cell : 9036892829

**G. ಮನೋಹರ್**
ಮಲ್ಲಸಂದ್ರ, ಟಿ. ದಾಸರಹಳ್ಳಿ
ಬೆಂಗಳೂರು–560057
Cell : 7411459912, 9448452963.

**B. ವಾತ್ಸಲ್ಯ**
ರೈಲ್ವೇ ಸ್ಟೇಷನ್ ಹತ್ತಿರ,
ಪಿ.ಬಿ.ರೋಡ್, ದಾವಣಗೆರೆ–577002
Cell : 9901534677, 8880666529

**ಯೋಗೇಶ್.B**
ವಡ್ಡೇಪಾಲ್ಯಂ (ಗ್ರಾ),
ಕುಂದುರ್ಪಿ(ಮಂ),ಅನಂತಪುರ(ಜಿಲ್ಲಾ)
ಸೆಲ್: 9620193341, 9739228639

**ಬಸವರಾಜ ಅಂಗಡಿ**
(ಸಾ) ಪೋತ್ನಾಳ, (ತಾ) ಮಾನವಿ,
ರಾಯಚೂರು (ಜಿ) Cell :**9632418716**

**ಸೂರ್ಯ ಪ್ರಕಾಶ**
ಟೈಪ್ 'ಸಿ' (ಸಾ) (ಪೊ) ಶಕ್ತಿನಗರ
(ತಾ), ರಾಯಚೂರು (ಜಿ)
Cell : 9611183107, 9164886981

**ಲೀಲಾವತಿ**
ಜನತಾನಗರ, ತೊಣಚಿಕೊಪ್ಪಲ್, ಮೈಸೂರ್
Cell : 9141109799, 9986369118

**T.V. ರಮಣ**
NGR ಲೇಔಟ್, ರೂಪೇನಾ
ಅಗ್ರಹಾರ, ಬೆಂಗಳೂರು–560068.
Cell : 08970772028, 07411459912, 07406039453

**M. ನಾರಾಯಣರೆಡ್ಡಿ**
(Bsc census department retired supervisor)
ರಾಮಗುಂಡನಲ್ಲಿ ಪೋಸ್ಟ್, ವೈಟ್
ಫೀಲ್ಡ್ ರೋಡ್, ಬೆಂಗಳೂರು–066
Cell : 9482516023

**ಪ್ರಕಾಶ್ ರೆಡ್ಡಿ**
ತೊಬರಹಳ್ಳಿ, ವೈಟ್‌ಫೀಲ್ಡ್,
ಬೆಂಗಳೂರು (ಉತ್ತರ), ಕರ್ನಾಟಕ.
ಸೆಲ್:9845656774, 9482516023

**ಯೋಗೇಶ್**
ಸೂಲನಾಯಕನಹಳ್ಳಿ (ಗ್ರಾಮ),
ತುಮಕೂರು (ಜಿಲ್ಲೆ).
ಸೆಲ್:8762523963,9740744424

# ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲೀಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ತಪ್ಪದೆ ಓದಿರಿ! ಓದಿಸಿರಿ!!

## ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ ಹಾಗೂ ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಹಿಂದೂ ಧರ್ಮಕ್ಕೆ ರಕ್ಷಣೆ ಅಗತ್ಯವಾ?

ನಾನು ಒಬ್ಬ ಮನುಷ್ಯನು, ನಾನು ಯಾವ ಮತಕ್ಕೂ ಸಂಬಂಧ ಇಲ್ಲದವನು. ಪರಮಾತ್ಮನಾದ ದೇವರಿಂದ ಪ್ರಪಂಚ ಹುಟ್ಟಿದೆ. ಪ್ರಪಂಚದಲ್ಲಿ ಆತ್ಮಯೆಂಬ ದೇವರಿಂದ ಮನುಷ್ಯರು, ಜೀವರಾಶಿಗಳು ಸೃಷ್ಠಿಸಲ್ಪಟ್ಟಿದ್ದಾರೆ. ಪಂಚ ಮಹಾಭೂತಗಳಾದ ಪ್ರಪಂಚವನ್ನು ಸೃಷ್ಠಿಸಿದವನು ಒಂದನೇ ದೇವರು. ಪ್ರಕೃತಿಯನ್ನು ಸೃಷ್ಠಿಸಿದವನು **ಒಬ್ಬ ದೇವರೇ**. ಆಗ ಎರಡನೆಯವನು ಯಾರೂ ಇಲ್ಲ. ಒಬ್ಬ ಪುರುಷನೇ ಸ್ತ್ರೀ ತತ್ತ್ವವಾದ ಪಂಚಭೂತಗಳ ಪ್ರಪಂಚವನ್ನು ಸೃಷ್ಠಿಸಿದ್ದಾನೆ. ನಂತರ ಖಾಲಿಯಾಗಿರುವ ಪ್ರಪಂಚದಲ್ಲಿ ಜೀವರಾಶಿಗಳು ಇಲ್ಲ, ಮನುಷ್ಯರು ಇಲ್ಲ. ಆಗ ಮೊದಲ ಸೃಷ್ಠಿಕರ್ತನಾದ ಏಕೈಕ ದೇವರು ಎರಡನೆ ಪುರುಷನನ್ನು ಹುಟ್ಟಿಸಿದ್ದಾನೆ. ಎರಡನೆ ಪುರುಷನನ್ನು ಸೃಷ್ಠಿಸಿದವನು ಮೊದಲನೆ ಪುರುಷನು. ಮೊದಲ ಪುರುಷನು ತಿಳಿಯಲ್ಪಡದವನು ಆಗಿರುವುದರಿಂದ ಆತನನ್ನು **'ದೇವರು'** ಎಂದು ಹೇಳಿದ್ದಾರೆ. ಸ್ತ್ರೀ ತತ್ತ್ವವಾದ ಪ್ರಕೃತಿಯನ್ನು ಸೃಷ್ಠಿಸಿದ ಸೃಷ್ಠಿಕರ್ತನನ್ನು **'ದೇವರು'** ಎಂದು ಕರೆಯುತ್ತಿದ್ದೇವೆ.

ಸೃಷ್ಠಿಸಲ್ಪಟ್ಟ ಪ್ರಕೃತಿಯನ್ನು ಸೃಷ್ಠಿಕರ್ತನಾದ ದೇವರು ಎರಡು ಭಾಗಗಳಾಗಿ ವಿಭಜಿಸಿದ್ದಾನೆ. ಅದರಲ್ಲಿ ಒಂದನ್ನು ಬದಲಾಗದ ಪ್ರಕೃತಿಯೆಂದು ಕರೆಯುತ್ತಿದ್ದೇವೆ. ಇನ್ನೊಂದನ್ನು ಬದಲಾಗುವ ಪ್ರಕೃತಿ ಎನ್ನುತ್ತಿದ್ದೇವೆ. ಪ್ರಪಂಚವನ್ನು ಸೃಷ್ಠಿಸಿದ ಸೃಷ್ಠಿಕರ್ತನಾದ ಪರಮಾತ್ಮ ಪ್ರಪಂಚದಲ್ಲಿ ಮನುಷ್ಯರನ್ನು, ಜೀವರಾಶಿಗಳನ್ನು ತಯಾರಿ ಮಾಡಬೇಕೆಂದುಕೊಂಡು ಜೀವರಾಶಿಗಳನ್ನು ಸೃಷ್ಠಿಸುವುದಕ್ಕೆ ಮತ್ತೊಬ್ಬ ಪುರುಷನನ್ನು ತಯಾರಿ ಮಾಡಿದ್ದಾನೆ. ಆ ಎರಡನೆ ಪುರುಷನನ್ನೇ **'ಆತ್ಮ'** ಎನ್ನುತ್ತಿದ್ದೇವೆ. ಸೃಷ್ಠಿಕರ್ತನಾದವನನ್ನು ದೇವರು ಎಂದು ಹೇಳಿದ್ದೇವೆ ಅಲ್ಲವೆ! ಅದೇ ವಿಧವಾಗಿ ಜೀವರಾಶಿಗಳನ್ನು ಸೃಷ್ಠಿಸಿದ ಸೃಷ್ಠಿಕರ್ತನನ್ನು ಕೂಡಾ ದೇವರೆಂದೇ ಕರೆಯುತ್ತಿದ್ದೇವೆ. ಆ ವಿಧವಾಗಿ ಮೊದಲ ದೇವರು, ಎರಡನೆ ದೇವರು ಎಂದು ಇಬ್ಬರು ದೇವರುಗಳು ತಯಾರಾಗಿದ್ದಾರೆ. ಎರಡನೆ ದೇವರು ಕೂಡಾ ಸೃಷ್ಠಿಸಲ್ಪಟ್ಟವನೇ ಆದ್ದರಿಂದ ಸೃಷ್ಠಿಸಲ್ಪಟ್ಟವನಿಗೆ ಹೆಸರಿದೆ. ಸೃಷ್ಠಿ

ಸಲ್ಪಟ್ಟಿರುವುದು ಏನಾದರೂ ಅದಕ್ಕೆ ಹೆಸರು, ರೂಪ, ಕೆಲಸ ಇರುತ್ತದೆ. **ತಯಾರಿ ಮಾಡಲ್ಪಟ್ಟ ಯಾವುದಕ್ಕಾದರೂ ಒಂದು ಶಾಸ್ತ್ರೀಯತೆ ಇದೆ. ಶಾಸ್ತ್ರೀಯತೆಯನ್ನು ಅನುಸರಿಸಿ ಅದಕ್ಕೆ ಸಿದ್ಧಾಂತವಿದೆ. ಸಿದ್ಧಾಂತವಿರುವ ಅದಕ್ಕೆ ನಿರ್ಣಯಿಸಲ್ಪಟ್ಟ ಧರ್ಮವಿರುತ್ತದೆ.**

ಸೃಷ್ಠಿಸಲ್ಪಟ್ಟ ಪ್ರತಿಯೊಂದಕ್ಕು ಧರ್ಮವನ್ನು ನಿರ್ಣಯಿಸಿದವನು ಮೊದಲ ದೇವರಾದ ಪರಮಾತ್ಮ. ಮೊದಲ ಸೃಷ್ಠಿಕರ್ತನಾದ ದೇವರು ಯಾರಿಂದಲೂ ಸೃಷ್ಠಿಸಲ್ಪಡಲಿಲ್ಲ. ಆದ್ದರಿಂದ ಆತನಿಗೆ ಹೆಸರಿಲ್ಲ, ಆಕಾರವಿಲ್ಲ, ಕೆಲಸವೂ ಇಲ್ಲ, ಆತನಿಗೆ ಯಾವ ಧರ್ಮಗಳು ಇಲ್ಲ. ತನ್ನಿಂದ ಎರಡನೆ ಆತ್ಮವನ್ನು ಸೃಷ್ಠಿಸಿದ ಮೊದಲ ದೇವರು ಆತ್ಮಕ್ಕಿಂತ ಪ್ರತ್ಯೇಕವಾಗಿ ಇರುವವನಾದ್ದರಿಂದ, ಆತನನ್ನು ಗುರುತಿಸುವುದಕ್ಕಾಗಿ, ಆತ್ಮಗಿಂತ ಪ್ರತ್ಯೇಕವಾದವನೆಂಬ ಅರ್ಥ ಬರುವಂತೆ **'**ಪರಮಾತ್ಮ' ಎಂದು ಕರೆಯಲಾಗಿದೆ. ಸೃಷ್ಠಿಗೆ ಪೂರ್ವದಲ್ಲಿ ಸೃಷ್ಠಿಕರ್ತನಾದವನಿಗೆ ಪರಮಾತ್ಮನೆಂದು ಗುರುತು ಕೂಡಾ ಇಲ್ಲ. ಯಾವ ಗುರುತು ಇಲ್ಲದವನಾದ ಮೊದಲ ದೇವರು, ಮೊದಲ ಸೃಷ್ಠಿಕರ್ತ, ಧರ್ಮಗಳು ಇಲ್ಲದವನು. ಆತನು ಯಾರಿಂದಲೂ ಸೃಷ್ಠಿಸಲ್ಪಡದವನಾದ್ದರಿಂದ ಆತನು **ಧರ್ಮಾತೀತನು**. ಧರ್ಮಗಳಿಗೆ ಅತೀತನಾಗಿರುವ ಮೊದಲ ದೇವರಾದ **ಪರಮಾತ್ಮ** ತನ್ನ ಸಂಕಲ್ಪದಿಂದ ಆತ್ಮನನ್ನು ಸೃಷ್ಠಿಸಿದ್ದಾನೆ. ಪ್ರಪಂಚದಲ್ಲಿ ಆತ್ಮಕ್ಕೆ ಧರ್ಮಗಳು ಇವೆ ಆದರೆ, ಸೃಷ್ಠಿಸಲ್ಪಡದ ಪರಮಾತ್ಮನಿಗೆ ಧರ್ಮಗಳಿಲ್ಲ. ಪರಮಾತ್ಮನಿಂದ ಸೃಷ್ಠಿಸಲ್ಪಟ್ಟವನು ಆತ್ಮ. ಆತ್ಮ ಧರ್ಮಯುಕ್ತನಾಗಿದ್ದು ಜೀವರಾಶಿಗಳನ್ನು ಸೃಷ್ಠಿಸುವುದು ನಡೆದಿದೆ. ಸೃಷ್ಠಿ ನಂತರ ಪ್ರಪಂಚದಲ್ಲಿ ಮೊದಲು ಕೆಲಸ ಮಾಡಿದವನು **ಆತ್ಮ**. ಆತ್ಮವೇ ಜೀವರಾಶಿಗಳನ್ನು ಸೃಷ್ಠಿಸಿದ್ದಾನೆ. ಸೃಷ್ಠಿಸುವವನು ಆಗಿರುವುದರಿಂದ ಆತ್ಮವನ್ನು **'ಎರಡನೆ ದೇವರು'** ಎಂದು ಕರೆಯುತ್ತಿದ್ದೇವೆ.

ಆತ್ಮ ಎರಡನೆ ಪುರುಷನಾಗಿ, ಮೂರನೆ ಪುರುಷನಾದ ಜೀವಾತ್ಮನನ್ನು ಸೃಷ್ಠಿಸಿದ್ದಾನೆ. ಜೀವಾತ್ಮ ಪುರುಷನ ಅಂಶವೇ ಆದರೂ, ಆತನು ಪ್ರಕೃತಿಯೊಂದಿಗೆ ಬೆರೆತಿದ್ದಾನೆ. ಜೀವಿಯು ಆತ್ಮನಂತೆ ಪುರುಷನಾಗಿದ್ದಾನೆ. ಜೀವಿಯು ಆತ್ಮದಿಂದ

ಸೃಷ್ಠಿಸಲ್ಪಟ್ಟಿದ್ದಾನೆ. ಆದ್ದರಿಂದ ಸೃಷ್ಠಿಸಲ್ಪಟ್ಟವನಿಗೆ ಧರ್ಮಗಳಿರುತ್ತವೆ. **ಜೀವಾತ್ಮದ ಧರ್ಮಗಳು ಬೇರೆ, ಆತ್ಮದ ಧರ್ಮಗಳು ಬೇರೆ.** ಸೃಷ್ಠಿಸಲ್ಪಟ್ಟ ಯಾವುದಕ್ಕಾದರೂ ರೂಪ, ಹೆಸರು, ಕ್ರಿಯೆಗಳು ಇರುತ್ತವೆಂದು ಹೇಳಿದಂತೆ ಆತ್ಮಕ್ಕೆ ರೂಪ, ನಾಮ, ಕ್ರಿಯೆಗಳು ಇವೆ. ಹಾಗೇ ಜೀವಾತ್ಮಕ್ಕೂ ಕೂಡಾ ರೂಪ, ನಾಮ, ಕ್ರಿಯೆಗಳು ಇವೆ. ಆತ್ಮನನ್ನು ಪ್ರಕೃತಿ ಆವರಿಸಿಲ್ಲ. ಆದ್ದರಿಂದ ಆತ್ಮನಲ್ಲಿ ಪುರುಷತತ್ತ್ವವೇ ಇದೆ ಹೊರತು, ಸ್ತ್ರೀ ಲಕ್ಷಣಗಳಾದ ಪ್ರಕೃತಿ ಲಕ್ಷಣಗಳು ಯಾವುವು ಇಲ್ಲ. ಆದರೆ ಮೂರನೆ ಆತ್ಮನಾದ ಜೀವಾತ್ಮ ಪುರುಷನೇ ಆದರೂ, ಸ್ತ್ರೀ ತತ್ತ್ವವಾದ ಪ್ರಕೃತಿ ವೇಷವನ್ನು ಧರಿಸಿದ್ದಾನೆ. ಪುರುಷನು ಕಾಣಿಸುವ ಸ್ತ್ರೀ ವಸ್ತ್ರಗಳು ಧರಿಸುವುದರಿಂದ ಜೀವಿಯನ್ನು ಪೂರ್ತಿ ಪುರುಷನೆಂದು ಹೇಳದೆ ನಪುಂಸಕನು ಎಂದು ಹೇಳಬೇಕಾಗಿ ಬಂದಿದೆ. ಪ್ರಕೃತಿ ಇಲ್ಲದ ಮೊದಲು ಪ್ರಕೃತಿಯನ್ನು ಸೃಷ್ಠಿಸಿದ ದೇವರಿಗೆ ಸೃಷ್ಠಿ ನಂತರ ಯಾವ ಕಾರ್ಯವನ್ನು ಮಾಡದೆ, ತಾನು ತಯಾರಿ ಮಾಡಿದ ಆತ್ಮಕ್ಕೆ ಜೀವರಾಶಿಗಳನ್ನು ತಯಾರಿ ಮಾಡುವ ಕಾರ್ಯವನ್ನು ನಿಯಮಿಸಿದ್ದಾನೆ. ದೇವರು ತನ್ನನ್ನು ಸೃಷ್ಠಿಸಿದ್ದಾನೆ ಆದ್ದರಿಂದ ಆತನ ಆಜ್ಞೆ ಪ್ರಕಾರ, ಆತನು ಕೊಟ್ಟಿರುವ ಅಧಿಕಾರದ ಪ್ರಕಾರ ಆತ್ಮ ಎನ್ನುವ ಎರಡನೆ ದೇವರು ಸರ್ವಜೀವರಾಶಿಗಳನ್ನು ಬದಲಾವಣೆಯಾಗುವ ಪ್ರಕೃತಿಯೊಂದಿಗೆ ಸೇರಿಸಿ ತಯಾರಿ ಮಾಡಿದ್ದಾನೆ.

ಸೃಷ್ಠಿಸುವವನು ಆಗಿರುವುದರಿಂದ ಆತನನ್ನು (ಆತ್ಮನನ್ನು) ಕೂಡಾ ದೇವರೆಂದೇ ಕರೆಯುತ್ತಿದ್ದೇವೆ. ಆದರೆ 'ಸೃಷ್ಠಿಸಲ್ಪಟ್ಟವನಿಗೆ ಧರ್ಮಗಳಿರುತ್ತವೆ' ಎನ್ನುವ ಸಿದ್ಧಾಂತದ ಪ್ರಕಾರ ಆತ್ಮಗೆ ರೂಪ, ನಾಮ, ಕ್ರಿಯೆಗಳಿವೆ. ಹಾಗೇ ಸೃಷ್ಠಿಸಲ್ಪಟ್ಟ **ಜೀವಾತ್ಮಕ್ಕೂ ಕೂಡಾ ರೂಪ, ನಾಮ, ಕ್ರಿಯೆಗಳು** ಇವೆ. ಅಷ್ಟೇಅಲ್ಲದೆ **'ಸಾವು, ಹುಟ್ಟುಗಳು'** ಎನ್ನುವ ಧರ್ಮಗಳನ್ನು ಕೂಡಾ ಹೊಂದಿದ್ದಾನೆ. ಸ್ತ್ರೀ ತತ್ತ್ವವಾದ ಪ್ರಕೃತಿಯನ್ನು ಮೊದಲ ಸೃಷ್ಠಿಕರ್ತನಾದವನು ಬದಲಾವಣೆಯಾಗುವ ಪ್ರಕೃತಿ, ಬದಲಾವಣೆಯಾಗದ ಪ್ರಕೃತಿಯೆಂದು ಎರಡು ಭಾಗಗಳಾಗಿ ತಯಾರಿ ಮಾಡಿದ್ದಾನೆ. ಪ್ರಕೃತಿ ಕೂಡಾ ಸೃಷ್ಠಿಸಲ್ಪಟ್ಟಿರುವುದೆ ಆದ್ದರಿಂದ, ಪ್ರಕೃತಿ ಕೂಡಾ

ಧರ್ಮಗಳೊಂದಿಗೆ ಕೂಡಿಕೊಂಡಿದೆ. ಧರ್ಮಗಳು ಸಿದ್ಧಾಂತದ ಮೇಲೆ, ಸಿದ್ಧಾಂತ ಶಾಸ್ತ್ರದ ಮೇಲೆ ಆಧಾರಪಟ್ಟಿರುತ್ತದೆ. ಆದ್ದರಿಂದ ಯಾವ ಧರ್ಮವಾದರೂ ಶಾಸನಗಳಿಂದ ಕೂಡಿರುವುದಾಗಿ, ಬದಲಾವಣೆ ಹೊಂದದೆ ಇರುತ್ತದೆ. ಪರಮಾತ್ಮ ಸೃಷ್ಠಿಸಲ್ಪಡದವನು ಆಗಿರುವುದರಿಂದ ಆತನು ಧರ್ಮಗಳಿಗೆ ಅತೀತನು.

ಈ ವಿಧವಾಗಿ ಸೃಷ್ಠಿಸಲ್ಪಟ್ಟವರು ಮೂವರು ಒಂದು ಪ್ರಕೃತಿ, ಎರಡು ಆತ್ಮ, ಮೂರು ಜೀವಾತ್ಮ. ಈ ಮೂವರಲ್ಲಿ ಪ್ರಕೃತಿಯನ್ನು, ಆತ್ಮವನ್ನು ಸೃಷ್ಠಿಸಿದವನು ಮೊದಲ ಸೃಷ್ಠಿಕರ್ತ ಪರಮಾತ್ಮ ಆದಾಗ, ಜೀವಾತ್ಮನನ್ನು ಸೃಷ್ಠಿಸಿದವನು ಎರಡನೆ ಸೃಷ್ಠಿಕರ್ತನಾದ ಆತ್ಮ ಎಂದು ತಿಳಿಯಬೇಕು.

| | |
|---|---|
| **1) ಸೃಷ್ಠಿಕರ್ತರು ಇಬ್ಬರು** | **1) ಸೃಷ್ಠಿಸಲ್ಪಟ್ಟವರು ಮೂವರು** |
| 1) ಪರಮಾತ್ಮ | 1) ಪ್ರಕೃತಿ |
| 2) ಆತ್ಮ | 2) ಆತ್ಮ |
| | 3) ಜೀವಾತ್ಮ |
| **2) ಪರಮಾತ್ಮ ಸೃಷ್ಠಿ** | **2) ಆತ್ಮ ಸೃಷ್ಠಿ** |
| 1) ಪ್ರಕೃತಿ | 1) ಜೀವಾತ್ಮ |
| 2) ಆತ್ಮ | |
| 3) **ಪುರುಷರು ಇಬ್ಬರು** | **3) ಪುರುಷರು ಅಲ್ಲದವರು** |
| 1) ಪರಮಾತ್ಮ | 1) ಪ್ರಕೃತಿ |
| 2) ಆತ್ಮ | |
| **4) ಕೆಲಸ ಮಾಡದ ಪುರುಷನು** | **4) ನಪುಂಸಕನು** |
| ಪರಮಾತ್ಮ | ಜೀವಾತ್ಮ |
| **5) ಕೆಲಸ ಮಾಡುವ ಪುರುಷನು** | **5) ಅನುಭವಿಸುವವನು** |
| ಆತ್ಮ | ಜೀವಾತ್ಮ |

| | |
|---|---|
| **6) ಧರ್ಮಗಳು ಇಲ್ಲದವನು** | **6) ಧರ್ಮಗಳಿರುವವರು** |
| 1) ಪರಮಾತ್ಮ | 1) ಪ್ರಕೃತಿ |
| | 2) ಆತ್ಮ |
| | 3) ಜೀವಾತ್ಮ |
| **7) ಕರ್ಮ ಇಲ್ಲದವನು** | **7) ಕರ್ಮಗಳಿರುವವನು** |
| 1) ಪರಮಾತ್ಮ | 1) ಜೀವಾತ್ಮ |
| 2) ಆತ್ಮ | |
| **8) ಶಾಸನವಾದುದು** | **8) ಕಾರಣವಾದುದು** |
| ಧರ್ಮ | ಕರ್ಮ |

**ಪ್ರಶ್ನೆ :– ನೀವು ಇದಕ್ಕೂ ಮುನ್ನ ಹೇಳಿರುವ ಸಮಾಚಾರದಲ್ಲಿ ಸೃಷ್ಠಿಕರ್ತರು ಇಬ್ಬರುಯೆಂದು, ಮೂವರು ಸೃಷ್ಠಿ ಸಲ್ಪಟ್ಟವ ರೆಂದು ಅದರಲ್ಲಿ ಒಂದು ಬಾರಿ ಸೃಷ್ಠಿಸಲ್ಪಟ್ಟ ಆತ್ಮ, ನಂತರ ಸೃಷ್ಠಿಸಲ್ಪಡುವ ಸಾಮರ್ಥ್ಯ ಹೊಂದಿರುವ ಆತ್ಮ, ಜೀವಾತ್ಮ ಗಳನ್ನು ಸೃಷ್ಠಿಸಿದೆ. ಜೀವಾತ್ಮ ಪುರುಷನೇ ಆದರೂ ಸ್ವಲ್ಪ ಪುರುಷ ಲಕ್ಷಣಗಳು ಇದ್ದರೂ, ಆತನು ಪ್ರಕೃತಿ ಯೊಂದಿಗೆ ಕೂಡಿ ಮಾಯೆಯಲ್ಲಿ ಇರುವುದರಿಂದ ಆತನನ್ನು 'ನಪುಂಸಕನು' ಎಂದು ಕರೆಯುತ್ತಿದ್ದಾರೆ. ಆದರೆ ಸೃಷ್ಠಿಸಲ್ಪಟ್ಟು ಆ ನಂತರ ಸೃಷ್ಠಿಕರ್ತನಾದ ಆತ್ಮಗೆ ಧರ್ಮ ಇದೆಯೆಂದಿದ್ದಾರೆ. ಕೇವಲ ಸೃಷ್ಠಿಸಲ್ಪಟ್ಟ ಜೀವಾತ್ಮಗೆ ಕರ್ಮ ಇದೆಯೆಂದಿದ್ದಾರೆ. ಮೊದಲು ಹೇಳಿದ ಸಮಾಚಾರದ ಪ್ರಕಾರ ಪ್ರಕೃತಿ ಪುರುಷರು ತಿಳಿಯಲ್ಪಟ್ಟಿದ್ದಾರೆ. ಆದರೆ ಧರ್ಮ, ಕರ್ಮ ಎಂಬ ಮಾತು**

**ಗಳು ಈಗ ಹೊಸದಾಗಿ ಕೇಳಿಸುತ್ತಿವೆ. ಧರ್ಮ ಎಂದರೇನು? ಕರ್ಮ ಎಂದರೇನು ವಿವರಿಸಿ ಹೇಳಬಲ್ಲಿರೆಂದು ಕೇಳುತ್ತಿದ್ದೇವೆ?**

**ಉತ್ತರ :–** ಧರ್ಮವು, ಕರ್ಮವು ಎನ್ನುವ ಎರಡು ಪದಗಳಲ್ಲಿ ಕೊನೆಯ **'ವು'** ಎಂಬ ಅಕ್ಷರ ಮುಕ್ತಾಯ ಶಬ್ದವಾಗಿದೆ. ಆದ್ದರಿಂದ **ಧರ್ಮ, ಕರ್ಮ** ಎನ್ನುವ ಎರಡು ಶಬ್ದಗಳ ಅರ್ಥವನ್ನು ಮಾತ್ರ ತಿಳಿಯಬೇಕಾಗಿದೆ. ಮುಖ್ಯವಾಗಿ ಹೇಳಿದರೆ **ಕರ್ಮ** ಎಂದು ಅಭ್ಯಾಸದಿಂದ ಬರೆಯುತ್ತಿರುವ ಪದವನ್ನು **ಖರ್ಮ** ಎಂದು ಪೂರ್ವಕಾಲದಲ್ಲಿ ಬರೆಯುತ್ತಿದ್ದರು. ಕಾಲಕ್ರಮವಾಗಿ ಎಷ್ಟೋ ಪದಗಳು ಬದಲಾಗಿ ಹೋದಂತೆ 'ಖರ್ಮ' ಎನ್ನುವುದು **'**ಕರ್ಮ**'** ಎಂದು ಪ್ರಸ್ತುತ ಕಾಲದಲ್ಲಿ ಬರೆಯಲ್ಪಡುತ್ತಿದೆ. 'ಧರ್ಮ' ಎನ್ನುವುದು ಪೂರ್ವದಿಂದ ಇಂದಿನವರೆಗು ಬದಲಾಗದಂತೆ ಹೇಳಲ್ಪಡುತ್ತಿದೆ. ಈ ಪದಗಳನ್ನು ಬಿಡಿಸಿ ಹೇಳಿಕೊಂಡರೆ ಕೆಳಗಿನ ವಿಧವಾಗಿವೆ.

**ದ+ಮರ್ಮ = ಧರ್ಮ ಎಂದು ಹೇಳಬಹುದು.**
**ಕ+ಮರ್ಮ = ಖರ್ಮ ಎಂದು ಹೇಳಬಹುದು.**

'ಧರ್ಮ'ದಲ್ಲಿ **'ದ'** ಅನ್ನು ಪಕ್ಕಕ್ಕಿಟ್ಟು, **'ಮರ್ಮ'** ಎನ್ನುವ ಶಬ್ದಕ್ಕೆ ಅರ್ಥ ಹೇಳಿಕೊಂಡರೆ ರಹಸ್ಯವಾದುದೆಂದು, ತಿಳಿಯದಿರುವುದೆಂದು ಹೇಳ ಬಹುದು. ಹಾಗೇ ಖರ್ಮದಲ್ಲಿ **'ಕ'** ಅನ್ನು ಪಕಕ್ಕಿಟ್ಟು ಉಳಿದ **'ಮರ್ಮ'** ಎಂಬ ಶಬ್ದ ಕೂಡಾ ರಹಸ್ಯವಾದುದೆಂದು, ತಿಳಿಯದಿರುವುದೆಂದು ಅರ್ಥವನ್ನು ಕೊಡುತ್ತಿದೆ. **'ದ'** ಎಂದರೇ ಬದಲಾಗದ ದಕ್ಷತೆ ಇರುವುದೆಂದು, ಬದಲಾಗದ ನಿರ್ಣಯ ಇರುವುದೆಂದು ಹೇಳುತ್ತಾ, **'ಧರ್ಮ' ಎಂದರೇ ರಹಸ್ಯವಾದ ಬದಲಾಗದ ನಿರ್ಣಯ** ಎಂದು ಹೇಳಬಹುದು. **ಕ** ಎಂದರೇ ಬದಲಾಗದ ಕಾರಣ ಇರುವುದೆಂದು ಹೇಳುತ್ತಾ**, ಕರ್ಮ ಎಂದರೇ ರಹಸ್ಯವಾದ ಬದಲಾಗದ ಕಾರಣ ಇರುವುದೆಂ**ದು ಹೇಳಬಹುದು. ಜೀವಿಯನ್ನು ಸೃಷ್ಟಿಸಿದ ಆತ್ಮಗೆ

ಧರ್ಮವಿದೆ, ಅಂದರೇ ರಹಸ್ಯವಾದ ಬದಲಾಗದ ನಿಯಮ ಇರುವುದು ಆತ್ಮಯೆಂದು ಹೇಳಬಹುದು. ಹಾಗೇ ಜೀವಿಗೆ ಖರ್ಮವಿದೆ. ಅಂದರೇ ರಹಸ್ಯವಾದ ಬದಲಾಗದ ಕಾರಣ ಇರುವುದು ಖರ್ಮಯೆಂದು ಹೇಳಬಹುದು. **ಸೃಷ್ಠಿಸಲ್ಪಟ್ಟ ಜೀವಿಯ ಹಿಂದೆ ಖರ್ಮ ಅಡಗಿದೆ. ಸೃಷ್ಠಿಸಿದ ಆತ್ಮ ಹಿಂದೆ ಧರ್ಮ ಅಡಗಿದೆ**. ಸೃಷ್ಠಿಸಲ್ಪಟ್ಟ ಜೀವಾತ್ಮಗೆ ಖರ್ಮ ಇರುವಾಗ ಆತ್ಮ ಕೂಡಾ ಸೃಷ್ಠಿಸಲ್ಪಟ್ಟವನೇ ಅಲ್ಲವೆ! ಆತನಿಗೆ ಕರ್ಮ ಏಕೆ ಇಲ್ಲ ಎಂದು ಕೆಲವರು ಕೇಳಬಹುದು? ಅದಕ್ಕೆ ನಮ್ಮ ಉತ್ತರ ಏನೆಂದರೇ! ಆತ್ಮ ಸೃಷ್ಠಿಸಲ್ಪಟ್ಟವನಾದರೂ, ತಾನು ಜೀವರೂಪವಾದ ಜಗತ್ತನೆಲ್ಲಾ ಸೃಷ್ಠಿಸುವವನಾಗಿದ್ದಾನೆ, ಆದ್ದರಿಂದ ಆತನಿಗೆ ಕರ್ಮ ಅನುಭವಗಳು ಇಲ್ಲ. **ಸೃಷ್ಠಿಕರ್ತ** ಆಗಿರುವುದರಿಂದ ಕರ್ಮ ಅನುಭವಗಳು **ಆತ್ಮಗೆ** ಇಲ್ಲ ಆದರೆ, ಆತನು ಕೂಡಾ ಪರಮಾತ್ಮನಿಂದ ಸೃಷ್ಠಿಸಲ್ಪಟ್ಟವನು ಆಗಿರುವುದರಿಂದ, ಜೀವಿಗಿರುವ ಕರ್ಮ ಪ್ರಕಾರ ಆತ್ಮ ಕೆಲಸ ಮಾಡಬೇಕಾಗಿದೆ. ಆದರೆ ಜೀವಾತ್ಮ ಮಾತ್ರ ಅನುಭವಿಸಬೇಕಾಗಿದೆ. ಕರ್ಮಗಳ ಪ್ರಕಾರ ಕೆಲಸ ಮಾಡುವವನು ಆತ್ಮನಾಗಿರುವುದರಿಂದ ಆತನನ್ನು ಸೃಷ್ಠಿಸಲ್ಪಟ್ಟವನು ಎಂದು ಹೇಳಬಹುದು. ಜೀವಾತ್ಮ ಆತ್ಮ ಸೃಷ್ಠಿಸಲ್ಪಟ್ಟವರೆ ಹೊರತು, ಜೀವಾತ್ಮ ಯಾವುದನ್ನು ಸೃಷ್ಠಿಸಲಿಲ್ಲ. ಆದ್ದರಿಂದ **ಜೀವಾತ್ಮ** ಕರ್ಮಗಳೆಲ್ಲವುಗಳಲ್ಲಿನ **ಅನುಭವಗಳನ್ನು** ಮಾತ್ರ ಅನುಭವಿಸುತ್ತಿದ್ದಾನೆ. ಈ ವಿಧವಾಗಿ ಧರ್ಮಕ್ಕೂ, ಖರ್ಮಕ್ಕೂ ವಿವರ ಇದೆ. ಜೀವಿಗಳ ಸೃಷ್ಠಿಕರ್ತ ಪರಮಾತ್ಮ ಅಲ್ಲ, ಆದ್ದರಿಂದ ಪರಮಾತ್ಮಗೆ ಧರ್ಮಗಳೇ ಇಲ್ಲ. ಆದರೂ ಪ್ರಕೃತಿಯನ್ನು, ಧರ್ಮಗಳನ್ನು ಸೃಷ್ಠಿಸಿರುವುದಕ್ಕೆ ಆತನು (ಪರಮಾತ್ಮ) ಆತ್ಮ ವೊಂದರ, ಜೀವಿಯೊಂದರ ಧರ್ಮಗಳನ್ನು ವಿಧಿ ವಿಧಾನಗಳನ್ನು ತಿಳಿಸಬೇಕಾದ ಕಾರ್ಯ ಇದೆ. ಆದ್ದರಿಂದ ದೇವರಾದ ಪರಮಾತ್ಮ ಆಗಾಗ ಅವತರಿಸಿ ಆತ್ಮ ಧರ್ಮಗಳನ್ನು ಹೇಳಿಹೋಗುತ್ತಿರುತ್ತಾನೆ.

## 1) ಪ್ರಶ್ನೆ :– ಹಿಂದೂ ಧರ್ಮ ಎಂದರೇನು?

**ಉತ್ತರ :–** ಧರ್ಮ ಎಂದರೇ ರಹಸ್ಯವಾದ ನಿರ್ಣಯಗಳಿಂದ ಕೂಡಿಕೊಂಡಿರುವು

ದೆಂದು ಅರ್ಥ ಅಲ್ಲವೇ! ತಿಳಿಯದ ಧರ್ಮವನ್ನು ತಿಳಿದುಕೊಂಡರೆ ಧರ್ಮದ ಹಿಂದೆ ಅಡಗಿರುವ ನಿಯಮಗಳು ಯಾವುವೋ ತಿಳಿದುಹೋಗುತ್ತದೆ. ಆಗ ಧರ್ಮಗಳಿರುವ ಆತ್ಮವಾಗಲಿ, ಜೀವಾತ್ಮವಾಗಲಿ ತಿಳಿದುಹೋಗುತ್ತದೆ. ಧರ್ಮವನ್ನು ತಿಳಿಯುವುದಕ್ಕೆ ಮನುಷ್ಯನಿಗೆ ಜ್ಞಾನ ಅಗತ್ಯ. ಜ್ಞಾನ ಎಂದರೇ ತಿಳಿಯಲ್ಪಡುವ ವಿಧಾನ ಇರುವುದೆಂದು ಹೇಳಬಹುದು. ಜ್ಞಾನದಿಂದ ಧರ್ಮವನ್ನು ತಿಳಿಯಬಹುದು. ಧರ್ಮ ಮರ್ಮವಾಗಿ ಇದ್ದರೂ ಮರ್ಮವನ್ನು ಛೇಧಿಸುವುದು **ಜ್ಞಾನ**. ಜ್ಞಾನ ವಿಚಕ್ಷಣದಿಂದ ಕೂಡಿಕೊಂಡಿರುತ್ತದೆ. ಜ್ಞಾನ ಮನುಷ್ಯನಿಗೆ ಪ್ರಕೃತಿಯಿಂದ ಲಭಿಸಬೇಕು. ಪ್ರಕೃತಿಯಲ್ಲಿರುವ ಚಂದ್ರನು ಜ್ಞಾನಕ್ಕೆ ಅಧಿಪತಿಯೆಂದು ತಿಳಿಯುತ್ತಿದೆ. ಚಂದ್ರನು ಸರ್ವ ಜ್ಞಾನಗಳಿಗೆ ನಿಧಿಯಂತವನು. ಚಂದ್ರನ ಆಧೀನದಲ್ಲಿರುವ ಜ್ಞಾನವನ್ನು ಚಂದ್ರನು ಕೊಟ್ಟರೇ ಮನುಷ್ಯನಿಗೆ ಲಭ್ಯವಾಗುತ್ತದೆ. **ಮನುಷ್ಯನಲ್ಲಿನ ಕರ್ಮವನ್ನನುಸರಿಸಿ ಪ್ರಪಂಚ ಜ್ಞಾನವನ್ನು, ಮನುಷ್ಯನಲ್ಲಿನ ಶ್ರದ್ಧೆಯನ್ನನುಸರಿಸಿ ದೇವರ ಜ್ಞಾನವನ್ನು ಚಂದ್ರನು ಕೊಡಬಲ್ಲನು**. ಆದ್ದರಿಂದ ಜ್ಞಾನಕ್ಕೆ ಚಂದ್ರನ ಹೆಸರೇ ಇಟ್ಟಿದ್ದಾರೆ. ಮನುಷ್ಯನಿಗಿರುವ ಜ್ಞಾನವನ್ನು **'ಚಂದ'** ಎಂದು ಕರೆಯುತ್ತಾರೆ. ಹಾಗೇ ಮನುಷ್ಯನಿಗಿರುವ ರೂಪವನ್ನು **'ಅಂದ'** ಎನ್ನುತ್ತಾರೆ. ಅಂದ ಕಾಣಿಸುವುದು. ಚಂದ (ಜ್ಞಾನ) ಕಾಣಿಸದಿರುವುದು. ರೂಪಿ ಎಂದರೇ ಅಂದ ಇರುವವನು ಎಂದು ಅರ್ಥ, ಕುರೂಪಿ ಎಂದರೇ ಅಂದ ಇಲ್ಲದವನು (ಅಂದಹೀನನು) ಎಂದು ಅರ್ಥ. ಚಂದ ಇರುವವನು ಅಂದರೇ ಜ್ಞಾನ ಇರುವವನೆಂದು ಅರ್ಥ. ಅಚಂದ ಎಂದರೇ ಜ್ಞಾನ ಇಲ್ಲದವನು ಅಜ್ಞಾನಿ ಎಂದು ಅರ್ಥ. ಚಂದ ಎಂಬ ಮಾತನ್ನು ಎಲ್ಲರೂ ಬಳಸುತ್ತಿರಲಿಲ್ಲ. ಅಂದ, ಚಂದಗಳು ಪ್ರಪಂಚ ಸಂಬಂಧವಾದವೆಂದು ಹೇಳುತ್ತಾ, ದೈವಜ್ಞಾನ ಸಂಬಂಧಕ್ಕೆ ಮಾತ್ರ ಚಂದ್ರನಿಗೆ ಬದಲಿ ಹೆಸರಾದ **'ಇಂದೂ'** ಎಂಬ ಪದವನ್ನು ಬಳಸುತ್ತಿದ್ದರು. **ಇಂದೂ ಜ್ಞಾನ ಎಂದರೇ ದೈವಜ್ಞಾನ** ಎಂದು ಲೆಕ್ಕಿಸುತ್ತಿದ್ದರು. ಸೃಷ್ಠಿಸಲ್ಪಟ್ಟವನಿಗೆ ಧರ್ಮ ಇರುತ್ತದೆ ಎನ್ನುವಂತೆ, ಜೀವಿಯು ಸೃಷ್ಠಿಸಲ್ಪಟ್ಟವನು ಆಗಿರುವುದರಿಂದ ಜೀವಿಗು ಕೂಡಾ ಧರ್ಮಗಳು ಇವೆ. ಅವು ಎಲ್ಲವೂ ಪ್ರಪಂಚ ಸಂಬಂಧ ಜ್ಞಾನ ಆಗಿರುವುದರಿಂದ ದಾನಿನ **'ಚಂದ ಧರ್ಮಗಳು'** ಎಂದು ಹೇಳುತ್ತಿದ್ದರು.

**ದೈವ ಧರ್ಮಗಳನ್ನು 'ಇಂದೂ ಧರ್ಮಗಳು'** ಎನ್ನುತ್ತಿದ್ದರು. ಇಂದೂ ಧರ್ಮವನ್ನು ಇಂದೂ ಜ್ಞಾನದಿಂದಲೇ ತಿಳಿಯಬೇಕೆಂದೂ, ಪ್ರಪಂಚ ಸಂಬಂಧ ಜೀವಿಯ ಧರ್ಮಗಳನ್ನು ಪ್ರಪಂಚ ಜ್ಞಾನದಿಂದಲೇ ತಿಳಿಯಬೇಕೆಂದು ಹೇಳುತ್ತಿದ್ದರು. ಇಂದೂ ಜ್ಞಾನದಿಂದ ತಿಳಿಯಲ್ಪಡುವ ಆತ್ಮ ಧರ್ಮಗಳನ್ನು ಇಂದೂ ಧರ್ಮ ಗಳೆಂದು ಹೇಳುತ್ತಿದ್ದರು.

## 2) ಪ್ರಶ್ನೆ :– ಇಂದೂ ಧರ್ಮಗಳನ್ನು ದೇವರ ಧರ್ಮ ಗಳೆಂದು ಒಂದುಕಡೆ, ಹಾಗೇ ಆತ್ಮ ಧರ್ಮಗಳೆಂದು ಮತ್ತೊಂದು ಕಡೆ ಹೇಳಿದ್ದಾರೆ. ದೇವರ ಧರ್ಮಗಳೆಂದು ಬಹಳಸಲ ಹೇಳಿದ್ದಾರೆ. ವಾಸ್ತವವಾಗಿ ಇಂದೂ ಧರ್ಮಗಳು ದೇವರ ಧರ್ಮಗಳಾ, ಆತ್ಮ ಧರ್ಮಗಳಾ?

**ಉತ್ತರ :–** ನಾನು ಇಂದೂ ಧರ್ಮವನ್ನು ಕುರಿತು ಪೂರ್ತಿ ಹೇಳದೆಯೇ ಪುನಃ ಇನ್ನೊಂದು ಪ್ರಶ್ನೆ ಹಾಕಿದ್ದೀರ. ಸರಿ ನೀನು ಕೇಳಿರುವುದಕ್ಕು ಕೂಡಾ ವಿವರವನ್ನು ಹೇಳುತ್ತೇನೆ ಕೇಳು. **ಮನುಷ್ಯರಿಂದ ಆರಾಧಿಸಲ್ಪಡುವ ದೇವರು ಒಬ್ಬನೇ** ಇದ್ದಾನೆ. ಯಾರಾದಾರೆ ಮನುಷ್ಯರನ್ನು ಸೃಷ್ಠಿಸಿದ್ದಾನೋ ಆತನೆ ಮನುಷ್ಯರಿಗೆ ದೇವರು. ಮೊದಲ ಸೃಷ್ಠಿಕರ್ತನಾದ ಪರಮಾತ್ಮ ಪ್ರಕೃತಿಗೆ ದೇವರು, ಹಾಗೇ ಆತ್ಮಗು ಕೂಡಾ ದೇವರೇ. ಪರಮಾತ್ಮನಿಗೆ ಧರ್ಮಗಳು ಇರುವುದಿಲ್ಲ. ಧರ್ಮಗಳು ಇದ್ದರೆ ನಿಯಮಗಳಿಗೆ ಕಟ್ಟುಬಿದ್ದಿರುವವನಾಗುತ್ತಾನೆ. ಶಾಸನಗಳಿಂದ ಕೂಡಿದ ಶಾಸ್ತ್ರಕ್ಕೆ ಬದ್ಧನಾಗಿರುತ್ತಾನೆ. **ಯಾವ ಸೂತ್ರಕ್ಕೂ, ಯಾವ ಶಾಸನಕ್ಕೂ, ಯಾವ ಧರ್ಮಕ್ಕೂ ಸಂಬಂಧ ಇಲ್ಲದವನು ಪ್ರಕೃತಿಯನ್ನು ಸೃಷ್ಠಿಸಿದ ಪರಮಾತ್ಮ.** ಆದ್ದರಿಂದ ಪರಮಾತ್ಮನನ್ನು ಧರ್ಮಾತೀತನು ಎಂದು ಹೇಳುತ್ತಾರೆ. 'ಭಕ್ತಿಯೋಗ' ಎನ್ನುವುದರಲ್ಲಿ ಮೊದಲ ದೇವರಾದ ಪರಮಾತ್ಮನನ್ನು ಶರಣುಬೇಡಬಹುದು. ಆತನಿದ್ದಾನೆಂದು ತಿಳಿದವನು ***"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ"*** ಎಂದು ಪ್ರಥಮ ದೈವಗ್ರಂಥವಾದ ಭಗವದ್ಗೀತೆಯಲ್ಲಿ ಮೋಕ್ಷ ಸನ್ಯಾಸ

ಯೋಗವೆಂಬ ಅಧ್ಯಾಯದಲ್ಲಿ 66ನೇ ಶ್ಲೋಕದಲ್ಲಿ ಈ ವಿಷಯವನ್ನು ಹೇಳಿದ್ದಾರೆ. ಆದರೆ ಮೂರು ಆತ್ಮಗಳ ವಿಷಯವನ್ನು ತಿಳಿದವನು ಮೊದಲ ದೇವರನ್ನು ವಿನಯದಿಂದ ಶರಣು ಬೇಡಿದರೂ, ಆತನು ಎರಡನೆ ಆತ್ಮನನ್ನು ದೇವರಾಗಿ ತಿಳಿದು ಆರಾಧಿಸಬೇಕಾಗಿರುತ್ತದೆ. ಇದೇ ವಿಷಯವನ್ನೇ ಅಂತಿಮ ದೈವಗ್ರಂಥ 16–51 ರಲ್ಲಿ ಕೂಡಾ ಹೀಗೆ ಹೇಳಿದ್ದಾರೆ. ದೇವರು ಈ ವಿಧವಾಗಿ ಹೇಳುತ್ತಿದ್ದಾನೆ. **"ಇಬ್ಬರು ದೇವರುಗಳನ್ನು ಆರಾಧಿಸಬೇಡಿ. ಆರಾಧ್ಯ ದೈವ ಆತ್ಮ ಒಬ್ಬನೇ. ಆತನನ್ನು ಆರಾಧಿಸಿರಿ, ನನಗೆ ಭಯಪಡಿ"** ಭಗವದ್ಗೀತೆಯಲ್ಲಿ ಹೇಳಿದ ಬ್ರಹ್ಮಯೋಗ, ಕರ್ಮಯೋಗ, ಎರಡೂ ಆತ್ಮನನ್ನು ಆಧಾರವಾಗಿ ಮಾಡಬೇಕಾದ್ದೆ.

ಮನುಷ್ಯರಾದವರು ಯಾವ ಮತದಲ್ಲಿ ಹುಟ್ಟಿದ್ದರೂ ಅವರು ಆತ್ಮವನ್ನು ಕುರಿತಾದ ಧರ್ಮಗಳನ್ನು ತಿಳಿಯಬೇಕಾದ್ದೆ. **ಭಗವದ್ಗೀತೆ**ಯಲ್ಲಿ ಹೇಳಿದ ಬ್ರಹ್ಮ, ಕರ್ಮಯೋಗಗಳನ್ನು ಉಳಿದ ಎರಡು ದೈವಗ್ರಂಥಗಳಲ್ಲಿ ಕೂಡಾ ಹೇಳಿದ್ದಾರೆ. ಉಳಿದ ಎರಡು ಗ್ರಂಥಗಳಾದ **ಬೈಬಲ್, ಖುರಾನ್**ಗಳಲ್ಲಿ ಬೇರೆ ಭಾಷೆಯಲ್ಲಿ, ಬೇರೆ ಬರಹದಲ್ಲಿ, ಬೇರೆ ಹೆಸರುಗಳಲ್ಲಿ ಬರೆದಿರುವುದರಿಂದ ಭಗವದ್ಗೀತೆಯಲ್ಲಿ ಹೇಳಿರುವ **ಬ್ರಹ್ಮ, ಕರ್ಮ, ಭಕ್ತಿಯೋಗಗಳಿ**ವೆಯೆಂದು ಯಾರೂ ತಿಳಿಯಲಾರದೆ ಹೋಗಿದ್ದಾರೆ. ಯಾವ ಮತದಲ್ಲಾದರೂ ದೇವರನ್ನು ಕುರಿತು ತಿಳಿಯಬೇಕೆಂದರೇ ಆತನಿಗೆ ಆ ಮತಗ್ರಂಥವೆಂದು ಹೇಳಿಕೊಳ್ಳುವ ದೈವಗ್ರಂಥದಲ್ಲಿನ ಜ್ಞಾನ ತಿಳಿಯಬೇಕು. ಅಷ್ಟೇಅಲ್ಲದೆ ಗ್ರಂಥದಲ್ಲಿನ ಜ್ಞಾನ ತಿಳಿದ ಜ್ಞಾನಿ ಎನಿಸಿಕೊಂಡ ನಂತರ ಆತನು ತಿಳಿದ ಜ್ಞಾನದ ಪ್ರಕಾರ ನಡೆಯಬೇಕು. ಹಾಗೆ ನಡೆದಾಗ ಆತನು ತನಗೆ ತಿಳಿಯದೆಯೇ ಯೋಗಗಳನ್ನು ಆಚರಿಸಿದಂತಾಗುತ್ತದೆ. ಮೂರು ದೈವಗ್ರಂಥಗಳಲ್ಲಿಯೂ ದೇವರ ಧರ್ಮಗಳನ್ನು ಕುರಿತು ಹೇಳಿದ್ದಾರೆ. **ಭಗವದ್ಗೀತೆಯಲ್ಲಿ ಆತ್ಮಯೆಂದು ಹೇಳಿದ ಹೆಸರನ್ನು ಒಂದು ಗ್ರಂಥದಲ್ಲಿ ತಂದೆಯೆಂದು, ಮತ್ತೊಂದು ಗ್ರಂಥದಲ್ಲಿ ಅಲ್ಲಾಹ್‌ಯೆಂದು ಹೇಳಿದ್ದಾರೆ. ಆತ್ಮ** ಎಂದರೂ, **ತಂದೆ**ಯೆಂದರೂ, **ಅಲ್ಲಾಹ್** ಎಂದರೂ ಮೂರು ಶರೀರದೊಳಗಿನ ದೇವರ ಹೆಸರುಗಳೆಂದೇ ಹೇಳಬಹುದು. ಆದ್ದರಿಂದ ದೇವರ ಧರ್ಮಗಳೆಂದರೂ,

ಆತ್ಮ ಧರ್ಮಗಳೆಂದರೂ ಒಂದೇಯೆಂದು, ಆತ್ಮ ಧರ್ಮಗಳನ್ನೇ ಹಿಂದೂ ಧರ್ಮಗಳೆಂದು ಹೇಳುತ್ತಿದ್ದೇವೆಂದು ತಿಳಿಯಬೇಕು. ಯಾವ ಮತದಲ್ಲಿ ದೇವರ ಜ್ಞಾನವಿದ್ದರೂ, ಯಾವ ಮತದಲ್ಲಿನ ಜ್ಞಾನಿಯಾದರೂ ಅವನು **ಆತ್ಮ ಧರ್ಮಗಳನ್ನು** ತಿಳಿದವನಾಗಿರುವುದರಿಂದ ಅವನನ್ನು **'ಹಿಂದೂ'** ಎಂದು ಕರೆಯಬೇಕು. ಹಿಂದೂ ಧರ್ಮ ಎಂದರೇ ದೇವರ ಧರ್ಮ ಅಥವಾ ಆತ್ಮ ಧರ್ಮ ಆಗಿರುವುದರಿಂದ, ಆತ್ಮ ಧರ್ಮವನ್ನು ಹಿಂದೂ ಧರ್ಮಗಳೆಂದು ಹೇಳುವುದರಿಂದ, ಪ್ರತಿ ಮತದಲ್ಲಿಯೂ ಜ್ಞಾನದ ಮೂಲಕ ಧರ್ಮಗಳನ್ನು ತಿಳಿದವನನ್ನು 'ಹಿಂದೂ ಧರ್ಮ ತಿಳಿದವನು' ಎಂದು ಹೇಳಬಹುದು.

## 3) ಪ್ರಶ್ನೆ :- ನೀವು ಮೊದಲು 'ಹಿಂದೂ' ಎನ್ನುವ ಪದವನ್ನು ಹೇಳಿ ನಂತರ 'ಇಂದೂ' ಎನ್ನುವ ಪದವನ್ನು ಕೂಡಾ ಹೇಳಿದ್ದೀರ. ನೀವು ಹಾಗೆ ಏಕೆ ಹೇಳಿದ್ದೀರಾ? ಎರಡು ಪದಗಳಲ್ಲಿ ಯಾವುದು ಸತ್ಯವಾದ ಪದ ಇಂದೂನಾ? ಅಥವಾ ಹಿಂದೂನಾ?

**ಉತ್ತರ :-** ಪೂರ್ವಕಾಲದಲ್ಲಿ **'ದೃಷ್ಠಿ'** ಎಂಬ ಪದವನ್ನು ಕಣ್ಣಿನೋಟಕ್ಕೆ ಹೇಳುತ್ತಿದ್ದರು. ಕಾಲಕ್ರಮವಾಗಿ ದೃಷ್ಠಿ ಎಂಬ ಪದ **'ಜಿಷ್ಠಿ'** ಎಂಬ ಪದವಾಗಿ ಬದಲಾಗಿಹೋಗಿದೆ. ಎರಡು ಅಕ್ಷರಗಳ 'ದೃಷ್ಠಿ' ಎನ್ನುವ ಪದದಲ್ಲಿ ಮೊದಲ ಅಕ್ಷರ ಬೇರೆ ವಿಧವಾಗಿ ಬದಲಾಗಿಹೋಗಿ ಎರಡನೆ ಅಕ್ಷರ ಹಾಗೇ ಉಳಿದುಹೋಗಿದೆ. ದೃಷ್ಠಿ ಮೊದಲು, ನಂತರ ಜಿಷ್ಟಿ. ದೃಷ್ಠಿ ಎಂದರೂ, ಜಿಷ್ಠಿ ಎಂದರೂ ಎರಡರ ಅರ್ಥ **'ನೋಟ'** ಎಂದು ಹೇಳುತ್ತಿದ್ದೇವೆ. ಅರ್ಥದಲ್ಲಿ ಬದಲಾವಣೆ ಇಲ್ಲದಿದ್ದರೂ, ಪದವನ್ನು ಹೇಳುವುದರಲ್ಲಿ ಒಂದು ಅಕ್ಷರ ಬದಲಾಗಿಹೋಗಿ ದೃಷ್ಠಿ ಸ್ವಲ್ಪ ಜಿಷ್ಠಿಯಾಗಿ ಬದಲಾಗಿಹೋಗಿದೆ. ಅದೇ ವಿಧವಾಗಿ ಮೊದಲು **ಇಂದೂ** ಎನ್ನುವ ಹೆಸರು ಕಾಲಕ್ರಮೇಣ ಒಂದು ಅಕ್ಷರ ಬದಲಾವಣೆಯಾಗಿ, ಇಂದೂ ಸ್ವಲ್ಪ ಹಿಂದೂವಾಗಿ ಹೇಳಲ್ಪಡುತ್ತಿದೆ. ಇಂದೂ ಎಂದರೂ, ಹಿಂದೂ ಎಂದರೂ ಎರಡು ಶಬ್ದಗಳು ಒಂದೇ ವಿಧವಾಗಿ

ಹೇಳುತ್ತಿದ್ದರೂ ಅದರಲ್ಲಿ ಒಂದು ಅಕ್ಷರ ಬದಲಾವಣೆಯಾಗಿ ಮತ್ತೊಂದು ಅಕ್ಷರ ಹಾಗೇ ಇದ್ದು ಹೋಗಿದೆ. 'ದೃಷ್ಠಿ' ಎನ್ನುವ ಪದದಲ್ಲಿ ಮೊದಲ ಅಕ್ಷರ ಪೂರ್ತಿಯಾಗಿ ಬೇರೆ ಅಕ್ಷರವಾಗಿಹೋಗಿದೆ. ಇಲ್ಲಿ ಇಂದೂ ಶಬ್ದದಲ್ಲಿ ಮೊದಲ ಅಕ್ಷರ ಸ್ವರದಿಂದ ವ್ಯಂಜನಕ್ಕೆ ಬದಲಾಗಿದೆ. ಆದ್ದರಿಂದ ಅಕ್ಷರ ಬದಲಾವಣೆ ನಡೆದರೂ, ಶಬ್ದ ಮಾತ್ರ ಮೊದಲಿನಂತೇ ಹೇಳಲ್ಪಡುತ್ತಿದೆ.

ಮೊದಲಿದ್ದ ಇರುವ **'ಇಂದೂ'** ಎನ್ನುವ ಶಬ್ದಕ್ಕೆ **'ಜ್ಞಾನಿ'** ಎಂದು ಅರ್ಥವಿದೆ. ಅಷ್ಟೇಅಲ್ಲದೆ ಇಂದೂ ಎಂದರೇ ಚಂದ್ರನು ಎಂದು ಅರ್ಥವನ್ನು ಸೂಚಿಸುತ್ತಿದೆ. ನಂತರ ಬದಲಾದ ಹಿಂದೂ ಎನ್ನುವ ಶಬ್ದಕ್ಕೆ ಯಾವ ಅರ್ಥ ಇಲ್ಲದಂತೆ ಹೋಗಿದೆ. ದೃಷ್ಠಿ ಶಬ್ದ ಪೂರ್ತಿ ಅಕ್ಷರದೊಂದಿಗೆ ಸಹಾ ಬದಲಾಗಿಹೋಗಿ ದೃಷ್ಠಿ, ಜಿಷ್ಠಿ ಆದರೂ ಅರ್ಥ ಮಾತ್ರ ಬದಲಾಗದಂತೆ ಎರಡಕ್ಕು ನೋಟ ಎಂದೇ ಇದೆ. ಇಂದೂ ಶಬ್ದದಲ್ಲಿ ಮೊದಲ ಅಕ್ಷರ ವ್ಯಂಜನವಾಗಿ ಬದಲಾಗಿ 'ಇಂದೂ' ಹೋಗಿ 'ಹಿಂದೂ' ಆದರೂ ಹೇಳುವ ಶಬ್ದದಲ್ಲಿ ವ್ಯತ್ಯಾಸ ಇಲ್ಲದಿದ್ದರೂ ಅರ್ಥದಲ್ಲಿ ಮಾತ್ರ ಸಂಬಂಧ ಇಲ್ಲದಂತೆ ಹೋಗಿದೆ. ಇಂದೂ ಎಂದರೆ ಜ್ಞಾನಿ ಎಂದೂ ಅಥವಾ ಚಂದ್ರನು ಎಂದೂ ಅರ್ಥವಿದ್ದರೂ ಹಿಂದೂ ಎಂಬ ಪದಕ್ಕೆ ಯಾವುದೇ ಅರ್ಥವಿಲ್ಲದಂತೆ ಹೋಗಿದೆ. ಆದರೂ ಈ ದಿನ ಸ್ವಲ್ಪವಾದರೂ ವಿಚಕ್ಷಣ ಇಲ್ಲದವರು ಕೆಲವರು ತಮ್ಮನ್ನು ಅರ್ಥವಿಲ್ಲದ ಹೆಸರಿನಿಂದ ಹಿಂದೂಗಳೆಂದು ಹೇಳಿಕೊಳ್ಳುತ್ತಿದ್ದಾರೆ. ಇಂದೂ ಎನ್ನುವ ಪದ ಹಿಂದೂವಾಗಿ ಸುಮಾರು 150 ವರ್ಷಗಳಿಂದ ಪೂರ್ತಿಯಾಗಿ ಬದಲಾಗಿ, 200 ವರ್ಷಗಳ ಕೆಳಗೆ ಆ ದಿನ ಆಂಗ್ಲ ಪಾಲಕರು ಇಂದೂ ಎಂದು ಸರಿಯಾಗಿ ಹೇಳಲಾರದೆ ಹಿಂದೂಗಳು ಎಂದು ಹೇಳುವುದರಲ್ಲಿ ಸ್ವಲ್ಪಸ್ವಲ್ಪವಾಗಿ ಬದಲಾಗುತ್ತಾ ಬಂದು, 150 ವರ್ಷಗಳಿಗೆ ಪೂರ್ತಿಯಾಗಿ ಬದಲಾಗಿಹೋಗಿದೆ. ಹಾಗೆ ಆಂಗ್ಲಪಾಲಕರು ಹೇಳುವುದಕ್ಕು ಕೂಡಾ ಒಂದು ಕಾರಣವಿದೆ. ಅದು ಏನೆಂದರೆ! ಆಗಾಗಲೇ ಭಾರತದೇಶದಲ್ಲಿ ಪ್ರವೇಶಿಸಿ ನಿವಾಸ ಏರ್ಪಡಿಸಿಕೊಂಡ ಮುಸ್ಲಿಮ್‌ರು ತಮ್ಮ ಅರಬ್ಬಿ ಭಾಷೆಯಲ್ಲಿ 'ಹಿಂದೂ ಎಂದರೇ

ಕಳ್ಳ ಎಂದೂ' ಬೇವಕೂಬ್ ಎಂದೂ, ತಿಳಿವಳಿಕೆ ಇಲ್ಲದವನು' ಎಂದೂ ಅರ್ಥ ಬರುವುದರಿಂದ ಆ ದಿನದ ಮುಸ್ಲಿಮ್‌ರು ಅದೇ ಕೆಲಸವಾಗಿ ಸ್ವರ ಇರುವ **'ಇಂದೂ'** ಎಂದು ಬರೆಯದೆ, ವ್ಯಂಜನ ಇರುವ **'ಹಿ'** ದೊಂದಿಗೆ ಹಿಂದೂಗಳು ಎಂದು ಬರೆಯುವುದರಿಂದ ಎಲ್ಲರೂ ಹಾಗೇ ಬರೆಯುತ್ತಿದ್ದಾರೆ. ವಾಸ್ತವವಾದ ವಿಷಯವನ್ನು ನಾವು ಹೇಳಿದರೂ, ಈ ದಿನ ಕೇಳುವ ಸ್ಥಿತಿಯಲ್ಲಿ ಇಂದೂಗಳು (ಹಿಂದೂಗಳು) ಇಲ್ಲ. ಹಿಂದೂ ಎನ್ನುವ ಪದಕ್ಕೆ ಅರ್ಥ ಏನಿದೆ? ಎಂದು ಭಾರತ ಸರ್ಕಾರವನ್ನು ಒಬ್ಬ ನ್ಯಾಯವಾದಿ ಪ್ರಶ್ನಿಸಿದಾಗ ಅದಕ್ಕೆ ಸರ್ಕಾರದ ಕಡೆಯಿಂದ ಬಂದಿರುವ ಉತ್ತರವನ್ನು ಕೆಳಗೆ ನೋಡಬಹುದು.

## 'ಹಿಂದೂ ಪದಕ್ಕೆ ನಿರ್ವಚನ ತಿಳಿದಿಲ್ಲ'
## ಇಂದೂ ದೇಶವೇ ಇಂಡಿಯಾ!

**ಇಂಡೋರ್ :** ರಾಜ್ಯಾಂಗ, ನ್ಯಾಯಪರವಾಗಿ ಹಿಂದೂ ಪದಕ್ಕೆ ನಿರ್ವಚನ ತಿಳಿಯದೆಂದು ಕೇಂದ್ರ ಹೋಂಶಾಖೆ ತಿಳಿಸಿದೆ. ಹಿಂದೂ ಪದದ ನಿರ್ವಚನ ಹೇಳಬೇಕೆಂದು ಮಧ್ಯಪ್ರದೇಶ್‌ಗೆ ಸೇರಿದ ಚಂದ್ರಶೇಖರ್ ಗೌರ್ ಎನ್ನುವ ವ್ಯಕ್ತಿ ಸಮಾಚಾರ ಹಕ್ಕು ಕಾನೂನಿಗೆ ಮಾಡಿಕೊಂಡ ದರಖಾಸ್ತುಗೆ(ಅರ್ಜಿ) ಬದಲಿಕೊಡುತ್ತಾ ಹೋಂಶಾಖೆ ಮೇಲಿನ ವಿಧವಾಗಿ ಸ್ಪಂದಿಸಿದೆ. ಆ ಪದಕ್ಕೆ ಸಂಬಂಧಿಸಿದ ಎಂತಹ ಸಮಾಚಾರ ಇಲ್ಲವೆಂದು ಕೇಂದ್ರ ಪೌರಸಂಬಂಧ ಶಾಖೆ ಅಧಿಕಾರಿ ಮನವಿ ಮಾಡಿಕೊಂಡಂತೆ ಕೇಂದ್ರ ತಿಳಿಸಿದೆ. ಎಂತಹ ನಿರ್ವಚನ ಇಲ್ಲದಿರುವಾಗ ಇಂತಹ ವರ್ಗದವರು ಹಿಂದೂಗಳೆಂದು ಹೇಗೆ ನಿರ್ಧಾರಿ ಸುತ್ತಿದ್ದಾರೆಂದು. ದೇಶದಲ್ಲಿ ಹಿಂದೂಗಳು ಮೇಜಾರಿಟಿಯಾಗಿ ಇದ್ದಾರೆಂದು ಹೇಗೆ ಹೇಳುತ್ತಿದ್ದಾರೆಂದು ಗೌರ್ ಪ್ರಶ್ನಿಸಿದ್ದಾರೆ. (ದಿನಾಂಕ : 12. 10. 2015, ಸಾಕ್ಷಿ ನ್ಯೂಸ್‌ಪೇಪರು)

## ಇಂದೂ ದೇಶವೇ ಇಂಡಿಯಾ!

ಹಿಮಾಲಯಗಳಿಗು, ವಿಂಧ್ಯಪರ್ವತಗಳಿಗು ಮಧ್ಯದಲ್ಲಿ ಆದಿನದ ಆರ್ಯವರ್ತನೆ (ಆರ್ಯರ ಭೂಭಾಗ) ಎಲ್ಲಿ ಇದೆಯೋ ನಮ್ಮ ದೇಶಪಟದಲ್ಲಿ ನೀನು ನೋಡಿದ್ದೀಯಾ. ಅದು ಬಾಲ ಚಂದ್ರಾಕಾರದಲ್ಲಿ ಇರುವಂತೆ ಕಾಣಿಸುತ್ತದೆ. ಅದಕ್ಕೇ ಆರ್ಯಾವರ್ತನಕ್ಕೆ ಇಂದೂದೇಶವೆಂದು ಹೆಸರು ಬಂದಿದೆ. ಇಂದೂ ದೇಶವೇ ಹಿಂದೂದೇಶವಾಗಿದೆ.

ರಾಮಾಯಣ ಹುಟ್ಟಿದ ಧೀರ್ಘ ಕಾಲಕ್ಕೆ ಮಹಾಭಾರತ ಹುಟ್ಟಿದೆ. ಅದು ರಾಮಾಯಣಕ್ಕಿಂತ ದೊಡ್ಡ ಗ್ರಂಥ. ಅದರಲ್ಲಿ ಹೇಳಿರುವುದು ಆರ್ಯ ದ್ರಾವಿಡ ಯುದ್ಧವಲ್ಲ. ಆರ್ಯರ ಮಧ್ಯ ಏರ್ಪಟ್ಟ ಕುಟುಂಬ ಕಲಹವೇ ಭಾರತಕಥೆ. ಭಾರತದಲ್ಲಿ ಹೇಳಿದ ಕಥೆಗಳು, ಧರ್ಮಗಳು ಅಷ್ಟಿಷ್ಟಲ್ಲ. ಅವು ಬಹಳ ಸುಂದರವಾಗಿ, ಗಂಭೀರವಾಗಿ ಇರುತ್ತವೆ. ಇವೆಲ್ಲವುಗಳಿಗಿಂತ ದೊಡ್ಡದಾದ ಭಗವದ್ಗೀತೆ ಎಂಬ ಮಹಾ ಗ್ರಂಥ ಮಹಾಭಾರತದಲ್ಲಿ ಇರುವ ಕಾರಣದಿಂದ ಅದು ನಮ್ಮೆಲ್ಲರಿಗೂ ಪ್ರಿಯತಮವಾದದ್ದಾಗಿದೆ. ಸಾವಿರಾರು ವರ್ಷಗಳ ಕೆಳಗೇ ನಮ್ಮ ದೇಶದಲ್ಲಿ ಇಂತಹ ವಿಶೇಷವಾದ ಗ್ರಂಥಗಳು ಹುಟ್ಟಿವೆ. ಮಹಾನುಭಾವರೇ ಇವುಗಳನ್ನು ಬರೆದಿರುತ್ತಾರೆ. ಈ ಗ್ರಂಥಗಳು ಹುಟ್ಟಿ ಇಷ್ಟುಕಾಲ ಕಳೆದರೂ ಅವುಗಳನ್ನು ಕುರಿತು ತಿಳಿದುಕೊಳ್ಳದಂತಹ ಮಕ್ಕಳು, ಪ್ರಯೋಜನವನ್ನು ಪಡೆಯದ ಹಿರಿಯರಂತೂ ಇರುವುದಿಲ್ಲ.

ನೆಹ್ರೂ ಇಂದಿರಗೆ ಬರೆದ ಲೇಖನೆಯಿಂದ

ಇವೆಲ್ಲವೂ ಗಮನಿಸಿದ ನಂತರ ಅರ್ಥವಿಲ್ಲದ **ಹಿಂದೂ** ಎನ್ನುವುದಕ್ಕಿಂತ ಅರ್ಥವಿರುವ **ಇಂದೂ** ಎಂದು ಬರೆಯುವುದು ಒಳ್ಳೆಯದು. ಸೋಮವಾರ ಚಂದ್ರನ ವಾರವೆಂದು ಹೇಳಬಹುದು. ಆದಿವಾರವನ್ನು ಸೂರ್ಯನ ದಿನ ಎಂದು ಹೇಳುವುದು ಸಹಜ. ಆದ್ದರಿಂದ ಪೂರ್ವದಿಂದ ಆದಿವಾರವನ್ನು ರವಿವಾರ ಎಂದೂ, ಸೋಮವಾರವನ್ನು ಇಂದೂವಾರ ಎಂದು ಬರೆಯುತ್ತಿದ್ದರು.

ಈ ಮಧ್ಯಕಾಲದಲ್ಲಿ 2017 ಡಿಸೆಂಬರ್ 15ನೇ ತಾರೀಖಿನಿಂದ 19ನೇ ತಾರೀಖಿನ ವರೆಗು ತೆಲಂಗಾಣ ರಾಷ್ಟ್ರ ಪ್ರಭುತ್ವ ಸಮಕ್ಷಮದಲ್ಲಿ, ಹೈದಾರಬಾದ್‌ನಲ್ಲಿ **"ಪ್ರಪಂಚ ತೆಲುಗು ಮಹಾ ಸಭೆಗಳು 2017ರಲ್ಲಿ"** ನಡೆದಾಗ ಸ್ವಚ್ಛವಾದ ತೆಲುಗು ಭಾಷೆಯನ್ನು ಅನುಸರಿಸಿ ಸೋಮವಾರವನ್ನು **'ಇಂದೂ ವಾರ'** ಎಂದು ಬರೆಯುವುದು ನಡೆದಿದೆ.

| ವಾರಗಳು –7 | |
|---|---|
| **ವಾರಗಳ ಹೆಸರುಗಳು** | **ತೆಲುಗು ಹೆಸರುಗಳು** |
| 1. ಆದಿವಾರ | 1. ರವಿ ವಾರ |
| 2. ಸೋಮವಾರ | 2. ಇಂದೂ ವಾರ |
| 3. ಮಂಗಳವಾರ | 3. ಕುಜವಾರ |
| 4. ಬುಧವಾರ | 4. ಬುಧವಾರ |
| 5. ಗುರುವಾರ | 5. ಬೇಸ್ತವಾರ |
| 6. ಶುಕ್ರವಾರ | 6. ಶುಕ್ರವಾರ |
| 7. ಶನಿವಾರ | 7. ಶನಿವಾರ |

**ಇಂದೂ** ಎಂದರೇ **ಚಂದ್ರನೆಂದು** ಅವರ ಭಾವ. ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಜ್ಞಾನಕ್ಕೆ ಅಧಿಪತಿ ಚಂದ್ರನು ಎಂದು ಇರುವುದರಿಂದ ಜ್ಞಾನದಿಂದ ತಿಳಿಯುವ ಧರ್ಮಗಳನ್ನು ಇಂದೂ ಧರ್ಮಗಳೆಂದು ಹೇಳುತ್ತಿದ್ದೇವೆ. ಇಂದೂ ಎಂದು ಹೇಳಿದರೆ ಅರ್ಥ ಸರಿಹೋಗುತ್ತದೆ. ಹಿಂದೂ ಎಂದು ಹೇಳಿದರೆ ಅರ್ಥ ಇಲ್ಲದಂತೆ ಹೋಗುತ್ತದೆ. ಪೂರ್ವಕಾಲದಲ್ಲಿ ಪ್ರಪಂಚ ದೇಶಗಳಿಗೆಲ್ಲಾ ಜ್ಞಾನ ಇರುವ ದೇಶ ಭಾರತದೇಶವೇ ಆಗಿರುವುದರಿಂದ ಭಾರತದೇಶವನ್ನು **'ಇಂದೂ ದೇಶ'** ಎಂದು ಹೇಳುತ್ತಿದ್ದರು. ಅಷ್ಟೇಅಲ್ಲದೆ ಜ್ಞಾನವಿರುವ ಸ್ತ್ರೀಯನ್ನು ಇಂದೂಮತಿ ಎಂದು ಹೇಳುತ್ತಿದ್ದರು ಆದರೆ, ಹಿಂದೂಮತಿ ಎಂದು

ಹೇಳುವವರಲ್ಲ. ಈಗಲೂ ಕೂಡಾ 'ಇಂದೂಮತಿ' ಎಂದು, ಇಂದಿರ ಎಂದು ಹೆಸರಿರುವುದನ್ನು ನೀವು ಅಲ್ಲಲ್ಲಿ ನೋಡಬಹುದು. ಎಷ್ಟು ವಿಧಗಳಲ್ಲಿ ನೋಡಿದರೂ ಪೂರ್ವದಲ್ಲಿ ತೆಲುಗು ಭಾಷೆಯೊಂದರ ಅರ್ಥದ ಪ್ರಕಾರ **'ಇಂದೂ'** ಎಂಬ ಪದವನ್ನು ಸೇರಿಸಿ **ಇಂದೂಧರ್ಮ** ಎಂದೂ, **ಇಂದೂ** ಎಂದೂ ಹೇಳುವುದು ಸರಿಯಾದುದು, ಹಿಂದೂ ಧರ್ಮ ಎಂದಾಗಲಿ, ಹಿಂದೂ ಎಂದಾಗಲಿ ಹೇಳುವುದು ತಪ್ಪು.

**4) ಪ್ರಶ್ನೆ :– ನೀವು ಹೇಳುವುದು ಸತ್ಯವೇಯೆಂದು ನಾವು ನಂಬಬಹುದು. ಆದರೆ ಒಬ್ಬ ಸ್ವಾಮೀಜಿಯವರು ಹಿಂದೂ ಎನ್ನುವ ಪದವೇ ಸರಿಯಾದುದೆಂದು, ಇಂದೂ ಎಂದು ಹೇಳುವುದು ತಪ್ಪುಯೆಂದು ಹೇಳುತ್ತಾ, ಹಿಂದೂ ಎನ್ನುವ ಪದಕ್ಕೆ ಅರ್ಥವನ್ನು ಹೇಳುತ್ತಾ ಹೀಗೆ ಹೇಳಿದ್ದಾರೆ. ಹಿಂ ಎಂದರೇ ಪಾಪ ಎಂದೂ, ದೂ ಎಂದರೇ ನಾಶವೆಂದು ಹಿಂದೂ ಎಂದರೇ ಪಾಪವನ್ನು ನಾಶ ಮಾಡುವುದು ಎಂದು, ಹಿಂದೂ ಎಂದರೇ ಪಾಪವನ್ನು ನಾಶ ಮಾಡುವವನು ಎಂದೂ ಅಥವಾ ಪಾಪ ನಾಶವಾದವನು ಎಂದೂ ಹೇಳುತ್ತಿದ್ದಾನೆ. ಈ ಅರ್ಥವನ್ನು ಕೇಳುತ್ತಲೇ ಇದು ಸರಿಯಾದ ವಿವರಣೆ ಅಲ್ಲವೆಂದು, ಶಾಸ್ತ್ರಬದ್ಧವಾದ ಅರ್ಥ ಅಲ್ಲವೆಂದು, ಇರುವ ಅರ್ಥವನ್ನು ಬಿಟ್ಟು ಹಾಕಿ ಇಲ್ಲದಿರುವುದನ್ನು ತಂದು ಅಂಟಿಸಿದಂತಿದೆಯೆಂದು ನಮಗೆ ತಿಳಿಯುತ್ತಿದೆ. ಇದಕ್ಕೆ ನೀವು ಏನು ಹೇಳುತ್ತೀರಾ?**

**ಉತ್ತರ :–** ಸ್ವಾಮೀಜಿಗಳು ಯಾರು ಹೇಳಿದರೂ ಕೇಳಬೇಕಾಗಿದ್ದೆ, ಅದನ್ನು ತಪ್ಪು ಎಂದು ಅವರಿಗೆ ಹೇಳಬಾರದು. ಶಾಸ್ತ್ರಬದ್ಧವಾದುದು ಅಲ್ಲದಿದ್ದರೆ ಯಾರು

ಹೇಳಿದರೂ ಅದನ್ನು ಬಿಟ್ಟು ಹಾಕಬೇಕಾಗಿದ್ದೆ. ಶಾಸ್ತ್ರಬದ್ಧವಾದ ಸತ್ಯವಾದ ಅರ್ಥವಾದರೆ ಅದನ್ನು ಯಾರು ಹೇಳಿದರೂ ಗ್ರಹಿಸಬೇಕಾದ್ದೆ. ಇಲ್ಲಿ ಸ್ವಾಮೀಜಿ ಹೇಳಿದ ಉತ್ತರದಲ್ಲಿ ಪಾಪವನ್ನು ನಾಶ ಎಂಬ ಅರ್ಥವನ್ನು ಹಿಂದೂ ಎಂಬ ಪದಕ್ಕೆ ಅಂಟಿಸಿದಂತಾಗಿದೆ. ಪಾಪವನ್ನು ಹರಿಸುವುದು ಹಿಂದೂ ಶಬ್ದಕ್ಕೆ ಅರ್ಥವಾದರೆ, ಮನುಷ್ಯನಿಗೆ ಪಾಪವೊಂದೇ ಇರುವುದಿಲ್ಲ. ಪಾಪ ಪುಣ್ಯಗಳು ಎರಡೂ ಕರ್ಮಬಂಧನಗಳೇ. ಪಾಪವು ಹೇಗೆ ಜನ್ಮವನ್ನು ಉಂಟು ಮಾಡುತ್ತಿದೆಯೋ ಹಾಗೆಯೇ ಪುಣ್ಯವು ಕೂಡಾ ಜನ್ಮಕ್ಕೆ ಕಾರಣವಾಗುತ್ತಿದೆ. **ಮನುಷ್ಯನ ಜನ್ಮರಾಹಿತ್ಯಕ್ಕೆ ಪಾಪ, ಪುಣ್ಯ ಎರಡೂ ಇಲ್ಲದಂತೆ ಹೋಗಬೇಕಾಗಿದೆ.** ಆದ್ದರಿಂದ ಪಾಪವನ್ನು ಇಲ್ಲದಂತೆ ಮಾಡುವುದು ಎಂಬ ಅರ್ಥವನ್ನು ಹಿಂದೂ ಪದಕ್ಕೆ ಜಾಣ್ಮೆಯಿಂದ ಜೋಡಿಸಿದರೂ, ಅದರಿಂದ ಮನುಷ್ಯನಿಗೆ ಲಾಭವಿಲ್ಲವೆಂದು ಅಂತಹ ಹಿಂದೂವಿಗೆ ಜನ್ಮಗಳು ಇಲ್ಲದಂತೆ ಹೋಗಿ ಮೋಕ್ಷ ಉಂಟಾಗುವುದಿಲ್ಲವೆಂದು ಹೇಳಬಹುದು. ಇಂದೂ ಎಂಬ ಪದಕ್ಕೇ ಹೇಳಿದ ಭಾವದ ಪ್ರಕಾರ ಬೆಲೆ ಇದೆಯೆಂದು ಹೇಳಬಹುದು. ಹಿಂ ಎಂದರೇ ಪಾಪ ಎಂದು ಕಲ್ಪಿಸಿ ಹೇಳಬೇಕಾದ್ದೆ ಆದರೆ ವಾಸ್ತವವಾಗಿ **ಹಿಂ** ಎಂದರೇ ಹಿಮ, ಮಂಜು ಎಂದು ಅಥವಾ ತಂಪು ಎಂದು ಅರ್ಥ ಬರುತ್ತದೆ. ಪಕ್ಕದಲ್ಲಿರುವ **ದೂ** ಗೆ ಎಂತಹ ಅರ್ಥ ಇಲ್ಲವೆಂದು ಹೇಳಬಹುದು. ಆದ್ದರಿಂದ ಹಿಂದೂ ಎಂಬ ಪದಕ್ಕೆ ಸರಿಯಾದ ಅರ್ಥ ಏನೂ ಇಲ್ಲವೆಂದು ಹೇಳಬಹುದು.

ಮನುಷ್ಯ ಯಾವ ಮತದಲ್ಲಿದ್ದರೂ ಆ ಮತ ಗ್ರಂಥದ ಪ್ರಕಾರ ಆತನು ಜ್ಞಾನವನ್ನು ತಿಳಿಯಬೇಕಾಗಿದೆ. **ಜ್ಞಾನ**ವನ್ನು ತಿಳಿದವನನ್ನು **'ಇಂದೂ'** ಎಂದು ಹೇಳುವುದರಲ್ಲಿ ತಪ್ಪಿಲ್ಲ. ಜ್ಞಾನಕ್ಕೆ ಅಧಿಪತಿ ಚಂದ್ರನೇ ಆಗಿರುವುದರಿಂದ ಮನುಷ್ಯನಿಗೆ ಆತನ ಜೀವನದಲ್ಲಿ ಚಂದ್ರನಿಂದಲೇ ಜ್ಞಾನ ಲಭಿಸಬೇಕಾಗಿದೆ. ಆದ್ದರಿಂದ ಎಲ್ಲಾ ವಿಧಗಳ ಸ್ವರ **'ಇ'** ಯಿಂದ ಪ್ರಾರಂಭವಾಗುವ ಇಂದೂ ಎಂದು ಹೇಳಬೇಕು ಆದರೆ, ಹಿಂದೂ ಎಂದು ಹೇಳಬಾರದು. ಇಂದೂ ಧರ್ಮ ಎಂದಿಗಾದರೂ ದೈವ ಧರ್ಮವಾಗಿ ಇರುತ್ತದೆ.

## 5. ಪ್ರಶ್ನೆ :– ದೇವರಿಗೆ ಧರ್ಮವಿದ್ದಂತೆ ಮನುಷ್ಯನಿಗು ಕೂಡಾ ಧರ್ಮಗಳಿರುತ್ತವಾ? ಮನುಷ್ಯನಿಗು ಧರ್ಮಕ್ಕು ಸಂಬಂಧ ವಿದೆಯಾ?

**ಉತ್ತರ :–** ಸೃಷ್ಠಿಸಲ್ಪಟ್ಟ ಪ್ರತಿಯೊಂದಕ್ಕು ಧರ್ಮವಿರುತ್ತದೆಂದು ತೀರ್ಮಾನಿಸಿ ಹೇಳಿದ್ದೇವೆ. ಮನುಷ್ಯನಿಗೆ ಧರ್ಮಗಳಿದ್ದರೂ ಶರೀರಕ್ಕೆ ಬೇರೆ ಧರ್ಮಗಳು, ಜೀವಿಗೆ ಬೇರೆ ಧರ್ಮಗಳು ಇರುತ್ತವೆ. ಮನುಷ್ಯನಾದ ಪ್ರತಿಯೊಬ್ಬನಿಗು ಧರ್ಮಗಳಿರುತ್ತವೆ. ಹಿಂದೂವಿಗೆ ಮಾತ್ರ ಧರ್ಮಗಳಿರುತ್ತವೆಯೆಂದು, ಇತರ ಮತದವರಿಗೆ ಇರುವುದಿಲ್ಲವೆನ್ನುವುದಕ್ಕೆ ಸಾಧ್ಯವಿಲ್ಲ. ಹುಟ್ಟಿದವನು ಯಾವ ಮತದವನಾದರೂ ಅವನಿಗೆ ಧರ್ಮಗಳಿರುತ್ತವೆಂದು ತಿಳಿಯಬೇಕು.

## 6. ಪ್ರಶ್ನೆ :– ಹಿಂದೂ ಧರ್ಮಗಳು ನಶಿಸುತ್ತವಾ?

**ಉತ್ತರ :–** ಧರ್ಮಗಳು ನಶಿಸುವವು ಅಲ್ಲ. ಧರ್ಮಗಳಿಗೆ ಯಾವಾಗಲೋ ಒಂದು ಸಮಯದಲ್ಲಿ **"ಗ್ಲಾನಿ"** (ಅಲ್ಲಸತ್ವ) ಏರ್ಪಡುತ್ತದೆ ಆದರೆ, ಪೂರ್ತಿ ನಶಿಸುವುದಿಲ್ಲ. ಧರ್ಮಗಳು ಬಲಹೀನವಾಗಿ ಹೋದಾಗ ಅವುಗಳಿಗೆ ಬಲವನ್ನು ಕೈಗೂಡಿಸಿ, ಮೊದಲಿನಂತೆ ಕೆಲಸ ಮಾಡುವಹಾಗೆ ಮಾಡುವುದಕ್ಕೆ ದೇವರು ಮನುಷ್ಯನಂತೆ ಅವತರಿಸಿ ಪುನಃ ಧರ್ಮಗಳನ್ನು ಸಂಸ್ಥಾಪನೆ ಮಾಡುತ್ತಾನೆ. ಹೊಸದಾಗಿ ಬಲ ಕೈಗೂಡಿದ ಧರ್ಮಗಳು ಮೊದಲಿನಂತೆ ಬಲವಾಗಿ ಇದ್ದು ಹೋಗುತ್ತವೆ.

## 7. ಪ್ರಶ್ನೆ :– ಧರ್ಮಗಳು ನಶಿಸುವವು ಅಲ್ಲದಿದ್ದರೆ ಪ್ರಪಂಚ ಹುಟ್ಟಿನಿಂದ ಮೊದಲು ಇದ್ದ ಧರ್ಮಗಳೇ ಇವೆಯಾ?

**ಉತ್ತರ :–** ಪ್ರಪಂಚ ಹುಟ್ಟಿನಲ್ಲಿರುವ ಧರ್ಮಗಳೇ ಈದಿನ ಕೂಡಾ ಇವೆಯೆಂದು, ಮೊದಲು ಇದ್ದ ಧರ್ಮಗಳು ಹೋಗಿ ಅವುಗಳ ಸ್ಥಾನಗಳಲ್ಲಿ ಹೊಸ ಧರ್ಮಗಳು ಬರುವುದಿಲ್ಲ. ಏಕೆಂದರೇ! ಧರ್ಮಗಳು ಬದಲಾಗುವವು ಅಲ್ಲ, ನಶಿಸುವವು ಅಲ್ಲ. ಆದ್ದರಿಂದ ಮೆಣಸಿನಕಾಯಿ ಮೊದಲು ಹೇಗೆ ಕಾರವಾಗಿ ಇದೆಯೋ

ಹಾಗೇ ಈಗಲೂ ಕೂಡಾ ಕಾರವಾಗಿಯೇ ಇದೆ. ಮೆಣಸಿನಕಾಯಿಗೆ ಕಾರ ಧರ್ಮವಾದಾಗ ಅದು ಬದಲಾಗಲಿಲ್ಲ ಅಲ್ಲವೇ! ಹಾಗೇ ನಿಂಬೆಹಣ್ಣಿಗೆ ಹುಳಿ ಧರ್ಮವಾದಾಗ ಅದು ಪ್ರಪಂಚ ಹುಟ್ಟಿನಲ್ಲಿ ಇದ್ದಂತೇ ಈದಿನ ಕೂಡಾ ಹುಳಿಯಾಗಿಯೇ ಇದೆ ಅಲ್ಲವೆ! ಈ ವಿಧವಾಗಿ ಪ್ರಪಂಚದಲ್ಲಿ ಯಾವುದಕ್ಕಿರುವ ಧರ್ಮಗಳು ಅದಕ್ಕಿರುತ್ತವೆ. ಅವು ಎಂದಿಗೂ ಬದಲಾಗಲಿಲ್ಲ, ನಶಿಸಲೂ ಇಲ್ಲ. ಪ್ರಕೃತಿಯಲ್ಲಿನ ಧರ್ಮಗಳು ಯಾವುವೂ ಬದಲಾಗದಿರುವಾಗ ಆತ್ಮಗೆ ಸಂಬಂಧಿಸಿದ ಧರ್ಮಗಳು ಬದಲಾಗುವುದಕ್ಕೆ ಅವಕಾಶವೇ ಇಲ್ಲ, ಹಾಗೆ ನಶಿಸುವುದಕ್ಕೆ ಸಾಧ್ಯವಿಲ್ಲ. ಆತ್ಮ ಧರ್ಮಗಳಿಗೆ ಗ್ಲಾನಿ ಏರ್ಪಡುತ್ತದೆಂದು, ಅದನ್ನು ಪುನಃ ಉದ್ಧರಿಸಿ ಬಲವನ್ನು ಕೈಗೂಡಿಸುತ್ತೇನೆಂದು ದೇವರೇ ದೈವ ಗ್ರಂಥಗಳಲ್ಲಿ ಹೇಳಿದ್ದಾನೆ. ಇದನ್ನನುಸರಿಸಿ. **ಯಾವ ಧರ್ಮವೂ ನಶಿಸುವುದಿಲ್ಲ ಮತ್ತು ಬದಲಾವಣೆ ಹೊಂದುವುದಿಲ್ಲ**. ಎಂದು ಹೇಳಬಹುದು.

## 8. ಪ್ರಶ್ನೆ :– ಕ್ರೈಸ್ಥರು, ಮುಸ್ಲಿಮ್‌ರು ಹುಟ್ಟಿ ಬಂದಿದ್ದಾರೆ ಅಲ್ಲವೆ! ಅವರ ಮತದಲ್ಲಿ ಪ್ರತ್ಯೇಕವಾದ ಜ್ಞಾನ ಇರುವಾಗ ಧರ್ಮ ಕೂಡಾ ಪ್ರತ್ಯೇಕವಾಗಿ ಇರುತ್ತದೆ ಅಲ್ಲವೇ! ಅವರ ಧರ್ಮಗಳು ಯಾವುವು ಇವೆ?

**ಉತ್ತರ :–** ಮನುಷ್ಯ ಮೊದಲು ಹಸುವಿನಿಂದ ಹಾಲು ಲಭ್ಯವಾಗುತ್ತವೆಂದು ತಿಳಿದುಕೊಂಡಿದ್ದಾನೆ. ಕರುಗಳು ಹಸುಗಳ ಹತ್ತಿರ ಹಾಲು ಕುಡಿಯುವುದನ್ನು ನೋಡಿ ತಾನೂ ಕೂಡಾ ಹಸುವಿನಿಂದ ಹಾಲನ್ನು ಶೇಖರಿಸಿ ಕುಡಿಯುತ್ತಿದ್ದನು. ಮನುಷ್ಯ ಮೊದಲು ಹಾಲನ್ನು ತಿಳಿದಾಗ ಹಾಲನ್ನು ಹಾಲಾಗಿಯೇ ಕುಡಿಯುತ್ತಿದ್ದನು. ಸ್ವಲ್ಪ ಕಾಲ ಕಳೆದ ನಂತರ ಹಾಲನ್ನು ಮೊಸರಾಗಿ ತಯಾರಿ ಮಾಡಿಕೊಂಡು ಮೊಸರನ್ನು ಕುಡಿಯುತ್ತಿದ್ದನು. ಹೀಗೆ ಕಾಲ ಕಳೆದಂತೆಲ್ಲ ಮಾನವನು ಹಾಲಿನಿಂದ ಮೊಸರನ್ನು, ಮೊಸರಿನಿಂದ ಬೆಣ್ಣೆಯನ್ನು, ಬೆಣ್ಣೆಯಿಂದ ತುಪ್ಪವನ್ನು ತಯಾರಿ ಮಾಡಿಕೊಂಡು ಕುಡಿಯುತ್ತಿದ್ದನು. ಒಂದೇ ಹಾಲಿನಿಂದ

ನಾಲ್ಕು ವಿಧಗಳ ಆಹಾರ ಪದಾರ್ಥಗಳು ತಯಾರಾದಂತೆ ಒಂದೇ ಧರ್ಮವನ್ನು ಹೆಸರುಗಳು ಬದಲಾಯಿಸಿ ಕ್ರೈಸ್ಥರು, ಮುಸ್ಲಿಮ್‌ರು ಎಂದು ಬೇರೆ ಬೇರೆ ಮತಧರ್ಮಗಳಾಗಿ ಹೇಳಿಕೊಳ್ಳುತ್ತಿದ್ದಾರೆ. ಆದರೆ ಹಾಲನ್ನು ಹೇಗೆ ಬೇರೆ ಬೇರೆ ಹೆಸರುಗಳಿರುವ ಆಹಾರಗಳಾಗಿ ತಯಾರಿ ಮಾಡಿದಂತೆ, ಒಂದೇ ಧರ್ಮದಿಂದ ಬೇರೆ ಬೇರೆ ಹೆಸರುಗಳಿರುವ ಮತಗಳನ್ನು ಮನುಷ್ಯ ತಯಾರಿ ಮಾಡಿ ಕೊಂಡಿದ್ದಾನೆ. ಹಾಲು ಮೊಸರು, ಬೆಣ್ಣೆ, ತುಪ್ಪ ಎನ್ನುವ ಭಾಗಗಳಾಗಿ ಬದಲಾದರೂ ಅವುಗಳಲ್ಲಿ ಹಾಲಿನ ಧರ್ಮಗಳೇ ಇದ್ದಂತೆ, ಮನುಷ್ಯ ಒಂದೇ ಧರ್ಮದಿಂದ ಎಷ್ಟು ಮತಗಳಾಗಿ ಸೀಳಿಹೋದರೂ ಅವರ ಧರ್ಮಗಳ ಹೆಸರುಗಳು ಬೇರೆಬೇರೆಯಾಗಿ ಹೇಳಿಕೊಂಡರೂ, ಅವರು ಅನೇಕ ಹೆಸರುಗಳಾಗಿ ಹೇಳುವ ಮತ ಧರ್ಮಗಳೆಲ್ಲವೂ ಮೊದಲ ಧರ್ಮದೊಳಗಿನವೇ ಎಂದು ಹೇಳಬಹುದು. ಮೊದಲು ತಯಾರಾದ ಹಾಲಲ್ಲಿನ ಧರ್ಮ, ಹಾಲಿನಿಂದ ತಯಾರಾದರೂ, ಉಳಿದ ಎಷ್ಟು ಆಹಾರಗಳಾಗಿ ಬದಲಾದರೂ, ಅವುಗಳಲ್ಲಿ ಹಾಲಿನ ಧರ್ಮಗಳೇ ಇದ್ದಂತೆ, ಮೊದಲು ಸೃಷ್ಟ್ಯಾದಿಯಲ್ಲಿ ತಯಾರಾದ **"ಇಂದೂ ಧರ್ಮ"** ಎಷ್ಟು ವಿಧಗಳ ಧರ್ಮಗಳಾಗಿ ಸೀಳಿಹೋದರೂ, ಆ ಧರ್ಮಗಳೆಲ್ಲವುಗಳಲ್ಲಿ ಮೊದಲ ಇಂದೂ ಧರ್ಮವೇ ಇರುತ್ತದೆಂದು ತಿಳಿಯಬೇಕು. ಅದೇ ವಿಧವಾಗಿ ಈದಿನ ಎಷ್ಟು ಮತಗಳಿದ್ದರೂ, ಅವುಗಳಲ್ಲಿ ಎಷ್ಟು ಜ್ಞಾನಗಳಿದ್ದರೂ, ಅವೆಲ್ಲವೂ ದೇವರ ಧರ್ಮಕ್ಕೆ ಸಂಬಂಧಿಸಿರುವವೇ. ದೇವರು ಒಬ್ಬನೇ, ಧರ್ಮವೂ ಒಂದೇ. ಎಷ್ಟು ಮತಗಳಿದ್ದರೂ ಅವು ಹಾಲಿನಿಂದ ತಯಾರಾದ ಮೊಸರು, ಬೆಣ್ಣೆ, ತುಪ್ಪದಂತಹವುಗಳೇ. ಅದೇ ವಿಧವಾಗಿ ಈದಿನ ಎಷ್ಟು ಮತಗಳು ತಯಾರಾದರೂ ಅವೆಲ್ಲವೂ ಇಂದೂ ಧರ್ಮದಿಂದ ತಯಾರಾಗಿರುವವೇ. **ಎಲ್ಲಾ ಮತಗಳಲ್ಲಿನ ಧರ್ಮವು ಒಂದೇ, ದೇವರು ಒಬ್ಬನೇ.** ಹೇಗೆ ಹಾಲಿನ ಬಗ್ಗೆ ಸಂಪೂರ್ಣವಾಗಿ ತಿಳಿದವನು ಮೊಸರನ್ನು ಕುರಿತು, ಬೆಣ್ಣೆಯನ್ನು ಕುರಿತು, ತುಪ್ಪವನ್ನು ಕುರಿತು ಸುಲಭವಾಗಿ ಹೇಳಬಲ್ಲನೋ, ಹಾಗೆ ಇಂದೂ ಧರ್ಮವನ್ನು ಕುರಿತು ಪೂರ್ತಿ ತಿಳಿದವನು ಉಳಿದ ಯಾವ ಮತದಲ್ಲಿನ ಧರ್ಮವನ್ನು ಕುರಿತಾದರೂ ಮಾತನಾಡಬಲ್ಲನು. ಈ ಸೂತ್ರದ ಪ್ರಕಾರ ನನಗೆ ಇಂದೂ ಧರ್ಮವನ್ನು ಕುರಿತು ಸಂಪೂರ್ಣವಾಗಿ ತಿಳಿಯುತ್ತದೆ,

ಆದ್ದರಿಂದ ನಾನು ಸುಲಭವಾಗಿ ಮೂರು ಮತಗಳನ್ನು ಕುರಿತು ಮಾತನಾಡುತ್ತಿದ್ದೇನೆ. ಇದನ್ನನುಸರಿಸಿ ದೇಶದಲ್ಲಿ ಉಳಿದ ಮತಗಳು ಎಷ್ಟಿದ್ದರೂ, ಅವುಗಳ ಧರ್ಮಗಳು ಬೇರೆಬೇರೆಯಾಗಿ ಕಾಣಿಸಿದರೂ, ಎಲ್ಲಾ ಒಂದೇ ಧರ್ಮಕ್ಕೆ ಅನುಸಂಧಾನವಾಗಿ ಇವೆಯೆಂದು ತಿಳಿಯಬೇಕು.

## 9. ಪ್ರಶ್ನೆ :– ಒಂದು ಹೊಸ ಪದಾರ್ಥ ತಯಾರಾದರೆ ಅದಕ್ಕೆ ಹೊಸ ಧರ್ಮ ತಯಾರಾಗುತ್ತದಾ?

**ಉತ್ತರ :–** ಪ್ರಪಂಚದಲ್ಲಿ ಯಾವ ಹೊಸ ಪದಾರ್ಥ ತಯಾರಾದರೂ ಅದಕ್ಕೆ ಸಂಬಂಧಿಸಿದ ಧರ್ಮ ಮೊದಲೇ ನಿರ್ಣಯವಾಗಿರುತ್ತದೆ. ಒಂದು ಪದಾರ್ಥ ತಯಾರಾದರೆ ಅದು ಪ್ರಕೃತಿಗಾದರೂ ಇಲ್ಲವೆ ಆತ್ಮಗಾದರೂ ಸಂಬಂಧಿಸಿರುವುದಾಗಿರುತ್ತದೆ. ಪ್ರಪಂಚದಲ್ಲಿ ವಿಭಜಿಸಿದರೆ ಪ್ರಕೃತಿ ಧರ್ಮಗಳೆಂದು, ಆತ್ಮ ಧರ್ಮಗಳೆಂದು ಎರಡು ವಿಧಗಳ ಧರ್ಮಗಳು ತಯಾರಾಗಿವೆ. ಪದಾರ್ಥ ಯಾವುದಾದರೂ ಅದು ಪ್ರಕೃತಿಗೆ ಸಂಬಂಧಿಸಿರುವುದಾಗಿ ಇರುವುದರಿಂದ ಅದಕ್ಕೆ ಸಂಬಂಧಿಸಿದ ಧರ್ಮ ಆದಿಯಲ್ಲಿಯೇ ತಯಾರಿ ಮಾಡಲ್ಪಟ್ಟಿರುತ್ತದೆ. ಆದ್ದರಿಂದ ಹೊಸ ಪದಾರ್ಥ ತಯಾರಾದರೂ **ಹೊಸ ಧರ್ಮ** ಆಗ ತಯಾರಾಗುವುದು ಏನು ಇಲ್ಲ. ಅದಕ್ಕೆ ಸಂಬಂಧಿಸಿದ ಧರ್ಮ ಮೊದಲೇ ಇರುತ್ತದೆಂದು ತಿಳಿಯಬೇಕು.

## 10) ಪ್ರಶ್ನೆ :– ದೇವರಿಗು, ಧರ್ಮಕ್ಕು ಸಂಬಂಧ ಏನು?

**ಉತ್ತರ :–** ನಿನ್ನ ಪ್ರಶ್ನೆ ಅಸಂಪೂರ್ಣವಾಗಿದೆ. ನೀನು ದೇವರನ್ನು ಕುರಿತು ಕೇಳಿದ್ದೀಯಾ. **ದೇವರು ಎನ್ನುವವನು ಇಬ್ಬರಾಗಿ ಇದ್ದಾನೆ.** ಆ ಇಬ್ಬರಲ್ಲಿ ನೀನು ಯಾವ ದೇವರನ್ನು ಕೇಳುತ್ತಿದ್ದೀಯೋ ನನಗೆ ತಿಳಿದರೆ ನಿನಗೆ ಸರಿಯಾಗಿ ಉತ್ತರವನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆ. **ಪ್ರಕೃತಿಯನ್ನು ಮೊಟ್ಟಮೊದಲು ಸೃಷ್ಠಿಸಿದ ಸೃಷ್ಠಿಕರ್ತನಾದ ದೇವರು ಒಬ್ಬನು ಇದ್ದಾನೆ. ನಂತರ ಆ ದೇವರಿಂದ ಸೃಷ್ಠಿಸಲ್ಪಟ್ಟ ಆತ್ಮ ಎನ್ನುವ ದೇವರು ಇದ್ದಾನೆ.** ನೀನು ಸೃಷ್ಠಿಸಲ್ಪಟ್ಟ ದೇವರನ್ನು

ಕುರಿತು ಕೇಳುತ್ತಿದ್ದೀಯಾ? ಇಲ್ಲವೆ ಸೃಷ್ಠಿಸಿದ ದೇವರನ್ನು ಕುರಿತು ಕೇಳುತ್ತಿದ್ದೀಯಾ? ಹೇಳಿದರೆ ನಿನಗೆ ಜವಾಬು ದೊರಕುತ್ತದೆ. ಮನುಷ್ಯನಿಗೆ ಹತ್ತಿರವಾಗಿ ಇರುವ ದೇವರೂ, ಮನುಷ್ಯನ ಆರಾಧನೆಗಳನ್ನು ಸ್ವೀಕರಿಸುವ ದೇವರೂ, ಮನುಷ್ಯರಿಗೆ ದೇವರಾಗಿ ಇರುವವನು ಒಬ್ಬ ದೇವರಾದರೆ, ಮನುಷ್ಯನೊಂದಿಗೆ ಸಂಬಂಧವಿಲ್ಲದ ದೇವರು ಮತ್ತೊಬ್ಬನಿದ್ದಾನೆ. ಇಬ್ಬರು ದೇವರುಗಳಲ್ಲಿ ಮನುಷ್ಯರನ್ನು ಸೃಷ್ಠಿಸುವ ದೇವರಾದ ಆತ್ಮವೇ ಮನುಷ್ಯರಿಗೆ ದೇವರಾಗಿ ಹೇಳಲ್ಪಡುತ್ತಿದ್ದಾನೆ. ಮನುಷ್ಯರನ್ನು ಸೃಷ್ಠಿಸದ ಪರಮಾತ್ಮ ಮನುಷ್ಯರಿಗೆ ದೇವರಾಗಿ ಇಲ್ಲವೆಂದು ಹೇಳಬಹುದು. ಪರಮಾತ್ಮ ಆತ್ಮವನ್ನು ಸೃಷ್ಠಿಸಿದ ದೇವರು. ಆದ್ದರಿಂದ ಆತನು ಆತ್ಮಗೆ ದೇವರು, ಆತ್ಮ ಮನುಷ್ಯರನ್ನು ಸೃಷ್ಠಿಸಿದ್ದಾನೆ. ಆದ್ದರಿಂದ ಆತನು ಮನುಷ್ಯರಿಗೆ ದೇವರು. ಆತ್ಮಗೆ ದೇವರಾದ ಪರಮಾತ್ಮ ಪ್ರಕೃತಿಯನ್ನು ಸೃಷ್ಠಿಸಿದ್ದಾನೆ. ನಂತರ ಆತ್ಮನನ್ನು ಸೃಷ್ಠಿಸಿದ್ದಾನೆ. ಆತನು ಸೃಷ್ಠಿಕರ್ತನಾದ್ದರಿಂದ ದೇವರೇಯೆಂದು ಹೇಳಲ್ಪಟ್ಟರೂ, ಮನುಷ್ಯರಿಗೆ ದೇವರು ಅಲ್ಲವೆಂದು ಹೇಳ ಬಹುದು. ಮನುಷ್ಯರನ್ನು ಸೃಷ್ಠಿಸಿದ ದೇವರನ್ನು ಸೃಷ್ಠಿಸಿದ ಪರಮಾತ್ಮನನ್ನು ಆತ್ಮಕ್ಕೆ ದೇವರೆಂದು, ಆತ್ಮ ಮನುಷ್ಯರಿಗೆ ದೇವರೆಂದು ಹೇಳಬಹುದು.

ಸೃಷ್ಠಿಕರ್ತನಾದ ಪರಮಾತ್ಮಗೆ ಧರ್ಮಗಳಿಲ್ಲ. ಸೃಷ್ಠಿಸಲ್ಪಟ್ಟ ಆತ್ಮಗೆ ಧರ್ಮಗಳಿವೆ. ಆದ್ದರಿಂದ ನೀನು ಕೇಳಿರುವುದು ಆತ್ಮಗೆ ಸಂಬಂಧಿಸಿದ ಪ್ರಶ್ನೆಯೇ ಹೊರತು, ಪರಮಾತ್ಮಗೆ ಸಂಬಂಧಿಸಿರುವುದಲ್ಲ. ಮನುಷ್ಯರನ್ನು ಸೃಷ್ಠಿಸಿ, ಪಾಲಿಸಿ, ಮರಣಿಸುವಂತೆ ಮಾಡುವ ಆತ್ಮ ಮನುಷ್ಯರಿಗೆ ದೇವರಾಗಿ ಇರುವುದರಿಂದ ಆತನಿಗೆ ಧರ್ಮಗಳಿವೆ. **ದೇವರಿಗು ದೇವರ ಧರ್ಮಗಳಿಗು ದೇಹಿಗು, ದೇಹಕ್ಕು ಇರುವಷ್ಟು ಸಂಬಂಧ ಇರುತ್ತದೆ.** ಆತ್ಮ ಕರ್ಮಾತೀತನಾದರೂ ಶರೀರದಲ್ಲಿ ಸೇರಿ ಕೆಲಸ ಮಾಡಬೇಕಾಗಿದೆ. ನಿತ್ಯವೂ ಶರೀರದ ಜೊತೆಗೆ ನಿವಾಸಿಸಬೇಕಾಗಿದೆ. ಯಾವ ವಿಧವಾಗಿ ಶರೀರವನ್ನು ಬಿಟ್ಟು ಆತ್ಮ ಇಲ್ಲವೋ, ಅದೇ ವಿಧವಾಗಿ ಧರ್ಮಗಳನ್ನು ಬಿಟ್ಟು ಆತ್ಮ ಇಲ್ಲ. ಆತ್ಮಗೆ ಧರ್ಮ ಒಳಗಿನ ಪೊರೆಯಂತಾದ್ದಾದರೆ, ಜ್ಞಾನ ಮೇಲಿನ ಪೊರೆಯಂತಾದ್ದೆಂದು ಹೇಳಬಹುದು. ಧರ್ಮವನ್ನು ತಿಳಿಯಬೇಕೆಂದರೇ ಜ್ಞಾನದ ಮೂಲಕ ತಿಳಿಯಬಹುದು. **ಜ್ಞಾನ ಧರ್ಮವನ್ನು**

**ತಿಳಿಸಿದರೆ, ಧರ್ಮ ಆತ್ಮನನ್ನು ತಿಳಿಸುತ್ತದೆ.** ಆತ್ಮ ಪರಮಾತ್ಮನನ್ನು ತಿಳಿಸುತ್ತದೆ. ಪರಮಾತ್ಮನನ್ನು ತಿಳಿಸಿ ಪರಮಾತ್ಮನಲ್ಲಿ ಜೀವಾತ್ಮನನ್ನು ಸೇರಿಸುತ್ತಾನೆ. ಜೀವಾತ್ಮ ಪರಮಾತ್ಮನಲ್ಲಿ ಬೆರೆತುಹೋಗುವುದನ್ನು **ಮೋಕ್ಷ** ಎಂದು ಹೇಳುತ್ತಿದ್ದೇವೆ. ಜೀವಾತ್ಮ ಪರಮಾತ್ಮನಲ್ಲಿ ಬೆರೆಯುವುದಕ್ಕೆ ಆತ್ಮ ಧರ್ಮಗಳನ್ನು ಜೀವಾತ್ಮ ತಿಳಿಯಬೇಕಾಗಿದೆ. ಎರಡನೇ ಸೃಷ್ಠಿಕರ್ತನಾದ ಆತ್ಮ ಎಂಬ ದೇವರಿಗೆ ಧರ್ಮಗಳು ಇವೆ. ಮೊಟ್ಟ ಮೊದಲ ಸೃಷ್ಠಿಕರ್ತನಾದ ಪರಮಾತ್ಮ ಎನ್ನುವ ದೇವರಿಗೆ ಧರ್ಮಗಳು ಇರುವುದಿಲ್ಲ.

## 11. ಪ್ರಶ್ನೆ :– ಇಂದೂ ಧರ್ಮಗಳು ಒಂದು ದೇಶಕ್ಕಾಗಲಿ, ಇಲ್ಲವೆ ಒಂದು ಮತಕ್ಕಾಗಲಿ ಪರಿಮಿತವಾ?

**ಉತ್ತರ :–** ಆಹಾರ ಮನುಷ್ಯರಿಗೆ ಅಗತ್ಯವಾ ಇಲ್ಲವೆ ಪ್ರಾಣಿಗಳಿಗೂ ಕೂಡಾ ಅಗತ್ಯವಾ ಎಂದು ಕೇಳಿದಂತೆ ನಿನ್ನ ಪ್ರಶ್ನೆ ಇದೆ. ಧರ್ಮಗಳು ಒಂದು ಪ್ರಾಂತಕ್ಕೂ, ಒಂದು ದೇಶಕ್ಕು, ಒಂದು ಮತಕ್ಕು ಪರಿಮಿತಿಯಾಗದೆ ಮನುಷ್ಯರಾದವರೆಲ್ಲರಿಗೂ ಧರ್ಮಗಳು ಅಗತ್ಯವೆಂದೇ ಹೇಳಬಹುದು. ಒಂದು ದೇಶದಲ್ಲಿಯೇ, ಒಂದು ಮತದಲ್ಲಿಯೇ ಮನುಷ್ಯರು ಇದ್ದಾರೆಂದು ಹೇಳಲಾರೆವು. ಎಲ್ಲಾ ಮತಗಳಲ್ಲಿ ಎಲ್ಲಾ ದೇಶಗಳಲ್ಲಿಯೂ ಮನುಷ್ಯರಿದ್ದಾರೆ. ಆದ್ದರಿಂದ ಮನುಷ್ಯನಾದ ಪ್ರತಿಯೊಬ್ಬನು ಧರ್ಮಗಳನ್ನು ತಿಳಿಯಬೇಕಾಗಿದೆ. ಆದ್ದರಿಂದ ಧರ್ಮಗಳು ಒಂದು ದೇಶಕ್ಕೆ, ಒಂದು ಮತಕ್ಕೆ ಪರಿಮಿತಿಯಾದವುಗಳಲ್ಲ. ದೈವಜ್ಞಾನ ಇರುವ ಪ್ರತಿ ಸ್ಥಳದಲ್ಲಿ ಇಂದೂ ಧರ್ಮಗಳಿವೆ. ಕ್ರೈಸ್ಥರ ಗ್ರಂಥ ಬೈಬಲ್‌ನಲ್ಲಿಯೂ, ಮುಸ್ಲಿಮ್‌ರ ಗ್ರಂಥವಾದ ಖುರ್‌ಆನ್‌ನಲ್ಲಿಯೂ, ಇಂದೂಗಳ ಗ್ರಂಥವಾದ ಭಗವದ್ಗೀತೆಯಲ್ಲಿಯೂ ಇಂದೂ ಧರ್ಮಗಳಿವೆ. ಮೂರು ಮತಗಳಲ್ಲಿ, ಮೂರು ಗ್ರಂಥಗಳಲ್ಲಿ ಇಂದೂ ಧರ್ಮಗಳು ಮಿಳಿತವಾಗಿವೆ. ಆದ್ದರಿಂದ **'ಇಂದೂ ಧರ್ಮಗಳಿಗೆ ಪರಿಮಿತಿಯಿಲ್ಲ'** ಎಂದು ಹೇಳಬಹುದು.

## 12) ಪ್ರಶ್ನೆ :– ಇಂದೂ ಧರ್ಮಗಳಲ್ಲಿ ಬೇರೆಬೇರೆ ವಿಧಗಳು ಇವೆಯಾ?

**ಉತ್ತರ :–** ಇಂದೂ ಎಂದರೇ ದೇವರಿಗೆ ಸಂಬಂಧಿಸಿ ಜ್ಞಾನ ಎಂದು ಅರ್ಥ. ಧರ್ಮಗಳು ಎಂದರೇ ಮೊದಲೇ ಹೇಳಿದ್ದೇವೆ. ಇಂದೂ ಧರ್ಮಗಳು ಎಂದರೇ ದೇವರಿಗೆ ಸಂಬಂಧಿಸಿದ ಧರ್ಮಗಳೇ ಹೊರತು ಬೇರೆ ಏನೂ ಇಲ್ಲ. ಮನುಷ್ಯರನ್ನು ಸೃಷ್ಠಿಸಿದ ದೇವರು, ಸೃಷ್ಠಿಸಲ್ಪಟ್ಟು ಇರುವುದರಿಂದ ಆತನಿಗಿರುವ ಧರ್ಮಗಳನ್ನೇ ಇಂದೂ ಧರ್ಮಗಳು ಎಂದು ಕರೆಯುತ್ತಿದ್ದೇವೆ. ಮನುಷ್ಯರನ್ನು ಸೃಷ್ಠಿಸಿದ ದೇವರು ಒಬ್ಬನೇ, ಮನುಷ್ಯರನ್ನು ಸೃಷ್ಠಿಸುವುದಕ್ಕೆ ಸೃಷ್ಠಿಸಲ್ಪಟ್ಟ ದೇವರು ಒಬ್ಬನೇ. ಆದ್ದರಿಂದ **ಮನುಷ್ಯರೆಲ್ಲರಿಗೂ ಆರಾಧ್ಯದೈವ ಒಬ್ಬನೇ** ಆಗಿರುವುದರಿಂದ **ಇಂದೂ ಧರ್ಮಗಳು ಒಂದೇ**. ಮನುಷ್ಯರನ್ನು ಹುಟ್ಟಿಸಿದ ದೇವರು ಒಂದುಕಡೆ ಪರಮಾತ್ಮಯೆಂದು, ಮತ್ತೊಂದು ಕಡೆ ತಂದೆಯೆಂದು, ಇನ್ನೊಂದು ಕಡೆ ಅಲ್ಲಾಹ್ ಎಂದು ಹೇಳಲ್ಪಡುತ್ತಿದ್ದಾನೆ. ಮತಗಳು ಅನೇಕ ವಿಧಗಳಾದರೂ ಎಲ್ಲರಿಗೂ ದೇವರು ಎನ್ನುವವನು ಒಬ್ಬನೇ. ಸೃಷ್ಠಿಸಲ್ಪಟ್ಟು, ಎಲ್ಲರನ್ನು ಸೃಷ್ಠಿಸಿ ದೇವರಾದ ಆತ್ಮನನ್ನು ಕುರಿತು ಎಲ್ಲರೂ ತಿಳಿಯಬೇಕೆಂದು, ಎಲ್ಲಾ ಮತಗಳಲ್ಲಿ ಬೋಧಿಸಲ್ಪಡುವ ಸಾರಾಂಶ ಒಂದೇ ಆಗಿರುವುದರಿಂದ, ಎಲ್ಲಿ ಯಾವ ಮತದಲ್ಲಿ ದೇವರನ್ನು ಕುರಿತು ಹೇಳುತ್ತಿದ್ದರೂ, ಅಲ್ಲಿ ಇಂದೂ ಧರ್ಮಗಳು ಹೊರತುಪಡಿಸಿ ಏನು ಇಲ್ಲ. ಆದ್ದರಿಂದ **ಸಮಸ್ತ ಮಾನವರಿಗೂ ಧರ್ಮಗಳು** ಬೇರೆಬೇರೆ ಹೆಸರುಗಳಿಂದ ಕಾಣಿಸಿದರೂ, ಮತಗಳ ಹೆಸರಿನಿಂದ ಕರೆಯಲ್ಪಡುತ್ತಿದ್ದರೂ, ದೇವರನ್ನು ಕುರಿತು ಹೇಳಲ್ಪಡುವವೆಲ್ಲಾ **ಇಂದೂ ಧರ್ಮಗಳೇ**ಯೆಂದು ತಿಳಿಯಬೇಕು.

## 13) ಪ್ರಶ್ನೆ :– ಸಾವು ಹುಟ್ಟುಗಳು ಕರ್ಮಗಳಾ? ಧರ್ಮಗಳಾ?

**ಉತ್ತರ :–** ಸಾವು ಹುಟ್ಟುಗಳು ಸಮಸ್ತ ಜೀವರಾಶಿಗಳಿಗು ಸಂಬಂಧಿಸಿರುವವು. ಅವು ಒಂದು ಕುಲಕ್ಕಾಗಲಿ, ಒಂದು ಮತಕ್ಕಾಗಲಿ ಪರಿಮಿತಿಯಾದವುಗಳಲ್ಲ. ಸಾವು ಹುಟ್ಟುಗಳು ಕರ್ಮಗಳಲ್ಲ, ಧರ್ಮಗಳೆಂದು ತಿಳಿಯಬೇಕು. ಕರ್ಮ ಗಳಿದ್ದರೂ, ಕರ್ಮಗಳಿಲ್ಲದಿದ್ದರೂ ಸಾವು ಹುಟ್ಟುಗಳು ಸಹಜವಾಗಿ ಬರುತ್ತವೆ. ಸಾವು ಹುಟ್ಟುಗಳು ಕರ್ಮವನ್ನು ಅನುಸರಿಸಿ ಬರುವವಲ್ಲ. ಅವು ಜೀವರಾಶಿ

ಗಳಿಗಿರುವ ಧರ್ಮಗಳನ್ನು ಅನುಸರಿಸಿ ಬರುವವೆಂದು ತಿಳಿಯಬೇಕು. ಜೀವಿಯು ಕೂಡಾ ಆತ್ಮನಲ್ಲಿ ಭಾಗವಾಗಿಯೇ ಇರುವುದರಿಂದ ಜೀವಿಗೂ ಕೂಡಾ ಧರ್ಮಗಳು ಇವೆಯೆಂದು ಹೇಳಬಹುದು. ಪರಮಾತ್ಮನಿಂದ ಆತ್ಮ ಸೃಷ್ಠಿಸಲ್ಪಟ್ಟು, ಆತ್ಮನಿಂದ ಜೀವಾತ್ಮ ಸೃಷ್ಠಿಸಲ್ಪಟ್ಟಿದ್ದಾನೆ. ಸೃಷ್ಠಿಸಲ್ಪಟ್ಟವರಿಗೆ ಧರ್ಮಗಳು ಇರುತ್ತವೆ. ಜೀವಿಗಿರುವ ಧರ್ಮಗಳಲ್ಲಿ ಜೀವಿಯ ಸಾವು ಹುಟ್ಟುಗಳು ಇವೆ. ಆದ್ದರಿಂದ **ಸಾವು ಹುಟ್ಟುಗಳು ಧರ್ಮಗಳೇ** ಹೊರತು, ಕರ್ಮಗಳು ಅಲ್ಲವೆಂದು ಹೇಳಬಹುದು. ಮನುಷ್ಯ ಬದುಕಿರುವವರೆಗು ಕರ್ಮಗಳು ಬರುತ್ತಿರುತ್ತವೆ. ಹಾಗೇ ಮುಗಿದುಹೋಗುತ್ತಿರುತ್ತವೆ. ಧರ್ಮಕ್ಕೆ ಸಂಬಂಧಿಸಿದ ಮರಣ ಬರುವವರೆಗು ಜೀವಿಯು ಕರ್ಮಗಳನ್ನು ಅನುಭವಿಸುತ್ತಿರುತ್ತಾನೆ. ಹಾಗೆ ಅನುಭವಿಸುತ್ತಿರುವಾಗಲೇ ಒಂದುಬಾರಿ ಮರಣ ಬರುತ್ತದೆ. ಮರಣ ಜೀವಿಗಿರುವ ಧರ್ಮದಿಂದ ಬರುತ್ತಿದೆ ಆದರೆ, ಆತನಿಗಿರುವ ಕರ್ಮದಿಂದಲ್ಲ. ಕರ್ಮದಿಂದ ಕಷ್ಟ ಸುಖ ಅನುಭವಗಳು ಬರುತ್ತಿರುತ್ತವೆ. ಹಾಗೇ ಜೀವಿಯ ಕರ್ಮದಿಂದ ಬರುವಂತೇ ಮರಣ ಕೂಡಾ ಬರುತ್ತಿದೆ. ಧರ್ಮದ ವಿಷಯ ತಿಳಿಯದವರೆಲ್ಲರೂ ಮರಣವನ್ನು ಕರ್ಮವೆಂದೇ ತಿಳಿಯುತ್ತಿದ್ದಾರೆ. ಹಾಗೆ ಅಂದುಕೊಳ್ಳುವುದು ಅಜ್ಞಾನವೇ ಆಗುತ್ತದೆ.

## 14) ಪ್ರಶ್ನೆ :– ನೀವು ಯಾವ ಧರ್ಮದಲ್ಲಿ ಇದ್ದೀರಾ?

**ಉತ್ತರ :–** ನಿಮ್ಮ ಪ್ರಶ್ನೆ ವಿಚಿತ್ರವಾಗಿದೆ. ನಾನು ನಿಮ್ಮ ಲೆಕ್ಕದಲ್ಲಿ ಒಬ್ಬ ಗುರುವೋ, ಸ್ವಾಮಿಯೋ, ಬಾಬಾನೋ ಇಲ್ಲವೆ ಇನ್ನು ಏನಾದರೂ, ಕೊನೆಗೆ ನಾನು ಒಬ್ಬ ಮನುಷ್ಯನೇ ಎನ್ನುವುದು ಮಾತ್ರ ಸತ್ಯ. ಮನುಷ್ಯನಲ್ಲಿ ಎರಡು ಆತ್ಮಗಳು ಇವೆ. ಒಂದು ಆತ್ಮ, ಎರಡು ಜೀವಾತ್ಮ. ಈ ಎರಡು ಆತ್ಮಗಳಲ್ಲಿ ಮೊದಲ ಆತ್ಮವನ್ನು ದೇವರು ಎಂದೂ, ಎರಡನೇ ಜೀವಾತ್ಮನನ್ನು ಜೀವಿಯು ಎಂದು ಹೇಳಬಹುದು. ಸತ್ಯವನ್ನು ಹೇಳಬೇಕೆಂದರೆ ನಾನು ಹೊರಗೆ ಯಾರೇ ಆಗಿರಲಿ, ಒಳಗೆ ಒಬ್ಬ ಜೀವಿಯು ಮಾತ್ರವೇ. ಆದ್ದರಿಂದ ಜೀವಿಯ ಧರ್ಮಗಳು ನನಗೂ ಇವೆ. ಆದರೂ ನಾನು ಪ್ರಸ್ತುತ ನನ್ನ ಧರ್ಮಗಳಲ್ಲಿಯೇ ಇದ್ದು ಬದುಕುತ್ತಿದ್ದೇನೆ.

ನಾನು ಆತ್ಮ ಧರ್ಮಗಳನ್ನು ತಿಳಿದು ಆತ್ಮನಲ್ಲಿ ಸೇರಿಹೋಗುವುದು ನನ್ನ ಕರ್ತವ್ಯ. ಈಗ ನೀವು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳಿದರೆ **"ನನ್ನ ಧರ್ಮಗಳಲ್ಲಿ ನಾನು ಇದ್ದೇನೆ"**. ಬಹಳ ಜನರಿಗೆ ಅವರ ಧರ್ಮಗಳು ಅವರಿಗೆ ತಿಳಿದಿಲ್ಲ. ತಿಳಿದರೂ ತಿಳಿಯದಿದ್ದರೂ ಅವರ ಧರ್ಮಗಳ ಪ್ರಕಾರ ಅವರು ಬದುಕುತ್ತಿದ್ದಾರೆ. ನನ್ನ ಧರ್ಮದ ಪ್ರಕಾರ ಮೀನು ನೀರನ್ನು ಕೋರಿದಂತೆ, ಜೀವಾತ್ಮನಾದ ನಾನು ಆತ್ಮನನ್ನು ಕೋರಿಕೊಳ್ಳುತ್ತಿದ್ದೇನೆ.

## 15) ಪ್ರಶ್ನೆ :– ಧರ್ಮಗಳಿಗೂ, ಶಾಸ್ತ್ರಗಳಿಗೂ ಸಂಬಂಧ ವಿದೆಯಾ?

**ಉತ್ತರ :–** ಶಾಸನಗಳಿಂದ ಕೂಡಿಕೊಂಡಿರುವವೇ ಧರ್ಮಗಳೆಂದು ಮೊದಲೇ ಹೇಳಿದ್ದೇವೆ. ಸಿದ್ಧಾಂತವು ಶಾಸ್ತ್ರಕ್ಕೆ ಆಧಾರ. **ಶಾಸ್ತ್ರವು ಧರ್ಮಕ್ಕೆ ಆಧಾರ.** ಶಾಸನವಿಲ್ಲದೆ ಧರ್ಮವಿಲ್ಲ. ಆದ್ದರಿಂದ ಧರ್ಮಗಳಿಗು ಶಾಸ್ತ್ರಗಳಿಗು ದಾರಕ್ಕು ಹತ್ತಿಗು ಇರುವಷ್ಟು ಸಂಬಂಧ ಇದೆ. ಹತ್ತಿ ಶಾಸನಗಳಾದರೆ ದಾರ ಧರ್ಮದಂತೆ ಇದೆ. ಆದ್ದರಿಂದ ಧರ್ಮ ಎಂದರೇ ತಿದ್ದುಪಡಿ ಮಾಡುವುದಾಗಲಿ, ಸರಿಪಡಿ ಸುವುದಾಗಲಿ, ಬದಲಾವಣೆ ಹೊಂದುವುದಾಗಲಿ ಅಲ್ಲವೆಂದು ಹೇಳಬಹುದು.

## 16) ಪ್ರಶ್ನೆ :– ಈ ದಿನ ಹಿಂದೂಗಳು ಎನ್ನುವವರಿಗೆ ಅವರ ಧರ್ಮಗಳು ತಿಳಿದಿವೆಯಾ?

**ಉತ್ತರ :–** ಈ ದಿನ 'ದೇವರ ಜ್ಞಾನವನ್ನು ತಿಳಿದವರನ್ನು ಇಂದೂಗಳೆಂದು' ಹೇಳಬಹುದು. ದೇವರ ಜ್ಞಾನ (ಆತ್ಮ ಜ್ಞಾನ) ತಿಳಿದ ಯಾವ ಮತಸ್ಥನಾದರೂ ಇಂದೂವೇ ಆಗುತ್ತಾನೆ. ಹಾಗೆ ಧರ್ಮಗಳು ತಿಳಿಯದಂತೆ ನಾನು ಹಿಂದೂವೆಂದು ಹೇಳಿಕೊಂಡರೂ, ಅಥವಾ ಕ್ರೈಸ್ಥವನೆಂದರೂ, ಮುಸ್ಲಿಮ್‌ನೆಂದು ಹೇಳಿದರೂ ಅವರು ಮತವನ್ನು ಅನುಸರಿಸಿ ಹೇಳುವವರೇ ಹೊರತು, ಧರ್ಮಗಳನ್ನು ಅನುಸರಿಸಿ ಹೇಳುವವರು ಅಲ್ಲವೆಂದು ಹೇಳಬಹುದು. ಈ ದಿನ ಎಲ್ಲರೂ ಮತವನ್ನು ಅನುಸರಿಯೇ ಹೋಗುತ್ತಿದ್ದಾರೆ ಆದರೆ, ಧರ್ಮವನ್ನು ಅನುಸರಿಸಿ ಹೋಗುತ್ತಿಲ್ಲ. ಆದ್ದರಿಂದ ಹಿಂದೂಗಳಿಗೆ ಅವರ ಧರ್ಮಗಳು ತಿಳಿದಿವೆಯೆಂದು

ಹೇಳಲಾರೆವು. ಎಲ್ಲಿಯಾದರೂ ಧರ್ಮ ತಿಳಿದ ಹಿಂದೂ ಇದ್ದರೆ ಅವನು ತನ್ನನ್ನು 'ಹಿಂದೂ' ಎಂದು ಹೇಳಿಕೊಳ್ಳದೆ 'ಇಂದೂ' ಎಂದು ಹೇಳಿಕೊಳ್ಳುತ್ತಾನೆ. ಯಾವ ಮತದವರಿಗಾದರೂ ಇದೇ ಸೂತ್ರ ಅನ್ವಯಿಸುತ್ತದೆ.

## 17) ಪ್ರಶ್ನೆ :– ದೇವತಾ ಪೂಜೆಗಳು ಮಾಡುವವರು ಹಿಂದೂಗಳಾ? (ಇಂದೂಗಳಾ?)

**ಉತ್ತರ :–** ದೇವತೆಗಳ ಪೂಜೆ ಮಾಡುವವರಿಗೆ **ಆತ್ಮ ಧರ್ಮಗಳು** ಸ್ವಲ್ಪವಾದರೂ ತಿಳಿದಿಲ್ಲ. ಆತ್ಮ ಧರ್ಮಗಳು ತಿಳಿದಿದ್ದರೆ ದೇವತೆಗಳ ಪೂಜೆಗಳು ಮಾಡುವುದಿಲ್ಲ. ಆದ್ದರಿಂದ ದೇವತಾ ಪೂಜೆಗಳು ಮಾಡುವವರನ್ನು **'ಇಂದೂಗಳು' (ಜ್ಞಾನಿಗಳು)** ಎನ್ನುವುದಕ್ಕೆ ಅವಕಾಶವಿಲ್ಲ.

## 18) ಪ್ರಶ್ನೆ :– ಈ ದಿನ ಒಂದು ಸಮಾಜದಲ್ಲಿ ಹೆಸರುವಾಸಿ ಯಾದ ಸ್ವಾಮೀಜಿಗಳೆಲ್ಲರೂ ದೇವತಾ ಪೂಜೆಗಳು ಮಾಡುತ್ತಿದ್ದಾರೆ. ಅವರು ಏಕೆ ಹಾಗೆ ಮಾಡುತ್ತಿದ್ದಾರೆ?

**ಉತ್ತರ :–** 'ನಾವು ಒಳ್ಳೆಯವರು' ಎಂದು ಬೋರ್ಡು ಹಾಕಿಕೊಂಡವರು ಕೂಡಾ ತಪ್ಪು ಮಾಡುತ್ತಿದ್ದಾರೆಂದರೇ ಒಳ್ಳೆಯದು ಯಾವುದೋ ಅವರಿಗೆ ತಿಳಿದಿಲ್ಲವೆಂದೇ ಹೇಳಬೇಕು. ಮನುಷ್ಯನಿಗೆ ಒಳ್ಳೆಯದು, ಕೆಟ್ಟದು ತಿಳಿಯದಿದ್ದರೂ ಸಮಾಜದಲ್ಲಿ ಇದು ಒಳ್ಳೆಯದು, ಇದು ಕೆಟ್ಟದೆಂದು ಮೊದಲೇ ನಿರ್ಣ ಯಿಸಲ್ಪಟ್ಟಿರುತ್ತದೆ. ಅದೇ ವಿಧವಾಗಿ ಇದು ಧರ್ಮ. ಇದು ಅಧರ್ಮ ಎಂದು ದೇವರ ಮಾರ್ಗದಲ್ಲಿ ನಿರ್ಣಯಿಸಲ್ಪಟ್ಟಿವೆ. ಧರ್ಮದ ಪ್ರಕಾರ **ಮನುಷ್ಯ ಆತ್ಮವನ್ನು ಆರಾಧಿಸಬೇಕು ಆದರೆ, ಆತ್ಮ ತಯಾರಿ ಮಾಡಿದ ಮನುಷ್ಯರನ್ನು, ದೇವತೆಗಳನ್ನು ಆರಾಧಿಸುವುದು ಅಧರ್ಮವಾಗುತ್ತದೆ.** ಈ ದಿನ ಕೇವಲ ಒಂದು ಮತಕ್ಕೆ ಸಂಬಂಧಿಸಿದವರೇ ದೇವತೆಗಳನ್ನು ಆರಾಧಿಸುವುದು ನಡೆಯುತ್ತಿದೆ. ದೇವತೆಗಳು ಮನುಷ್ಯರಿಂದ ಆರಾಧಿಸಲ್ಪಡುವುದಕ್ಕೆ ಅವರು ಯಾರು? ಅವರು ಅರ್ಹರಾ,

ಎಂದು ವಿವರಿಸಿಕೊಂಡು ನೋಡಿದರೆ ಸ್ವಲ್ಪ ವಿಷಯ ತಿಳಿಯಬಲ್ಲದು. ಅದು ಏನೆಂದರೇ! ದೇವರಾದ ಆತ್ಮ, ಪರಮಾತ್ಮನಿಂದ ಅಧಿಕಾರ ಹೊಂದಿ ಮಾನವ ಸಮಾಜ ಮತ್ತು ಜೀವರಾಶಿಗಳಿಂದ ತುಂಬಿದ ಜಗತಿಯನ್ನು ತಯಾರಿ ಮಾಡುವುದು ನಡೆಯುತ್ತಿದೆ. 'ಜಗತಿ' ಎಂದರೇ ಹುಟ್ಟಿ ಸಾಯುತ್ತಾ ಇರುವುದೆಂದು ಅರ್ಥ. ಜಗತಿಯಲ್ಲಿ **'ಜ'** ಎಂದರೇ ಹುಟ್ಟುವುದು ಎಂದೂ, **'ಗತಿ'** ಎಂದರೇ ಗತಿಸಿ ಹೋಗುವುದು (ಸತ್ತುಹೋಗುವುದು) ಎಂದು ಅರ್ಥವಿದೆ.

ಆತ್ಮನಾದ ದೇವರು ಜಗತಿಯನ್ನು ಸೃಷ್ಠಿಸುತ್ತಿದ್ದಾನೆ. ಆದರೆ ಜಗತಿ ಒಂದು ಕಾಣಿಸುವ ಸ್ಥೂಲ ಜಗತಿ, ಎರಡು ಕಾಣಿಸದ ಸೂಕ್ಷ್ಮ ಜಗತಿಯೆಂದು ಎರಡು ವಿಧಗಳಲ್ಲಿ ಇದೆ. ಸ್ಥೂಲ ಜಗತಿಯಾಗಿ ಮನುಷ್ಯರು, ಪ್ರಾಣಿಗಳು, ಪಕ್ಷಿಗಳು, ಸರ್ಪಗಳು ಮುಂತಾದವು ಎಷ್ಟೋ ಇವೆ. ಹಾಗೇ ಕಾಣಿಸದ ಸೂಕ್ಷ್ಮ ಜಗತಿಯಾಗಿ ದೇವತೆಗಳು ಮುಂತಾದ ಜೀವರಾಶಿಗಳು ಇದ್ದಾರೆ. ದೇವತೆಗಳನ್ನು ಕಾಣಿಸದ ಒಂದು ಮನುಷ್ಯ ಜಾತಿಯಾಗಿ ಹೇಳುತ್ತಿದ್ದೇವೆ. ಮನುಷ್ಯನನ್ನು ಕಾಣಿಸುವ ಎರಡನೆ ವಿಧದ ಮನುಷ್ಯ ಜಾತಿಯಾಗಿ ಹೇಳುತ್ತಿದ್ದೇವೆ. ಕಾಣಿಸದವರನ್ನು ದೇವತೆ ಎಂದು ಹೇಳುತ್ತಿದ್ದೇವೆ. ದೇವತಾ ಜಾತಿಯಲ್ಲಿ ಮನುಷ್ಯರಂತೆ ಹೆಣ್ಣು, ಗಂಡು (ಸ್ತ್ರೀ, ಪುರುಷರು) ಇದ್ದಾರೆ. ಕಾಣಿಸುವ ಮನುಷ್ಯನನ್ನು, ಕಾಣಿಸದ ದೇವತೆಗಳನ್ನು ದೇವರು ಸೃಷ್ಠಿಸಿದಾಗ, ಮನುಷ್ಯ ಸೃಷ್ಠಿಸಿದ ದೇವರನ್ನು ತಿಳಿಯದೆ, ಆತನನ್ನೇ ಆರಾಧಿಸದೆ, ಅಧರ್ಮ ಮಾರ್ಗದಲ್ಲಿ ತನ್ನಂತೆ ಸೃಷ್ಠಿಸಲ್ಪಟ್ಟ ದೇವತೆಗಳನ್ನು ಆರಾಧಿಸುತ್ತಿದ್ದಾನೆ. ಯಾಜಮಾನನಂತೆ ಇರುವ ಆತ್ಮವನ್ನು ಆರಾಧಿಸದೆ, ಬೀದಿಯಲ್ಲಿ ಭಿಕ್ಷಾಟನೆ ಮಾಡುವವರ ಹತ್ತಿರಕ್ಕೆ ಹೋಗಿ ಭಿಕ್ಷೆ ಕೇಳಿದಂತಿದೆ. ಮನುಷ್ಯನಿಗೆ ದೇವರು ಏನಾದರೂ ಕೊಡಬಲ್ಲನು ಆದರೆ, ದೇವತೆಗಳು ಏನೂ ಕೊಡಲಾರರು. ಮನುಷ್ಯ ಆ ವಿಷಯವನ್ನು ತಿಳಿಯದೆ ದೇವತೆಗಳು ತಾವು ಕೋರಿರುವವು ಕೊಡಬಲ್ಲರೆಂದು ನಂಬಿ ದೇವತೆಗಳನ್ನು ಆರಾಧಿಸುತ್ತಿದ್ದಾನೆ. ಮನುಷ್ಯ ಆಧ್ಯಾತ್ಮಿಕ ಮಾರ್ಗದಲ್ಲಿ ಆತ್ಮನನ್ನು ತಿಳಿಯಬಹುದು ಆದರೆ, ಹಾಗಲ್ಲದೆ ದೇವತೆಗಳನ್ನು ಆರಾಧಿಸುವುದು ದೊಡ್ಡ

ತಪ್ಪೆಂದು ಹೇಳಬಹುದು. ಮನುಷ್ಯನಿಗಿರುವ ಧರ್ಮಗಳ ಪ್ರಕಾರ ದೇವರ ಧರ್ಮಗಳನ್ನು ಜ್ಞಾನದ ಮೂಲಕ ತಿಳಿದು ಆರಾಧಿಸಬೇಕು.

ದೇವತಾ ಪೂಜೆ ಮಾಡುವವರು ಎಷ್ಟು ದೊಡ್ಡ ಸ್ವಾಮಿಗಳಾಗಿದ್ದರೂ, ಅವರಿಗೆ ದೇವರು ಭಗವದ್ಗೀತೆಯಲ್ಲಿ ಹೇಳಿದ ಜ್ಞಾನ ತಿಳಿಯದೆಂದೇ ಹೇಳಬಹುದು. **"ಯಾರು ಅನ್ಯ ದೇವತಾರಾಧನೆ ಮಾಡುತ್ತಿದ್ದಾನೋ ಅವನು ದಾರಿ ತಪ್ಪಿ ನಡೆದವನೆಂದು"** ಭಗವದ್ಗೀತೆಯಲ್ಲಿ ರಾಜವಿದ್ಯಾ, ರಾಜಗುಹ್ಯ ಯೋಗದಲ್ಲಿ 23ನೇ ಶ್ಲೋಕದಲ್ಲಿ "ಯಜ್ಯನ್ತ್ಯ ವಿಧಿ ಪೂರ್ವಕಮ್" ಎಂದು ಹೇಳಿದ್ದಾರೆ. ದೇವರ ವಿಷಯ ತಿಳಿಯದವನು ದೇವರಿಂದ ಸೃಷ್ಟಿಸಲ್ಪಟ್ಟ ದೇವತೆಗಳನ್ನು ಆರಾಧಿಸನು. ಹಾಗೆ ದೇವತೆಗಳನ್ನು ಆರಾಧಿಸಿದ್ದಾನೆಂದರೆ ಅವನಿಗೆ ದೇವರ ಘನತೆಯಾಗಲಿ, ದೇವರ ಜ್ಞಾನವಾಗಲಿ ತಿಳಿದಿಲ್ಲವೆಂದೇ ಹೇಳಬೇಕು. ಮನೆಯಲ್ಲಿ ತಂದೆಯನ್ನು ಗೌರವಿಸದೆ ಬೀಧಿಯಲ್ಲಿ ಭಿಕ್ಷುಕನನ್ನು ಗೌರವಿಸಿದರೆ ಆಗ ಅವನು ತಂದೆಗೆ ಬೆಲೆ ಕೊಡದ ಹಾಗೇ ಅಲ್ಲವೇ! ಅದೇ ವಿಧವಾಗಿ ಸೃಷ್ಟಿಸಿದ ದೇವರನ್ನು ಬಿಟ್ಟು, ಸೃಷ್ಟಿಸಲ್ಪಟ್ಟ ದೇವತೆಗಳನ್ನು ಆರಾಧಿಸಿದರೆ ದೇವರನ್ನು ಅಗೌರವಪಡಿಸಿದಂತೇ ಅಲ್ಲವೇ! **"ಅನ್ಯ ಚಿಂತನೆ ಇಲ್ಲದೇ ನನ್ನನ್ನೇ ಆರಾಧಿಸು"** ಎಂದು ಭಗವದ್ಗೀತೆಯಲ್ಲಿ ದೇವರು ಹೇಳಿದರೆ ದೇವರ ಮಾತನ್ನು ಅಲ್ಲಗಳೆದು, ಅನ್ಯಚಿಂತೆಯಿಂದ ದೇವತೆಗಳನ್ನು ಆರಾಧಿಸುವವರು ದೇವರ ವಿಷಯ ತಿಳಿಯದವರೆಂದೇ ಹೇಳಬಹುದು.

**19) ಪ್ರಶ್ನೆ :- ಭಗವದ್ಗೀತೆಯನ್ನು ಬೋಧಿಸುವ ಒಬ್ಬ ಸ್ವಾಮೀಜಿ ಒಂದು ಹೆಣ್ಣು ದೇವತೆಯನ್ನು ಹೆಚ್ಚಾಗಿ ಪೂಜಿಸುತ್ತಿರುತ್ತಾನೆ. ಆತನನ್ನು ಕೇಳಿದರೆ ದೇವತೆಗಳೆಲ್ಲರನ್ನು ಪೂಜಿಸುವುದು ಹಿಂದೂಗಳ ಕರ್ತವ್ಯ. ಹಾಗೆ ದೇವತೆಗಳನ್ನು ಆರಾಧಿಸದವನು ಹಿಂದೂವೇ ಅಲ್ಲ ಎಂದು ಹೇಳಿದ್ದಾನೆ. ನೀವು ದೇವತೆಗಳನ್ನು ಆರಾಧಿಸಿದರೆ ಅವನಲ್ಲಿ ಅಜ್ಞಾನ**

**ವಿದೆಯೆಂದು, ಅಂತಹವನು ಜ್ಞಾನಿ ಅಲ್ಲವೆಂದು ಹೇಳುತ್ತಿದ್ದೀರ. ಅವರು ಭಗವದ್ಗೀತೆಯನ್ನು ಹೇಳುತ್ತಿದ್ದಾರೆ. ದೇವತೆಗಳನ್ನು ಆರಾಧಿಸುತ್ತಿದ್ದಾರೆ. ದೇವತೆಗಳನ್ನು ಆರಾಧಿಸುವವರದ್ದು ತಪ್ಪಾ? ಆರಾಧಿಸದ ನಿಮ್ಮದು ತಪ್ಪಾ?**

**ಉತ್ತರ :–** ಯಾರು ಮಾಡುವ ಕೆಲಸವನ್ನು ಅವರು ಸಮರ್ಥಿಸಿಕೊಳ್ಳಬಹುದು. ಆದರೂ ಆ ಕೆಲಸವನ್ನು ಕುರಿತು ಅದು ಒಳ್ಳೆಯದೋ, ಕೆಟ್ಟದೋ ಮೊದಲೇ ನಿರ್ಣಯ ನಡೆದಿರುತ್ತದೆ. ಮನುಷ್ಯ ದೈವಭಕ್ತಿಯೆಂದು ಮಾಡುವ ಕೆಲಸಗಳನ್ನು ಒಳ್ಳೆಯದು ಕೆಟ್ಟದು ಎಂದು ತೀರ್ಮಾನಿಸಿ ಹೇಳುವುದು ಬ್ರಹ್ಮವಿದ್ಯಾಶಾಸ್ತ್ರ. ಬ್ರಹ್ಮವಿದ್ಯಾ ಶಾಸ್ತ್ರದ ಪ್ರಕಾರ ಮೂರು ದೈವಗ್ರಂಥಗಳು ದೇವರಿಂದ ಹೇಳಲ್ಪಟ್ಟಿವೆ. ಆ ಮೂರು ಗ್ರಂಥಗಳಲ್ಲಿ **ಮನುಷ್ಯನನ್ನು ಸೃಷ್ಠಿಸಿದ ದೇವರನ್ನು ಆರಾಧಿಸಬೇಕೆಂದು, ಮನುಷ್ಯನೊಂದಿಗೆ ಸಮಾನವಾಗಿ ಸೃಷ್ಠಿಸಲ್ಪಟ್ಟ ದೇವತೆಗಳನ್ನು ಆರಾಧಿಸಬಾರದೆಂದು,** ಹಾಗೆ ಆರಾಧಿಸಿದರೂ, ಪ್ರಾರ್ಥಿಸಿದರೂ ದೇವರನ್ನು ಅಗೌರವಪಡಿಸಿದಂತೆಂದು, ಸೃಷ್ಠಿಕರ್ತನಾದವನನ್ನೇ ಆರಾಧಿಸಬೇಕೆಂದು ಮೂರು ದೈವಗ್ರಂಥಗಳಲ್ಲಿ ಹೇಳುವುದೇ ಅಲ್ಲದೆ, ದೇವರನ್ನು ಹೇಗೆ ಆರಾಧಿಸಬೇಕೊ ತಿಳಿಯುವುದಕ್ಕೆ ಬೇಕಾದ ಧರ್ಮಗಳೆಲ್ಲವನ್ನು ಜ್ಞಾನ ರೂಪದಲ್ಲಿ ಆ ಗ್ರಂಥಗಳಲ್ಲಿ  ಹೇಳಿದ್ದಾರೆ. ಪ್ರತಿ ಮನುಷ್ಯ ದೈವ ಗ್ರಂಥವನ್ನು ಓದಿ, ಅದರಲ್ಲಿನ ಧರ್ಮಗಳನ್ನು ತಿಳಿದು, ದೇವರನ್ನೇ ಆರಾಧಿಸಬೇಕೆಂದು ಹಾಗಲ್ಲದೆ **ದೇವತೆಗಳನ್ನು ಆರಾಧಿಸಿದರೆ ಅದು ಅಜ್ಞಾನ ಮಾರ್ಗವಾಗುತ್ತದೆಂದು** ಹೇಳಿದ್ದಾರೆ.  ಪ್ರಥಮ ದೈವಗ್ರಂಥವಾದ ಭಗವದ್ಗೀತೆಯನ್ನು ಪ್ರಜೆಗಳಿಗೆ ಬೋಧಿಸುವ ಸ್ವಾಮೀಜಿಯೇ ದೇವತೆಗಳನ್ನು ಆರಾಧಿಸುತ್ತಿದ್ದಾನೆಂದರೇ ಆತನಿಗೆ ಭಗವದ್ಗೀತೆಯಲ್ಲಿನ ಸಾರಾಂಶ ಅರ್ಥ ವಾದಂತಿಲ್ಲವೆಂದು ತಿಳಿಯುತ್ತಿದೆ. ದೇವತೆಗಳನ್ನು ಪೂಜಿಸುವವರು, ಅವರ ನಾಮಸ್ಮರಣೆ ಮಾಡುವವರು ತಪಸ್ವಿಕರು ಆಗಬಹುದು ಆದರೆ. ಯೋಗಿಗಳು ಆಗಲಾರರು. ಯೋಗಿಯಾದವನು ಮಾತ್ರ ಸೃಷ್ಠಿಕರ್ತನಾದ ದೇವರನ್ನು

ಸೇರಬಹುದು ಆದರೆ, ತಪಸ್ವಿಕರಾಗಲಿ, ವೇದಾಧ್ಯಯನ ಮಾಡುವವರಾಗಲಿ, ಯಜ್ಞಗಳು ಮಾಡುವವರಾಗಲಿ ದೇವರನ್ನು ಸೇರಲಾರರೆಂದು ದೈವಗ್ರಂಥವಾದ ಭಗವದ್ಗೀತೆ ವಿಶ್ವರೂಪ ಸಂದರ್ಶನ ಯೋಗ ಎನ್ನುವ ಅಧ್ಯಾಯದಲ್ಲಿ 48, 53 ಶ್ಲೋಕಗಳಲ್ಲಿ ಹೇಳಿದ್ದಾರೆ. ದೇವರನ್ನು ಸೇರುವುದಕ್ಕೆ ಯೋಗ ಹೊರತು ಬೇರೆ ಮಾರ್ಗವಿಲ್ಲವೆಂದು ತಿಳಿಯುತ್ತಿದೆ. ಯೋಗಗಳು **ಬ್ರಹ್ಮ, ಕರ್ಮ, ಭಕ್ತಿ ಯೋಗಗಳು** ಎಂದು ಮೂರು ಯೋಗಗಳು ಇವೆ. ದೇವತೆಗಳನ್ನು ಪೂಜಿಸುವುದು ಈ ಮೂರು ಯೋಗಗಳಿಗೆ ಸಂಬಂಧವಿಲ್ಲ. ಅಂತಹದರಲ್ಲಿ ದೇವತಾರಾಧನೆಯಿಂದ ಮನುಷ್ಯನಿಗೆ ಬರುವ ಪ್ರಯೋಜನೆ ಏನೂ ಇಲ್ಲ. ಆದ್ದರಿಂದ **ಇಂದೂ (ಜ್ಞಾನಿ) ಆದವನು ಯೋಗವನ್ನು ಆಚರಿಸುತ್ತಾನೆ ಆದರೆ, ದೇವತಾ ಪೂಜೆಯಲ್ಲಿ ಇರುವುದಿಲ್ಲ**. ಬ್ರಹ್ಮವಿದ್ಯಾ ಶಾಸ್ತ್ರದಿಂದ ದೇವತಾರಾಧನೆ ಮಾಡುವವನು ಇಂದೂವೇ ಅಲ್ಲ ಎಂದು ಹೇಳಬಹುದು. ಮೂರು ದೈವ ಗ್ರಂಥಗಳಲ್ಲಿ ಇದೇ ವಿಷಯವನ್ನೇ ಹೇಳುತ್ತಿದ್ದರೆ, ಭಗವದ್ಗೀತೆಯನ್ನು ಬೋಧಿಸುವ ಸ್ವಾಮೀಜಿ ದೇವತಾರಾಧನೆ ಮಾಡುತ್ತಿದ್ದಾನೆಂದರೇ ಆತನು ಪ್ರಜೆಗಳ ದೃಷ್ಟಿಯಲ್ಲಿ ಸ್ವಾಮೀಜಿ ಆಗಿರಬಹುದು ಆದರೆ, ದೇವರ ದೃಷ್ಟಿಯಲ್ಲಿ ಅಜ್ಞಾನಿಯಾಗಿ ಇರುವನು.

## 20) ಪ್ರಶ್ನೆ :- ಸ್ವಾಮೀಜಿಗಳಾಗಲಿ, ಬೋಧಕರಾಗಲಿ ಧರ್ಮಗಳನ್ನು ಕುರಿತು ಬೋಧಿಸುತ್ತಿಲ್ಲವಾ?

**ಉತ್ತರ :-** ಭೂಮಿ ಮೇಲೆ 12 ಮತಗಳಿರುವಾಗ ಅದರಲ್ಲಿ ದೊಡ್ಡವು ಮತ್ತು ಮುಖ್ಯವಾದವು ಮೂರು ಇವೆ. ಅವುಗಳೇ ಹಿಂದೂ, ಕ್ರೈಸ್ಥವ, ಮುಸ್ಲಿಮ್ ಮತಗಳೆಂದು ಹೇಳುತ್ತಿದ್ದಾರೆ. ಮೂರು ಮತದವರು ದೇವರು ಹೇಳಿದ ಮೂರು ದೈವ ಗ್ರಂಥಗಳನ್ನು ಇದು ನಮ್ಮದು, ಅದು ನಿಮ್ಮದು ಎಂದು ಹಂಚಿಕೊಂಡು ಹೇಳಿಕೊಳ್ಳುತ್ತಿದ್ದಾರೆ. ವಾಸ್ತವವಾಗಿ ಮೂರು ದೈವ ಗ್ರಂಥಗಳು ಯಾವ ಮತಕ್ಕೂ ಸಂಬಂಧಿಸಿರುವವು ಅಲ್ಲ. ಅವು ಮಾನವರೆಲ್ಲರಿಗೂ ಧರ್ಮಗಳನ್ನು ಬೋಧಿಸುವುದಕ್ಕೆ ಮೂರು ಕಾಲಗಳಲ್ಲಿ, ಮೂರು ದೇಶಗಳಲ್ಲಿ ಹೊರಗೆ ಬಂದಿವೆ.

ಆದರೆ ಮುಸ್ಲಿಮ್‌ರು ಅಂತಿಮ ದೈವಗ್ರಂಥವಾದ **ಖುರಾನ್ ನನ್ನು** ನಮ್ಮ ಗ್ರಂಥವೆಂದು ಹೇಳುತ್ತಿದ್ದಾರೆ. ಹಾಗೇ ಕ್ರೈಸ್ಥವರು ದ್ವಿತೀಯ ದೈವಗ್ರಂಥವಾದ **ಇಂಜೀಲ್ (ಬೈಬಿಲ್)** ಗ್ರಂಥವನ್ನು ನಮ್ಮದು ಎಂದು ಹೇಳುತ್ತಿದ್ದಾರೆ. ಕೊನೆಯದಾಗಿ ಉಳಿದಿರುವ ಪ್ರಥಮ ದೈವಗ್ರಂಥವಾದ **ತೌರಾತ್ (ಭಗವದ್ಗೀತೆ)** ಗ್ರಂಥವನ್ನು ಹಿಂದೂಗಳು ನಮ್ಮದು ಎನ್ನುತ್ತಿದ್ದಾರೆ. ಮೂರು ಮತಗಳಲ್ಲಿ ಬೋಧಕರು ಇದ್ದಾರೆ. ಆದರೂ ಮೂರು ಗ್ರಂಥಗಳಲ್ಲಿನ **ದೈವ ಧರ್ಮಗಳನ್ನು (ಆತ್ಮ ಧರ್ಮಗಳನ್ನು)** ಸರಿಯಾಗಿ ತಿಳಿಯದೆ ಸರಿಯಾದ ಭಾವವನ್ನು ಹೇಳಿಕೊಳ್ಳಲಾರದೆ ಹೋಗುತ್ತಿದ್ದಾರೆ. ದೇವರು ಹೇಳಿದ ಧರ್ಮಗಳನ್ನು ಬಿಟ್ಟುಹಾಕಿ, ಧರ್ಮಗಳಲ್ಲದವುಗಳನ್ನು ಧರ್ಮಗಳೆಂದು ಹೇಳಿಕೊಳ್ಳುವುದು ನಡೆಯುತ್ತಿದೆ. ತಾವು ಬೋಧಕರಾಗಿ ಇರುವವರು ಎಷ್ಟೋಜನ ದೈವಗ್ರಂಥದಲ್ಲಿನ ಧರ್ಮಗಳನ್ನು ತಿಳಿಯದಿರುವುದರಿಂದ ಪ್ರಜೆಗಳಿಗು ಕೂಡಾ ಅವರು ಬೋಧಿಸುವ ಬೋಧನೆಗಳಲ್ಲಿ ಧರ್ಮಗಳು ಇಲ್ಲದಂತೆ ಹೋಗುತ್ತಿವೆ. ಅದರಿಂದ ಬೋಧಿಸುವ ಬೋಧಕರ ಹತ್ತಿರ, ಬೋಧನೆಗಳು ಕೇಳುವ ಪ್ರಜೆಗಳ ಹತ್ತಿರ **'ಧರ್ಮ'** ಎನ್ನುವುದು ಇಲ್ಲದಂತೆ ಹೋಗಿ ಭಕ್ತಿ, ಆರಾಧನೆಗಳು, ಪ್ರಾರ್ಥನೆಗಳು ಉಳಿದುಹೋಗಿವೆ. **ಧರ್ಮಗಳಿಲ್ಲದ ಯಾವ ಆರಾಧನೆಯಿಂದ ದೇವರು ತಿಳಿಯುವುದಿಲ್ಲ**. ಆದ್ದರಿಂದ ಸಮಾಜದಲ್ಲಿನ ಸ್ವಾಮೀಜಿಗಳಾಗಲಿ ಪ್ರಜೆಗಳಾಗಲಿ ಅಜ್ಞಾನದಿಂದ ದೇವರಿಗೆ ದೂರವಾಗಿ ಹೋಗುತ್ತಿದ್ದಾರೆ ಆದರೆ, ದೇವರಿಗೆ ಹತ್ತಿರವಾಗಿ ಹೋಗುತ್ತಿಲ್ಲ. ಬೋಧಕರೆಲ್ಲರೂ ಧರ್ಮಗಳನ್ನು ಜ್ಞಾನವನ್ನು ಬೋಧಿಸುತ್ತಿದ್ದೇವೆಂದು ಕಾಲ ಕಳೆಯುತ್ತಿದ್ದಾರೆ ಹೊರತು, ಅದರಿಂದ ಬೋಧಕರಿಗಾಗಲಿ, ಪ್ರಜೆಗಳಿಗಾಗಲಿ ಎಂತಹ ಪ್ರಯೋಜನೆ ಇಲ್ಲವೆಂದು ಹೇಳಬಹುದು.

## 21) ಪ್ರಶ್ನೆ :– ಈ ದಿನ ಹಿಂದೂಗಳಿಗೆ ಅವರ ಧರ್ಮಗಳು ತಿಳಿದಿವೆಯಾ?

**ಉತ್ತರ :–** ಹಿಂದೂ ಎಂಬ ಪದ ಬದಲಾದ ಪದವಾಗಿ ಹೇಳಿಕೊಂಡರೆ 150 ವರ್ಷಗಳ ಹಿಂದೆ ಈ ದಿನ ಇರುವ **'ಹಿಂದೂ'** ಎಂಬ ಪದ **'ಇಂದೂ'** ಎಂಬ

ಪದವಾಗಿ ಇತ್ತು. ಇಂದೂ ಎಂಬ ಪದ ಒಂದು ಮತವನ್ನು ಸೂಚಿಸುವುದು ಅಲ್ಲದೆ ಜ್ಞಾನವನ್ನು ಸೂಚಿಸುತ್ತಾ ಜ್ಞಾನವೆಂಬ ಅರ್ಥದಿಂದ ಇರುತ್ತಿತ್ತು. ಇಂದೂಗಳು ಎಂದು ಹೇಳಿಕೊಂಡರೆ ಜ್ಞಾನಿಗಳು ಎಂದು ಅರ್ಥ. ಈ ದಿನ ಇರುವ ಮೂರು ಮತಗಳಲ್ಲಾಗಲಿ ಇಲ್ಲವೇ 12 ಮತಗಳಲ್ಲಾಗಲಿ ಜ್ಞಾನಹೊಂದಿದವರೆಲ್ಲರನ್ನು ಇಂದೂಗಳು ಎನ್ನಬಹುದು. **ಇಂದೂ** ಎನ್ನುವುದು ಒಂದು ಮತವಲ್ಲ ಜ್ಞಾನ. ಎಲ್ಲಾ ಮತಗಳ ಜ್ಞಾನಿಗಳನ್ನು ಇಂದೂಗಳು ಎಂದಾಗ ನಿಮ್ಮ ಪ್ರಶ್ನೆ ಎಲ್ಲಾ ಮತಗಳ ಜ್ಞಾನಿಗಳಿಗು ಧರ್ಮಗಳು ತಿಳಿದಿದೆಯಾ? ಎಂದು ಕೇಳಿದಂತಿದೆ. ನೀನು ಕೇಳಿರುವುದು ಸಂಕುಚಿತವಾಗಿ ಒಂದು ಮತವನ್ನು ಕುರಿತು ಕೇಳಲಿಲ್ಲ. ಈ ಪ್ರಶ್ನೆ ಎಲ್ಲಾ ಮತಗಳಿಗು ಸಂಬಂಧಿಸಿದ ಪ್ರಶ್ನೆಯಾಗಿ ಇರುವುದರಿಂದ ಎಲ್ಲಾ ಮತಗಳನ್ನು ಸೇರಿಸಿ ಉತ್ತರ ಹೇಳಬೇಕಾಗಿದೆ.

ಮುಖ್ಯವಾಗಿರುವ ಮತಗಳು ಮೂರೇ ಆಗಿರುವುದರಿಂದ ಮೂರು ಮತಗಳನ್ನು ಕುರಿತು ಹೇಳಿದರೆ ಅದು ಎಲ್ಲಾ ಮತಗಳಿಗು ಸರಿಹೋಗುತ್ತದೆ. ಮೂರು ಮತಗಳಲ್ಲಿ ದೇವರಿಗೆ ಸಂಬಂಧಿಸಿದ ಜ್ಞಾನವನ್ನು ತಿಳಿಯುವ ಜ್ಞಾನಿಗಳನ್ನು ನೋಡಿದರೆ ಅವರಲ್ಲಿ ಸ್ವಲ್ಪಮಟ್ಟಿಗೆ ಜ್ಞಾನವಿದ್ದರೂ, ಪೂರ್ತಿ ದೇವರಿಗೆ ಸಂಬಂಧಿಸಿದ ಧರ್ಮಗಳು ತಿಳಿಯವೆಂದು ಹೇಳಬೇಕಾಗಿದ್ದೇ. ದೇವರು ಭೂಮಿ ಮೇಲಕ್ಕೆ ಬಂದು ಧರ್ಮಗಳನ್ನು ತಿಳಿಸಿದಾಗ ಮಾತ್ರ ಕೆಲವರಿಗೆ ಧರ್ಮಗಳು ತಿಳಿದ ಮಾತು ವಾಸ್ತವವೇ. ಆದರೆ ಕಾಲಕಳೆದಂತೆಲ್ಲ ಮನುಷ್ಯರಲ್ಲಿ ಧರ್ಮಗಳು ತಿಳಿಯದಂತೆ ಹೋಗುತ್ತಿವೆ. ಧರ್ಮಗಳ ಸ್ಥಾನದಲ್ಲಿ ಅಧರ್ಮಗಳು ಬಂದು ಸೇರುತ್ತಿವೆ. ಉದಾಹರಣೆಗೆ ವಾಸ್ತವವಾಗಿ **'ಯಜ್ಞಗಳು' ಅಧರ್ಮವಾಗಿವೆ. ಹಾಗೇ ವೇದಗಳನ್ನು ಅಧ್ಯಾಯನ ಮಾಡುವುದು, ಧ್ಯಾನ (ತಪಸ್ಸು) ಮಾಡುವುದು, ದಾನಗಳು ಮಾಡುವುದು ಅಧರ್ಮಗಳು** ಎಂದು ಪ್ರಥಮ ದೈವಗ್ರಂಥ ಭಗವದ್ಗೀತೆಯಲ್ಲಿ ನಿಶ್ಚಯಿಸಿ ಭಗವಂತನಾಗಿ ಬಂದಿರುವ ಕೃಷ್ಣನು ಹೇಳುವುದಾಗಿದೆ. ಅದಕ್ಕು ಮೊದಲು ತ್ರೇತಾಯುಗದಲ್ಲಿ ದೇವರು ರಾವಣಬ್ರಹ್ಮನಾಗಿ ಬಂದಾಗ **"ಯಜ್ಞಗಳು ಅಧರ್ಮಗಳೆಂದು"** ಹೇಳುವುದಾಗಿದೆ. ದೇವರು ಮನುಷ್ಯನ ರೂಪದಲ್ಲಿ ಬಂದು, ಅಧರ್ಮಗಳನ್ನು ಖಂಡಿಸಿ ಧರ್ಮಗಳನ್ನು ಹೇಳಿಹೋದರೆ

ಆಗ ಸ್ವಲ್ಪಕಾಲ ಅಧರ್ಮಗಳು ಅಣಗಿಹೋಗಿ ಧರ್ಮಗಳು ಆಚರಣೆಯೊಳಗೆ ಬರುತ್ತವೆ. ನಂತರ ಸ್ವಲ್ಪಕಾಲಕ್ಕೆ ಕ್ರಮೇಣ ಧರ್ಮಗಳ ಸ್ಥಾನದಲ್ಲಿ ಅಧರ್ಮಗಳು ಬಂದು ಸೇರುತ್ತಿವೆ.

ದ್ವಾಪರ ಯುಗದ ಕೊನೆಯಲ್ಲಿ ಕೃಷ್ಣನು ಭಗವಂತನಾಗಿ ಬಂದು, ಧರ್ಮ ಸಂಸ್ಥಾಪನೆ ಮಾಡಿ, **"ಅಧರ್ಮಗಳಿಂದ ದೇವರು ತಿಳಿಯಲ್ಪಡುವುದಿಲ್ಲ"** ಎಂದು ಭಗವದ್ಗೀತೆ ವಿಶ್ವರೂಪ ಸಂದರ್ಶನ ಯೋಗ ಎನ್ನುವ ಅಧ್ಯಾಯದಲ್ಲಿ 48, 53 ಶ್ಲೋಕಗಳಲ್ಲಿ ಅಧರ್ಮಗಳನ್ನು ಕುರಿತು ಹೇಳುವುದು ನಡೆದಿದೆ. ಅಷ್ಟೇ ಅಲ್ಲದೆ ಧರ್ಮಗಳಾದ ಮೂರು ಯೋಗಗಳನ್ನು ಕುರಿತು ಕೂಡಾ ಹೇಳುವುದಾಗಿದೆ. ಅಂದಿನಿಂದ ಮೂರುಸಾವಿರ ವರ್ಷಗಳು ಕಳೆದ ನಂತರ, ಕಲಿಯುಗದಲ್ಲಿ ಧರ್ಮಗಳು ತಿಳಿಯದಂತೆ ಹೋಗಿ ಅಧರ್ಮಗಳು ಆಚರಣೆಗೆ ಬಂದಾಗ ದೇವರು ಮನುಷ್ಯನಾಗಿ ಅವತರಿಸಿ, ಪುನಃ ಧರ್ಮಗಳನ್ನು ತನ್ನ ಜ್ಞಾನದಲ್ಲಿ ಹೇಳಿದ್ದಾನೆ. ಆಗ ಸ್ವಲ್ಪ ಜನ ಧರ್ಮಗಳನ್ನು ತಿಳಿದು ಆಚರಿಸಿದಾಗ ಅಧರ್ಮಗಳ ಸ್ಥಾನ ಕಡಿಮೆಯಾಗಿದೆ. ಕೃಷ್ಣನ ನಂತರ ಮೂರು ಸಾವಿರ ವರ್ಷಗಳಿಗೆ ಅಂದರೇ ಇಲ್ಲಿಗೆ ಎರಡುಸಾವಿರ ವರ್ಷಗಳ ಹಿಂದೆ ಏಸುವಾಗಿ ಬಂದಿದ್ದ ಅವತಾರದಲ್ಲಿ ಧರ್ಮ ಸಂಸ್ಥಾಪನೆ ನಡೆದಿದೆ. ಅಂದಿನಿಂದ ಇಲ್ಲಿಗೆ ಎರಡು ಸಾವಿರ ವರ್ಷಗಳು ಕಳೆದಿದೆ ಅಲ್ಲವೆ! ಈಗ ಪುನಃ ಅಧರ್ಮಗಳು ಹೆಚ್ಚಾಗಿ ಧರ್ಮಗಳಿಗೆ ಸ್ಥಾನ ಇಲ್ಲದಂತೆ ಹೋಗಿದೆ. ಅಧರ್ಮವರರು ಹೆಚ್ಚಾಗಿಹೋಗಿದ್ದಾರೆ. ಅದಕ್ಕೆ ಜೊತೆಯಾಗಿ ಗತಕಾಲದಲ್ಲಿದ್ದ ನಾಲ್ಕು ಅಧರ್ಮಗಳ ಜೊತೆಗೆ **'ಮತ'** ಎನ್ನುವ ಐದನೆ ಅಧರ್ಮ ಬಂದು ಸೇರಿದೆ. 'ಮತ' ಎನ್ನುವ ಐದನೆ ಅಧರ್ಮ ಹಿಂದಿದ್ದ ನಾಲ್ಕು ಅಧರ್ಮಗಳಿಗಿಂತ ಹೆಚ್ಚು ಬಲವಾದುದಾಗಿದೆ. ಪೂರ್ವಕಾಲದಲ್ಲಿ ನಾಲ್ಕು ಅಧರ್ಮಗಳಿರುವಾಗ, ಈ ದಿನ ಐದು ಅಧರ್ಮಗಳ ಮಧ್ಯದಲ್ಲಿ ಧರ್ಮಗಳಿಗೆ ಸ್ಥಾನ ಇಲ್ಲದಂತೆ ಹೋಗಿದೆ. ಧರ್ಮಗಳು ಇವು ಎಂದು ಹೇಳಲಾರದ ಸ್ಥಿತಿ ಮನುಷ್ಯರಲ್ಲಿ ಏರ್ಪಟ್ಟಿದೆ. ಅಂದರೇ ಯಾವ ಮತದಲ್ಲಾಗಲಿ ಧರ್ಮಗಳೆನ್ನುವವು ತಿಳಿಯದಂತೆ ಹೋಗಿವೆ. ಇಂತಹ ಪರಿಸ್ಥಿತಿಯಲ್ಲಿ ದೇವರು ಪುನಃ ತನ್ನ ಧರ್ಮಗಳನ್ನು ಪ್ರಚಾರ ಮಾಡಬೇಕಾಗಿದೆ.

ದೇವರು ಭಗವಂತನೆಂಬ ಮನುಷ್ಯನಾಗಿ ಬಂದು ಇದಕ್ಕು ಮುನ್ನ ಹೇಳಿದವು ಗಳಿಗಿಂತ ಹೆಚ್ಚಾಗಿ ಹೇಳಬೇಕಾಗಿದೆ. ಹಾಗಾದರೇನೆ ಈ ಕಾಲದಲ್ಲಿ ಮನುಷ್ಯರಿಗೆ ದೇವರ ಧರ್ಮಗಳು ತಿಳಿಯುತ್ತವೆಂದುಕೊಳ್ಳುತ್ತೇನೆ.

**22) ಪ್ರಶ್ನೆ:- ನೀವು "ದೇವರ ಧರ್ಮಗಳು ತಿಳಿಯದೇ ಹೋಗಿವೆಯೆಂದು ಅವುಗಳನ್ನು ರಕ್ಷಿಸುವುದಕ್ಕೆ ದೇವರು ಅವತರಿಸುತ್ತಾನೆಂದು" ಹೇಳುತ್ತಿದ್ದೀರಲ್ಲ! ಈ ದಿನ ಬಹಳಜನ ಮನುಷ್ಯರು ಗುಂಪುಗಳಾಗಿ ತಯಾರಾಗಿ 'ಸಂಘಗಳು' ಎಂದು ಹೆಸರಿಟ್ಟುಕೊಂಡು ನಾವು ಹಿಂದೂ ಧರ್ಮಗಳನ್ನು ರಕ್ಷಿಸುತ್ತೇವೆಂದು ಹೇಳಿಕೊಳ್ಳುತ್ತಿದ್ದಾರೆ ಅಲ್ಲವೇ! ಧರ್ಮ ಗಳನ್ನು ರಕ್ಷಿಸುವವನು ದೇವರಾ? ಮನುಷ್ಯರಾ? ಎಂದು ಕೇಳುತ್ತಿದ್ದೇವೆ.?**

**ಉತ್ತರ :- "ಧರ್ಮಗಳನ್ನು ರಕ್ಷಿಸುವವನು ದೇವರೆಂದು, ದೇವರು ಹೊರತು ಧರ್ಮಗಳನ್ನು ಯಾರೂ ರಕ್ಷಿಸಲಾರರೆಂದು"** ದೇವರೇ ಹೇಳಿದಂತೆ ಮೂರು ದೈವಗ್ರಂಥಗಳಲ್ಲಿದೆ. **ದೇವರ ಜ್ಞಾನ ದೇವರಿಗೆ ಹೊರತು ಯಾವ ಇತರ ಮಾನವನಿಗು ತಿಳಿದಿಲ್ಲವೆಂದು,** ಆದ್ದರಿಂದ ದೇವರೇ ಧರ್ಮಗಳನ್ನು ರಕ್ಷಿಸುತ್ತಾ ನೆಂದು ಹೇಳಿದ್ದಾರೆ. ಆದರೆ ದೇವರ ಮಾತನ್ನು ಅಲ್ಲಗಳೆದು ಕೆಲವರು "ಧರ್ಮೋ ರಕ್ಷತಿ ರಕ್ಷಿತಃ" ಎನ್ನುವ ಪದವನ್ನು ಕಂಡುಹಿಡಿದು ಹೇಳುತ್ತಿದ್ದಾರೆ. ಅದರ ಪ್ರಕಾರ "ಧರ್ಮಗಳನ್ನು ರಕ್ಷಿಸಿದರೆ ಧರ್ಮವು ನಿಮ್ಮನ್ನು ರಕ್ಷಿಸುತ್ತದೆ" ಎಂದು ಹೇಳುತ್ತಿದ್ದಾರೆ. ಇದರ ಪ್ರಕಾರ ಮೊದಲು ಮನುಷ್ಯರು ಧರ್ಮಗಳನ್ನು ರಕ್ಷಿಸಬೇಕೆಂದು ಹೇಳಿಕೊಳ್ಳುವುದು ನಡೆಯುತ್ತಿದೆ. ಧರ್ಮಗಳನ್ನು ರಕ್ಷಿಸಬೇಕೆಂದು ಹೇಳುವುದು ಒಳ್ಳೆಯ ಮಾತೇ ಆದರೆ, ಮೊದಲು ಧರ್ಮಗಳು ಇಂತಹುಗಳೆಂದು ತಿಳಿದಾಗ ಅಲ್ಲವೇ! ಮನುಷ್ಯ ಧರ್ಮಗಳನ್ನು ರಕ್ಷಿಸುವುದು. ಧರ್ಮಗಳು

ಇಂತಹವೆಂದು ತಿಳಿಯದಿರುವಾಗ ಮನುಷ್ಯ ಹೇಗೆ ರಕ್ಷಿಸಬಲ್ಲನು? ಈದಿನ ಧರ್ಮಗಳಿಗೆ ಗ್ಲಾನಿ ಏರ್ಪಟ್ಟು ಅಧರ್ಮಗಳೇ ಎಲ್ಲಾಕಡೆ ಇರುವಾಗ, ಧರ್ಮಗಳು ತಿಳಿಯದಂತೆ ಕಣ್ಮರೆಯಾಗಿ ಹೋದಾಗ, ಮನುಷ್ಯರು ತಮಗೆ ತಿಳಿದವುಗಳನ್ನೇ ರಕ್ಷಿಸುತ್ತಾರೆ ಆದರೆ, ತಿಳಿಯದವುಗಳನ್ನು ರಕ್ಷಿಸಲಾರರು ಅಲ್ಲವೇ! ಪ್ರಸ್ತುತ ಕಾಲದಲ್ಲಿ ಧರ್ಮಗಳು ತಿಳಿಯದಂತೆ ಹೋಗಿ, ಅಧರ್ಮಗಳೇ ಎಲ್ಲಾಕಡೆ ಆಚರಿಸಲ್ಪಡುತ್ತಿವೆ. ಅಂತಹದರಲ್ಲಿ ಧರ್ಮರಕ್ಷಣೆ ಮಾಡುತ್ತೇವೆಂದು ಗುಂಪಾಗಿ ತಯಾರಾಗಿ ಸಂಘಗಳನ್ನು ಏರ್ಪಡಿಸಿಕೊಂಡರೂ, ಅಧರ್ಮಗಳನ್ನೇ ಧರ್ಮ ಗಳೆಂದು ತಿಳಿದು, ಅವುಗಳನ್ನೇ ಅವರು ಆಚರಿಸುತ್ತಾ ಧರ್ಮಗಳನ್ನು ರಕ್ಷಿಸುತ್ತಿದ್ದೇ ವೆಂದು ಹೇಳಿಕೊಳ್ಳುತ್ತಿದ್ದಾರೆ. ಅವರು ಆಚರಿಸುವವು ಇತರರಿಂದ ಆಚರಿಸುವಂತೆ ಮಾಡುವವು ಅಧರ್ಮಗಳೆಂದು ಅವರಿಗೆ ನಿಜವಾಗಲೂ ತಿಳಿದಿಲ್ಲ. ತಾವು ಏನು ಮಾಡುತ್ತಿದ್ದೇವೊ ತಿಳಿಯದ ಸ್ಥಿತಿಯಲ್ಲಿರುವವರು ಧರ್ಮಗಳನ್ನು ರಕ್ಷಿಸುತ್ತೇ ವೆಂದುಕೊಳ್ಳುವುದು ಹಾಸ್ಯಾಸ್ಪದವಾಗಿದೆ.

ಈ ದಿನ ಹಿಂದೂ ಧರ್ಮವನ್ನು ರಕ್ಷಿಸುತ್ತೇವೆ ಎನ್ನುವವರು ಅನೇಕ ಗುಂಪುಗಳಾಗಿ ಏರ್ಪಟ್ಟು ತಮ್ಮ ಗುಂಪುಗಳನ್ನು ಸಂಘಗಳೆಂದು ಹೇಳಿಕೊಳ್ಳುತ್ತಾ, ಆ ಸಂಘಗಳಿಗೆ ಹೆಸರುಗಳಿಟ್ಟುಕೊಂಡು ಒಬ್ಬರನ್ನು ಮೀರಿ ಮತ್ತೊಬ್ಬರು ನಾವು ಹಿಂದೂ ಧರ್ಮವನ್ನು ರಕ್ಷಿಸುತ್ತೇವೆನ್ನುತ್ತಿದ್ದಾರೆ. ಅಂತಹ ಹಿಂದೂ ಧರ್ಮ ರಕ್ಷಣಾ ಸಂಸ್ಥೆಗಳು ಇಲ್ಲವೆ ಸಂಘಗಳು ಒಂದು ಇಂದೂ ಮತದಲ್ಲಿ ಸುಮಾರು ಇಪ್ಪತ್ತಿನವರೆಗೂ ಇವೆ. ಅದರಲ್ಲಿ ನನಗೆ ತಿಳಿದಿರುವವು ಹೀಗೆ ಇವೆ.

**1) ಹಿಂದೂ ವಾಹಿನಿ**

**2) ಭಜರಂಗದಳ್**

**3) ವಿಶ್ವಹಿಂದೂ ಪರಿಷತ್**

**4) ಆರ್.ಎಸ್. ಎಸ್ (R.S.S)**

**5) ಪರುಶುರಾಂ ಪರಿವಾರ್**

**6) ಹಿಂದೂ ಜಾಗರಣ ಸಮಿತಿ (H.J.S)**

**7) ಶಿವಶಕ್ತಿ**
**8) ಹಿಂದೂ ಯುವಶಕ್ತಿ ದಳ್**
**9) ಹಿಂದೂ ಜನಶಕ್ತಿ**
**10) ಶಿವಸೇನೆ**
**11) ಸಮರಸತ ಸೇವಾ ಫೌಂಡೇಷನ್**
**12) ಹಿಂದೂ ಧರ್ಮಚಾರ್ಯ ಪ್ರತಿಷ್ಠಾನ್**
**13) ರಾಷ್ಟ್ರೀಯ ಹಿಂದೂ ಸೇನಾ**
**14) ಹಿಂದೂ ಪ್ರಸ್ಥಾನ**
**15) ವಿಶ್ವ ಧರ್ಮ ಪರಿರಕ್ಷಣ**
**16) ಪ್ರಜಾ ಹಿಂದೂ ದಳ**
**17) ಹಿಂದೂ ರಕ್ಷಕ ದಳ್**
**18) ಹಿಂದೂ ಜಾಗೃತಿ**
**19) ಹಿಂದೂ ಚೈತನ್ಯ ಸಮಿತಿ**

ಈ ವಿಧವಾದ ಹೆಸರುಗಳಿಂದ ಕೆಲವು ಹಿಂದೂ ಸಂಘಗಳು ಕೆಲಸ ಮಾಡುತ್ತಿರುವಾಗ ಭವಿಷ್ಯತ್ತಿನಲ್ಲಿ ಇನ್ನೂ ಕೆಲವು ಸಂಘಗಳು ತಯಾರಾಗಬಲ್ಲವು. ಒಂದು ವಿಧವಾಗಿ ಇವರೆಲ್ಲರ ಉದ್ದೇಶ ಒಳ್ಳೆಯದೆ. ಹಿಂದೂ ಧರ್ಮವನ್ನು ರಕ್ಷಸಬೇಕೆನ್ನುವುದು ಒಳ್ಳೆಯ ಉದ್ದೇಶವೇ ಆದರೂ ಆ ಉದ್ದೇಶವನ್ನು ಅನುಸರಿಸಿ ಕೆಲಸ ಮಾಡಲಾರದೆ ಹೋಗುತ್ತಿವೆಯೆಂದು ಹೇಳಬಹುದು. ಇದಕ್ಕೆಲ್ಲಾ ಕಾರಣ 'ಇಂದೂ ಧರ್ಮಗಳು ಇಂತಹುಗಳೆಂದು ತಿಳಿಯದಿರುವುದೇ' ಎಂದು ಹೇಳ ಬಹುದು. ಇವುಗಳಲ್ಲಿ ಕೆಲವು ಸಂಘದವರು ತಟಸ್ಥವಾಗಿ ಇರುವಾಗ, ಕೆಲವು ಸಂಘದವರು ಚುರುಕಾಗಿ ಕೆಲಸ ಮಾಡುತ್ತಿದ್ದಾರೆ. ಚುರುಕಾಗಿ ಕೆಲಸ ಮಾಡು ವವರು ಹಿಂದೂ ಧರ್ಮವನ್ನು ರಕ್ಷಿಸುತ್ತಿದ್ದಾರಾ? ಎಂದು ಪ್ರಶ್ನಿಸಿಕೊಂಡು ನೋಡಿದರೆ, ತಿಳಿಯದ ಧರ್ಮವನ್ನು ಹೇಗೆ ರಕ್ಷಿಸುತ್ತಾರೆ? ಆದ್ದರಿಂದ ಅವರು

ರಕ್ಷಿಸುವುದು ಅವರಿಗೆ ತಿಳಿದ ಅಧರ್ಮಗಳನ್ನು ಮಾತ್ರ ಎಂದು ತಿಳಿಯುತ್ತಿದೆ. ಅಧರ್ಮಗಳನ್ನು ರಕ್ಷಿಸುತ್ತಾ, ಆಚರಿಸುವುದರಿಂದ ಅಧರ್ಮಗಳಿಗೆ ಬಲ ಕೈಗೂಡುತ್ತಿದೆ. ಅದರಿಂದ ಅಸಲಾದ ಧರ್ಮಗಳಿಗೆ ಇನ್ನೂ ಹಾನಿ ಮಾಡಿದವರಾಗುತ್ತಿದ್ದೇವೆಂದು ಅವರಿಗೆ ತಿಳಿಯದಂತೆ ಹೋಗಿದೆ. **"ಹೊಡೆಯಲು ಹೋಗಿ ಹೊಡೆಸಿಕೊಂಡ"** ಗಾದೆಯಂತೆ ಧರ್ಮಗಳನ್ನು ರಕ್ಷಿಸಲು ಹೋಗಿ ಧರ್ಮಗಳನ್ನು ಭಕ್ಷಿಸಿದಂತಾಗಿದೆ. ಇದನ್ನನುಸರಿಸಿ ಹಿಂದೂ **ಧರ್ಮಗಳನ್ನು ಮನುಷ್ಯರು ರಕ್ಷಿಸಲಾರರು, ರಕ್ಷಿಸುವವನು ದೇವರೆಂದೇ** ತಿಳಿದುಹೋಗುತ್ತಿದೆ.

## 23) ಪ್ರಶ್ನೆ :- ನಿಮ್ಮ ಲೆಕ್ಕದಲ್ಲಿ ಹಿಂದೂ ಧರ್ಮಗಳನ್ನು ಉದ್ಧರಿಸುವವನು ಯಾರು?

**ಉತ್ತರ :-** ಈ ಪ್ರಶ್ನೆಗೆ ನೇರವಾಗಿ ಸಮಾಧಾನವನ್ನು ಹೇಳಿದರೆ **ಧರ್ಮಗಳನ್ನು ರಕ್ಷಿಸುವವನು ದೇವರು** ಎಂದು ಹೇಳದೆ ತಪ್ಪುವುದಿಲ್ಲ. ಈ ಮಾತು ಹೇಳುವುದಕ್ಕೆ ಪ್ರಥಮ ದೈವಗ್ರಂಥದಲ್ಲಿ ಆಧಾರವಿದೆ. ಭಗವದ್ಗೀತೆಯಲ್ಲಿ ಜ್ಞಾನಯೋಗ ಎನ್ನುವ ಅಧ್ಯಾಯದಲ್ಲಿ 7, 8 ಶ್ಲೋಕಗಳನ್ನು ನೋಡಿರಿ.

***ಶ್ಲೋ॥ 7 : ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ!।***
***ಅಭ್ಯುತ್ಥಾನಮ ಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್॥***

***ಶ್ಲೋ॥ 8 : ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚದುಷ್ಕೃತಾಮ್ ।***
***ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ ॥***

**ಭಾವಾರ್ಥ :- "ಯಾವಯಾವ ಸಮಯದಲ್ಲಿ ಧರ್ಮಕ್ಕೆ ಮುಪ್ಪು ಉಂಟಾಗಿ ಭೂಮಿಮೇಲೆ ಅಧರ್ಮ ವೃದ್ಧಿ ಆಗುತ್ತಿದೆಯೋ ಆಗ ನಾನು ಭೂಮಿಮೇಲೆ ಅವತರಿಸಿ ಸಾಧುಜನರನ್ನು ವೃದ್ಧಿ ಮಾಡುವುದು, ಅಧರ್ಮವರರನ್ನು ಇಲ್ಲದಂತೆ ಮಾಡುವುದು ಅದೇ ಕೆಲಸವಾಗಿ ಇಟ್ಟುಕೊಂಡು ಅದಕ್ಕಾಗಿ ಪ್ರತಿ ಯುಗದಲ್ಲಿ ಧರ್ಮಗಳನ್ನು ಪುನಃ ತಿಳಿಸುತ್ತಿರುತ್ತೇನೆ."**

ಈ ವಿಧವಾಗಿ ದೇವರು ಪ್ರಥಮ ದೈವಗ್ರಂಥದಲ್ಲಿ ತಿಳಿಸಿದ್ದಾನೆ. **"ಭೂಮಿಮೇಲೆ ಧರ್ಮಗಳು ತಿಳಿಯದಂತೆ ಹೋದಾಗ, ಧರ್ಮಗಳನ್ನು ತಿಳಿಸುವುದಕ್ಕಾಗಿ ನಾನೇ ಬರುತ್ತೇನೆಂದು"** ದೇವರೇ ಹೇಳಿದ್ದಾನೆ. ಅದರ ಪ್ರಕಾರ ದೇವರು ಮನುಷ್ಯರಲ್ಲಿ ಸಾಧಾರಣ ಮನುಷ್ಯನಾಗಿ ಬಂದು, ತನ್ನನ್ನು ಯಾರೂ ಗುರುತಿಸದಂತಿದ್ದು, ತನ್ನ ಧರ್ಮಗಳನ್ನು ತಾನು ತಿಳಿಸಿಹೋಗುತ್ತಾನೆ. ದೇವರು ಬಂದು ಸ್ವತಃವಾಗಿ ಧರ್ಮಗಳನ್ನು ತಿಳಿಸಿದರೂ, ಆತನು ಎಲ್ಲಿಯೂ ಗುರುತಿ ಸಲ್ಪಡುವುದಿಲ್ಲ. ತಾನು ಧರ್ಮಗಳನ್ನು ತಿಳಿಸುತ್ತೇನೆಂದಾಗಲಿ, ಧರ್ಮಗಳನ್ನು ರಕ್ಷಿಸುತ್ತೇನೆಂದಾಗಲಿ, ಎಲ್ಲಿಯೂ ತಿಳಿಸುವುದಿಲ್ಲ. ತಾನು ಯಾವ ಸಂಘವನ್ನು ಸ್ಥಾಪಿಸಿ ಗುರುತು ಹೊಂದಲಿಲ್ಲ. ತಾನು ಕಳ್ಳನಂತೆ ಬಂದು ಕಳ್ಳನಂತೆ ಹೋದಹಾಗೆ, ದೇವರು ಭೂಮಿಮೇಲಕ್ಕೆ ಯಾರಿಗೂ ತಿಳಿಯದಂತೆ ಬಂದು, ಯಾರಿಗೂ ತಿಳಿಯದಂತೆ ಹೋಗುತ್ತಿದ್ದಾನೆ. ದೇವರು ಮನುಷ್ಯನಾಗಿ ಬಂದು ಧರ್ಮಗಳನ್ನು ವಿವರವಾಗಿ ತಿಳಿಸಿ ಹೋದರೂ, ಮನುಷ್ಯರು ಅವುಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದ ಸ್ಥಿತಿಯಲ್ಲಿ ಇದ್ದಾರೆ. ಅಂತಹದರಲ್ಲಿ ಸಾಧಾರಣ ಮನುಷ್ಯರು ಹೇಳಿದರೆ ಮನುಷ್ಯರಿಗೆ ಅರ್ಥವಾಗುತ್ತದಾ? ಅರ್ಥ ಆಗುವುದಿಲ್ಲ.

ದೇವರು ಸ್ವತಃವಾಗಿ ಹೇಳಿದರೂ ಗ್ರಹಿಸಿಕೊಳ್ಳುವ ಶಕ್ತಿಯಿಲ್ಲದ ಮನುಷ್ಯರು ನಾವು ಧರ್ಮಗಳನ್ನು ಉದ್ಧರಿಸುತ್ತೇವೆಂದು ಹೇಳುವುದು, ರಕ್ಷಿಸುತ್ತೇವೆಂದು ಹೇಳುವುದು ಮನುಷ್ಯನಲ್ಲಿನ ಅಹಮ್ ಹೊರತು ಏನೂ ಇಲ್ಲ. ಮನುಷ್ಯ ಧರ್ಮಗಳನ್ನು ಉದ್ಧರಿಸುವ ಸಾಮರ್ಥ್ಯದಲ್ಲಿ ಇದ್ದರೆ ದೇವರು ಭೂಮಿಮೇಲಕ್ಕೆ ಬರಬೇಕಾದ ಕೆಲಸವೇ ಇಲ್ಲ. ಈ ದಿನ 'ಹಿಂದೂ ಮತ' ಎನ್ನುವ ವರಿಗೆ ಪ್ರತ್ಯೇಕವಾಗಿ **ಭಗವದ್ಗೀತೆ** ಇದೆಯೆಂದು ಹೇಳಿಕೊಳ್ಳುತ್ತಿದ್ದಾರೆ. ಆ ಭಗವದ್ಗೀತೆಯಲ್ಲಿ ಇಂದೂ ಧರ್ಮಗಳನ್ನು ಕುರಿತು ಚೆನ್ನಾಗಿ ಬೋಧಿಸಿದ್ದಾರೆ. ಅದರಲ್ಲಿ **"ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ"** ಎಂದು ದೇವರು ಹೇಳಿದ ಮಾತನ್ನು ವಿರೋಧಿಸಿದಂತೆ, ನಾವೇ ಧರ್ಮಗಳನ್ನು ಉದ್ಧರಿಸುತ್ತೇವೆ ನೀನು ಬರಬೇಕಾದ ಕೆಲಸವಿಲ್ಲ ಎಂದು ಹೇಳಿದಂತಿದೆ. **'ಮನುಷ್ಯ**

**ಏನೂ ಮಾಡಲಾರನು, ಮನುಷ್ಯನನ್ನು ಆಡಿಸುವುದು ನಾನೇಯೆಂದು'** ದೇವರು ಗ್ರಂಥದಲ್ಲಿ ಹೇಳಿರುವಾಗ, ನಾನೇ ಮಾಡುತ್ತೇನೆಂದು ಮನುಷ್ಯ ಎನ್ನುವುದು ಧರ್ಮವಿರುದ್ಧ ಅಲ್ಲವೇ! ಈ ದಿನ ಧರ್ಮಗಳು ತಳಹತ್ತಿಹೋಗಿ ಅಧರ್ಮಗಳು ರಾಜ್ಯವಾಳುತ್ತಿರುವಾಗ, ಅಧರ್ಮಗಳನ್ನು ಹಿಡಿದುಕೊಂಡು ಧರ್ಮಗಳಂತೆ ಭಾವಿಸಿ ಅವುಗಳನ್ನೇ ದೊಡ್ಡದಾಗಿ ಹೇಳಿಕೊಳ್ಳುತ್ತಾ, ಒಂದುಕಡೆ ಅಧರ್ಮ ಆಚರಣೆ ಮಾಡುತ್ತಾ, ನಾನು ಧರ್ಮಗಳನ್ನು ರಕ್ಷಿಸುತ್ತೇನೆಂದು ಹೇಳುವುದು ವಿಚಿತ್ರವಾಗಿದೆ.

ಉದಾಹರಣೆಗೆ ಹೇಳಿದರೆ ಮನುಷ್ಯ ಯಜ್ಞಗಳನ್ನು ಆಚರಿಸುತ್ತಾ ಅದು ಧರ್ಮಾಚರಣೆ ಎಂದು ಹೇಳುತ್ತಿದ್ದಾನೆ. ಪ್ರಥಮ ದೈವಗ್ರಂಥವಾದ ಭಗವದ್ಗೀತೆಯಲ್ಲಿ **"ಯಜ್ಞಗಳಿಂದ ದೇವರು ತಿಳಿಯಲ್ಪಡುವುದು ಸಾಧ್ಯವಿಲ್ಲ"** ಎಂದು ಭಗವಂತನಾಗಿ ಬಂದಿರುವ ದೇವರು ಹೇಳಿದ್ದಾನೆ. ಅಷ್ಟೇ ಅಲ್ಲದೆ ಅಂತಹವು ನಾಲ್ಕು ಆಚರಣೆಗಳು ಇವೆಯೆಂದು, ಅವುಗಳಿಂದ ದೇವರು ತಿಳಿಯಲ್ಪಡುವುದಿಲ್ಲಯೆಂದು ಹೇಳುವುದು ನಡೆದಿದೆ. ದೇವರು ತನ್ನ ಗ್ರಂಥದಲ್ಲಿ ಯಾವುವು ಬೇಡವೆಂದು ಹೇಳಿದ್ದಾನೋ ಅವುಗಳನ್ನೇ ಮನುಷ್ಯ ಮಾಡುತ್ತಿದ್ದಾನೆ. **"ದೇವರು ತಿಳಿಯಲ್ಪಡುವುದಿಲ್ಲ"** ಎಂದು ಹೇಳಿರುವವು ಅಧರ್ಮಗಳೆಂದು ಮನುಷ್ಯ ಗ್ರಹಿಸಲಾರದೆ ಹೋಗಿದ್ದಾನೆ. ಅಧರ್ಮ ಆಚರಣೆಯಾಗಿ ಯಜ್ಞ ಆಚರಣೆ ಮಾಡುತ್ತಿದ್ದಾನೆ. **"ಯಜ್ಞ ಶರೀರದಲ್ಲಿ ನಡೆಯುತ್ತಿದೆಯೆಂದು, ಶರೀರದಲ್ಲಿ ನಡೆಯುವ ಯಜ್ಞಗಳಿಗೆ ನಾನೇ ಅಧಿಪತಿಯೆಂದು"** ಹೇಳುತ್ತಾ, ಭಗವದ್ಗೀತೆಯಲ್ಲಿ ಅಕ್ಷರ ಪರಬ್ರಹ್ಮಯೋಗದಲ್ಲಿ ನಾಲ್ಕನೆ ಶ್ಲೋಕದಲ್ಲಿ **"ಅಧಿ ಯಜ್ಞೋಹಮೇ ವಾತ್ರ ದೇಹೇ ದೇಹಭೃತಾಂ ವರ"** ಎಂದು ಹೇಳಿದ್ದಾನೆ. ಇದರ ಪ್ರಕಾರ **ಯಜ್ಞ** ಎನ್ನುವುದು ದೇಹದಲ್ಲಿ ನಡೆಯುತ್ತಿರುವಾಗ, ಹೊರಗೆ ಯಜ್ಞಗಳನ್ನು ಮಾಡುವುದು ಅಧರ್ಮ ಅಲ್ಲವೇ! ಅಷ್ಟೇ ಅಲ್ಲದೆ ಭಗವದ್ಗೀತೆಯಲ್ಲಿ ಜ್ಞಾನಯೋಗವೆಂಬ ಅಧ್ಯಾಯದಲ್ಲಿ **"ಯಜ್ಞಗಳು ಎರಡು ವಿಧಗಳೆಂದು, ಅದರಲ್ಲಿ ಒಂದು ದ್ರವ್ಯಯಜ್ಞ ಎಂದು ಎರಡನೆಯದು ಜ್ಞಾನಯಜ್ಞವೆಂದು, ದ್ರವ್ಯ ಯಜ್ಞಕ್ಕಿಂತ ಜ್ಞಾನಯಜ್ಞವೇ ಶ್ರೇಷ್ಠವಾದುದೆಂದು"** ಹೇಳುತ್ತಾ ಜ್ಞಾನಯೋಗವೆಂಬ ಅಧ್ಯಾಯದಲ್ಲಿ 33ನೇ ಶ್ಲೋಕದಲ್ಲಿ ಈ ವಿಧವಾಗಿ ಹೇಳಿದ್ದಾನೆ ನೋಡಿರಿ.

***33ನೇ ಶ್ಲೋ॥ ಶ್ರೇಯಾನ್ ದ್ರವ್ಯಮಾಯಾ ದ್ಯಜ್ಞಾತ್ ಜ್ಞಾನ ಯಜ್ಞಃ ಪರಂತಪ।***
***ಸರ್ವಂ ಕರ್ಮಾಖಿಲಂ ಪಾರ್ಥ! ಜ್ಞಾನೇ ಪರಿಸಮಾಪ್ಯತೇ॥***

ಈ ಶ್ಲೋಕದಲ್ಲಿ **"ಹೊರಗೆ ನಡೆಯುವ ದ್ರವ್ಯಗಳ ಯಜ್ಞಕ್ಕಿಂತ ಶರೀರದೊಳಗೆ ನಡೆಯುವ ಜ್ಞಾನಯಜ್ಞವೇ ಶ್ರೇಷ್ಠವೆಂದು"** ಹೇಳಿದ್ದಾನೆ ಅಲ್ಲವೇ! ಇದರ ಪ್ರಕಾರ ಶರೀರದಲ್ಲಿ ಜ್ಞಾನವೆಂಬ ಅಗ್ನಿಯಿಂದ ಕರ್ಮಗಳನ್ನು ಸುಡುವ ಯಜ್ಞವನ್ನು ಮಾಡದೆ, ಶರೀರದ ಹೊರಗೆ ದ್ರವ್ಯಗಳನ್ನು ಸುಡುವ ಅಗ್ನಿಯಿಂದ ಯಜ್ಞಗಳನ್ನು ಮಾಡುವುದು ದೇವರ ಮಾತನ್ನು ದಿಕ್ಕರಿಸಿದಂತೆ ಅಲ್ಲವೇ! ಈ ವಿಧವಾಗಿ ಅಧರ್ಮ ಆಚರಣೆಯಾಗಿ ಬಾಹ್ಯಯಜ್ಞಗಳನ್ನು ಮಾಡುತ್ತಾ, ಅದನ್ನು ಧರ್ಮವೆಂದು ಹೇಳುವುದು ಧರ್ಮರಕ್ಷಣೆ ಆಗುತ್ತದಾ? **ಯಜ್ಞ ಆಚರಣೆ ಅಧರ್ಮವೆಂದು ತ್ರೇತಾಯುಗದಲ್ಲಿ ರಾವಣಬ್ರಹ್ಮ ಹೇಳುವುದಲ್ಲದೇ, ಎಲ್ಲಿ ಯಜ್ಞ ಆಚರಣೆ ನಡೆಯುತ್ತಿದೆಯೋ ಅಲ್ಲಿಗೆಹೋಗಿ ಯಜ್ಞಗಳನ್ನು ಧ್ವಂಸ ಮಾಡಿ ಯಜ್ಞಗಳನ್ನು ಮಾಡುವವರನ್ನು ದಂಡಿಸುವುದು, ಶಿಕ್ಷಿಸುವುದು ನಡೆದಿದೆ.** ಪ್ರಥಮ ದೈವಗ್ರಂಥವಾದ ಭಗವದ್ಗೀತೆಯಲ್ಲಿ ಯಜ್ಞಗಳ ನಿಜತತ್ತ್ವವನ್ನು ಹೇಳುತ್ತಾ **ಬಾಹ್ಯಯಜ್ಞಗಳು ಅಧರ್ಮಗಳೆಂದು, ಅಂತರ್ ಯಜ್ಞಗಳು ಧರ್ಮಗಳೆಂದು ಹೇಳುವುದಾಗಿದೆ.** ಉಳಿದ ಎರಡು ದೈವಗ್ರಂಥಗಳಲ್ಲಿ ಯಜ್ಞಗಳನ್ನು ಧರ್ಮಗಳೆಂದು ಎಲ್ಲಿಯೂ ಹೇಳಲಿಲ್ಲ. ಆದರೂ ತ್ರೇತಾಯುಗದಲ್ಲಿನ ರಾವಣಬ್ರಹ್ಮ ಮಾತನ್ನಾಗಲಿ, ದ್ವಾಪರಯುಗದಲ್ಲಿನ ಕೃಷ್ಣನ ಮಾತನ್ನಾಗಲಿ ಲೆಕ್ಕಮಾಡದೆ ಇದೇ ಧರ್ಮ ವೆನ್ನುವಂತೆ ಯಜ್ಞ ಆಚರಣೆ ಮಾಡುತ್ತಿದ್ದಾರೆ. ಇದು ಒಳ್ಳೆಯದಲ್ಲ, ಅಧರ್ಮಾಚರಣೆಯೆಂದು ನಾವು ಯಜ್ಞಗಳನ್ನು ಮಾಡಬೇಡಿರೆಂದು ಹೇಳಿದರೆ, ನಮ್ಮನ್ನು ಹಿಂದೂವೇ ಅಲ್ಲವೆಂದು ಕೆಲವರು ಹೇಳುತ್ತಿದ್ದಾರೆ. ಇಂದೂ ಧರ್ಮಗಳನ್ನು ತಿಳಿಯದವರು 'ಇಂದೂ' ಅನ್ನು 'ಹಿಂದೂ' ಎಂದು ಹೇಳುತ್ತಾ, ತಮ್ಮದು 'ಜ್ಞಾನವಾ, ಅಜ್ಞಾನವಾ' ಎಂದು ತಿಳಿಯದವರು ನಮ್ಮನ್ನು ವಿಮರ್ಶಿಸುವುದು, ಸೂರ್ಯನ ಮೇಲೆ ಉಗುಳಿದಂತಿರುತ್ತದೆ ಎಂದು ತಿಳಿಯಬೇಕು.

ಮೊದಲು ನೀವು ಯಾವ ಸ್ಥಿತಿಯಲ್ಲಿ ಇದ್ದೀರೋ ನೋಡಿಕೊಳ್ಳಿ. ಕಾಷಾಯ (ಕಾವಿ) ವಸ್ತ್ರಗಳನ್ನು ಧರಿಸಿ ಕಾಷಾಯ ಎಂದರೆ ಏನೋ ತಿಳಿಯದೆ ಹೋದರೆ ಅದು ಬಾಹ್ಯವೇಷವೇ ಆದಂತೆ, ನಾವು ಹಿಂದೂ ಧರ್ಮಗಳನ್ನು ರಕ್ಷಿಸುತ್ತೇವೆ ಎಂದು ಅವು ಯಾವುವೊ ತಿಳಿಯದೆ ಅಧರ್ಮಗಳನ್ನು ಆಸರೆಯಾಗಿ ಮಾಡಿಕೊಂಡು ಮಾತನಾಡುವವರು ಇಂದೂಗಳಾ? ಎಂದು ನಾನು ಪ್ರಶ್ನಿಸುತ್ತಿದ್ದೇನೆ. ಉಳಿದ ಹನ್ನೊಂದು ಮತಗಳಲ್ಲಾಗಲಿ, ಪಕ್ಕದಲ್ಲಿಯೇ ಕಾಣಿಸುವ ಕ್ರೈಸ್ಥವ ಮತದಲ್ಲಾಗಲಿ, ಮುಸ್ಲಿಮ್ ಮತದಲ್ಲಾಗಲಿ ಎಲ್ಲಿಯೂ ಅವರ ಮತರಕ್ಷಣಾ ಸಂಸ್ಥೆಗಳು ಇಲ್ಲ. ಅವರು ಅವರ ಜ್ಞಾನವನ್ನು ಪ್ರಚಾರ ಮಾಡುತ್ತಿದ್ದಾರೆ. ಅವರ ಗ್ರಂಥಗಳಲ್ಲಿ ಹೇಳಿದಂತೆ ನಡೆದುಕೊಳ್ಳುತ್ತಿದ್ದಾರೆ. ಯಾರೂ ಅವರ ಗ್ರಂಥಗಳಲ್ಲಿನ ಒಂದು ವಾಕ್ಯವನ್ನು ಕೂಡಾ ಅತಿಕ್ರಮಿಸಿ ನಡೆಯುವುದಿಲ್ಲ. ಹಿಂದೂ ಮತದಲ್ಲಿ ಭಗವದ್ಗೀತೆ ಪ್ರಕಾರ ನಡೆಯದಂತೆ, ಭಗವದ್ಗೀತೆಯಲ್ಲಿ ಹೇಳಿರುವುದಕ್ಕೆ ವಿರುದ್ಧವಾಗಿ ಪ್ರವರ್ತಿಸುತ್ತಾ, ನಾವು ಧರ್ಮರಕ್ಷಕರು ಎಂದು ಸಂಘಗಳನ್ನು ಸ್ಥಾಪಿಸಿಕೊಳ್ಳುವುದು ಅಜ್ಞಾನವಲ್ಲವೇ! ಈ ದಿನ ಇರುವ ಹಿಂದೂ ಸಂಸ್ಥೆಗಳಲ್ಲಿ ಕೆಲವು ದೊಡ್ಡ ಸಂಸ್ಥೆಗಳು ಇರುವಾಗ, ಕೆಲವು ಒಬ್ಬನು ಇಲ್ಲವೇ ಇಬ್ಬರಿಗೆ ಪರಿಮಿತವಾಗಿರುವ ಸಂಘಗಳು ಕೂಡಾ ಇವೆ. ಕೆಲಸ ಕಾರ್ಯ ಇಲ್ಲದ ಕೆಲವರು ಯಾವುದೋ ಒಂದು ಹೆಸರು ಇಟ್ಟುಕೊಂಡು ನಾನು ಈ ಸಂಘಕ್ಕೆ ಯಜಮಾನನೆಂದು, ರಾಷ್ಟ್ರ ಪ್ರೆಸಿಡೆಂಟ್‌ಯೆಂದು ಹೇಳಿಕೊಳ್ಳುವುದು ನಡೆಯುತ್ತಿದೆ. ಕೊನೆಗೆ ಆ ಸಂಘವನ್ನು ನೋಡಿದರೆ ಅವನು ಹೊರತು ಅವನ ಹಿಂದೆ ಒಬ್ಬನೂ ಕೂಡಾ ಇಲ್ಲದ ಸಂಘಗಳು ಕೆಲವು ಇವೆ.

ಕೆಲವರು ಅದೇ ಕೆಲಸವಾಗಿ ಇಂತಹ ಸಂಘ ಎಂದು ಹೆಸರಿಟ್ಟುಕೊಂಡು ಇತರ ಸ್ವಾಮೀಜಿಗಳನ್ನು ಬೆದರಿಸುತ್ತಾ, ನೀವು ಸರಿಯಾದ ಹಿಂದೂಗಳು ಅಲ್ಲವೆಂದು ಬೆದರಿಸಿ ಅವರಿಂದ ಹಣವನ್ನು ಕಸಿಯುತ್ತಿದ್ದಾರೆ. ಕೆಲವು ಪ್ರಾಂತಗಳಲ್ಲಿ ವ್ಯಾಪಾರಸ್ಥರನ್ನು, ಪಾರಿಶ್ರಾಮಿಕ ಉದ್ಯಮಿಗಳನ್ನು ನಾವು ಮಾವೊಯಿಷ್ಟರೆಂದು ಹೇಳುತ್ತಾ ನಿಮ್ಮಲ್ಲಿ ಈ ಲೋಪಗಳಿವೆಯೆಂದು ಬೆದರಿಸಿ ಹಣ ಕೇಳಿ ಅವರಿಂದ ವಸೂಲಿ ಮಾಡಿದಂತೆ, ಈ ದಿನ ಆಧ್ಯಾತ್ಮಿಕ ಸ್ವಾಮೀಜಿಗಳ

ಬಗ್ಗೆ ನಕ್ಸಲೈಟುಗಳಾಗಿ ಈ ದಿನ ಹಿಂದೂ ಸಂಸ್ಥೆಗಳು ಕೆಲವು ಬೆದರಿಕೆಗಳಿಗೆ ಒಳಗಾಗಿ ಧನಾರ್ಜನೆ ಮಾಡುತ್ತಿವೆ. ನನಗೆ ತಿಳಿದವುಗಳಲ್ಲಿ ಒಂದು 'ಧರ್ಮ ರಕ್ಷಣಾ ದಳ' ಎಂದು ಹೆಸರು ಇಟ್ಟುಕೊಂಡವರಿಗೆ ಇಂದೂ ಧರ್ಮಗಳಾವುವೋ ತಿಳಿದಿಲ್ಲ. ಅಷ್ಟೇಅಲ್ಲದೆ ಆ ಹೆಸರು ಇಟ್ಟುಕೊಂಡ ಸಂಘದೊಳಗಿನವರು ಹತ್ತುಜನ ಮಾತ್ರವೇ ಇದ್ದಾರೆ. ಆ ಹತ್ತುಜನ 20 ರಿಂದ 25 ವರ್ಷಗಳ ಯುವಕರು ಒಂದು ಗುಂಪಾಗಿ ಸೇರಿ, ರೌಡಿಗಳಾಗಿ ಪ್ರವರ್ತಿಸುತ್ತಾ ಕೆಲಸ ಮಾಡದಂತೆ ಬದುಕಬೇಕೆಂದು ನೋಡುತ್ತಿದ್ದರು. ಬೀಧಿ ರೌಡಿಗಳಂತೆ ಪ್ರವರ್ತಿಸುವ ಅವರು ತಿಳಿವಳಿಕೆಯಿಂದ ಒಂದು 'ಹಿಂದೂ ಧರ್ಮಗಳ ರಕ್ಷಣೆ' ಎಂಬ ಹೆಸರಿನಿಂದ ಚಲಾವಣೆ ಆಗುತ್ತಾ, ಆಧ್ಯಾತ್ಮಿಕ ಸ್ವಾಮಿಗಳಿಗೆ ಲೇಖನಗಳು ಬರೆದು, ನೀವು ಹಿಂದೂ ಧರ್ಮಗಳನ್ನು ಬೋಧಿಸುತ್ತಿಲ್ಲ, ಇತರ ಮತಗಳ ಜ್ಞಾನವನ್ನು ಹೇಳುತ್ತಿದ್ದೀರ. ನೀವು ಹಿಂದೂ ಮತ ಮುಸುಗಿನಲ್ಲಿರುವ ಕ್ರೈಸ್ಥರೆಂದೋ ಅಥವಾ ಮುಸ್ಲಿಮ್‌ರೆಂದೊ ಬೆದರಿಸುತ್ತಿದ್ದರು. 'ಹಿಂದೂ ರಕ್ಷಣಾ ದಳ್' ಎಂಬ ಹೆಸರಿನಿಂದ ಸ್ವಲ್ಪ ಹಣವಿರುವ ಸ್ವಾಮೀಜಿಯನ್ನು ಬೆದರಿಸುತ್ತಿದ್ದರು. ನಿಮ್ಮ ಆಶ್ರಮದ ಮೇಲೆ ದಾಳಿ ಮಾಡುತ್ತೇವೆಂದೊ, ನೀವು ಇತರ ಮತಗಳಿಂದ ತೆಗೆದುಕೊಂಡ ಹಣವನ್ನು ಕುರಿತು ಎಲ್ಲರಿಗೂ ಹೇಳಿ, ನಿನ್ನ ಆಶ್ರಮವನ್ನು ಮುಚ್ಚಿಹಾಕುತ್ತೇವೆಂದು ಬೆದರಿಸುವುದರಿಂದ ಸ್ವಾಮೀಜಿಗಳಾಗಿ ಇರುವವರು ಯಾರಾದರೂ ಗಲಾಟೆಗೆ ದೂರವಾಗಿ ಇರಬೇಕೆಂದು ಭಯಪಡುವುದು ಸಹಜ. ತನಗೆ ತಿಳಿದ ಜ್ಞಾನವನ್ನು ಹೇಳುತ್ತಾ, ಭಗವದ್ಗೀತೆಯನ್ನೇ ಬೋಧಿಸುವ ಸ್ವಾಮೀಜಿ ಅವರು ಕೇಳಿದ ಹಣವನ್ನು ಕೊಟ್ಟು, ಅವರಿಂದ ದೂರವಾಗಿ ಇರಬೇಕೆಂದು ಕೊಳ್ಳುವುದು ಸಹಜ. ಹಿಂದೂ ಜ್ಞಾನವೇ ಬೋಧಿಸುವ ಹಿಂದೂಗಳ ಸ್ವಾಮಿಗಳೇ ಇವರಿಗೆ ಹೊಂಚುಹಾಕುವುದರಿಂದ ಅವರು ಕೇಳಿದ ಹಣ ಅವರಿಗೆ ಸಿಗುತ್ತಿತ್ತು.

ಈ ವಿಧವಾಗಿ ಅವರು ಹಿಂದೂ ಸ್ವಾಮಿಗಳನ್ನೇ ನೀವು ಅನ್ಯಮತ ಬೋಧನೆ ಮಾಡುತ್ತಿದ್ದಾರೆಂದು ಆರೋಪಿಸುವುದರಿಂದ ಹಿಂದೂ ಸ್ವಾಮಿಗಳು ಕೂಡಾ ಸ್ವಲ್ಪ ಭಯಪಡುತ್ತಿದ್ದರು. ನಾವು 'ಹಿಂದೂ ರಕ್ಷಣಾ ದಳ' ಎಂದು ಅವರು ಹೇಳುತ್ತಲೇ ಅದೇನೋ ಸೈನ್ಯವೆಂದುಕೊಂಡು ಸ್ವಾಮಿಗಳು ಭಯ

ಪಡುತ್ತಿದ್ದರು. ಅವರು ಹತ್ತುಜನ ಮಾತ್ರವೇ ಇದ್ದಾರೆಂದು ಯಾರಿಗೂ ತಿಳಿದಿಲ್ಲ. ಹಿಂದೂಗಳಲ್ಲಿ ಕೆಲವು ದೊಡ್ಡ ಸಂಸ್ಥೆಗಳು ವಿಶ್ವ ಹಿಂದೂ ಪರಿಷತ್, ಶಿವ ಸೇನಾ, ಆರ್.ಎಸ್.ಎಸ್, ಭಜರಂಗ ದಳ್ ಮುಂತಾದವು ಇವೆ. ಐದು ಆರು ದೊಡ್ಡ ಸಂಸ್ಥೆಗಳು ಹಿಂದೂಗಳು ಇತರ ಮತದೊಳಗೆ ಹೋಗದಂತೆ, ನೋಡಿಕೊಳ್ಳುವುದಕ್ಕೆ ಮಾತ್ರ ಇವೆ. ದೊಡ್ಡ ಸಂಸ್ಥೆಗಳಾಗಿರುವವರು ಇತರ ಹಿಂದೂ ಸ್ವಾಮೀಜಿಗಳನ್ನು ಬೆದರಿಸುತ್ತಿಲ್ಲ. ಆದರೂ ಅವಲ್ಲದೇ ಉಳಿದ ಅನೇಕ ಹೆಸರುಗಳಿಂದಿರುವ ಕೆಲವು ಸಂಸ್ಥೆಗಳು ಬೇರೆಬೇರೆ ಹೆಸರುಗಳಿಂದ ಚಲಾವಣೆ ಯಾಗುತ್ತಾ, ಅವರಿಗೆ ಸ್ವಲ್ಪವೂ ಹಿಂದೂ ಧರ್ಮಗಳು ತಿಳಿಯದಿದ್ದರೂ, ಹಿಂದೂ ರಕ್ಷಕರೆಂದು ಹೇಳಿಕೊಳ್ಳುತ್ತಾ, ಹಿಂದೂಗಳನ್ನೇ ಬೆದರಿಸಿ ಹಿಂದೂ ಸ್ವಾಮೀಗಳಿಂದ ಅಕ್ರಮವಾಗಿ ಹಣವನ್ನು ಹಿಂಡಿಕೊಳ್ಳುತ್ತಿದ್ದಾರೆ. ಇಂತಹ ಕಳ್ಳ ಹಿಂದೂ ಸಂಘಗಳ ಮೇಲೆ ಯಾರಿಗೂ ಅಜಮಾಯಿಷಿ ಇಲ್ಲ. ಪೊಲೀಸ್‌ನವರು ಕೂಡಾ ಮತ ಸಂಬಂಧ ಸಂಘಗಳ ಮೇಲೆ ದೃಷ್ಠಿ ಇಡುವುದಿಲ್ಲ. 'ಮತ' ಎಂದರೇ ಸುನ್ನಿತವಾದು ದೆಂದು ಪೊಲೀಸ್‌ನವರು ಕೂಡಾ ತಲೆಕೆಡಿಸಿಕೊಳ್ಳದಿರುವುದರಿಂದ ಅಕ್ರಮವಾಗಿ ಹಿಂದೂ ರಕ್ಷಣ ಹೆಸರಿನಿಂದ ತಯಾರಾದವರು, ಹಿಂದೂ ಸ್ವಾಮಿಗಳ ಮೇಲೆಯೇ ದಾಳಿ ಮಾಡುತ್ತಾ, ಕೆಲವು ಕಡೆ ಬೆದರಿಸುತ್ತಾ, ಹಿಂದೂಗಳನ್ನೇ ನಾಶ ಮಾಡುತ್ತಿದ್ದಾರೆ. ಇಂತಹ ಕೀಡು ಹುಳಗಳಿಂದ ಹಿಂದೂ ಸಮಾಜವೇ ಕ್ಷೀಣಿಸಿ ಹೋಗುತ್ತಿದೆ.

ಹಿಂದೂ ಜ್ಞಾನ ತಿಳಿದಿಲ್ಲ, ಹಿಂದೂ ಧರ್ಮಗಳು ಯಾವುವೊ, ಎಷ್ಟು ಇವೆಯೋ ತಿಳಿದಿಲ್ಲ. ಅಂತಹವರು ಹಿಂದೂ ರಕ್ಷಕರಾ? ಹಿಂದೂ ಧರ್ಮ ಪರಿರಕ್ಷಕರಾ? ಅನೇಕ ಪ್ರಾಂತಗಳಲ್ಲಿ ತಯಾರಾದ ಚಿಕ್ಕ ಚಿಕ್ಕ ಹಿಂದೂ ಸಂಘಗಳು ಹಿಂದೂಗಳನ್ನು ಉದ್ಧರಿಸುತ್ತಿಲ್ಲ. ಅಂತಹವರು ಹಿಂದೂ ಧರ್ಮವನ್ನು ನಾಶ ಮಾಡುತ್ತಾ, ಅಧರ್ಮಗಳ ಪ್ರಕಾರ ಪ್ರವರ್ತಿಸುತ್ತಿದ್ದಾರೆ. ಒಬ್ಬನು ಒಂದು ಗುಂಪನ್ನು ತಯಾರಿ ಮಾಡಿಕೊಂಡು ಅದಕ್ಕೆ ನಾಯಕನಾಗಿರುತ್ತಾ ಒಂದು 'ಹಿಂದೂ ರಕ್ಷಣಾ' ಹೆಸರಿನಿಂದ ಒಂದು ಸಂಘದ ಹೆಸರು ಇಟ್ಟುಕೊಂಡು, ಹಿಂದೂ ಮತದಲ್ಲಿ ಸಕ್ರಮವಾಗಿರುವ ಸ್ವಾಮೀಜಿಗಳನ್ನು ಬೆದರಿಸುತ್ತಿದ್ದಾರೆ. ಬೆದರಿಕೆಗಳಿಗೆ

ಭಯಪಡದೆಹೋದರೆ ಹತ್ತುಜನ ಇನ್ನೂ ಸ್ವಲ್ಪಜನ ಬಾಡಿಗೆ ಮನುಷ್ಯರನ್ನು ಕರೆದುಕೊಂಡು ಹೋಗಿ ಅವರ ಮಾತು ಕೇಳದ ಸ್ವಾಮೀಜಿಗಳ ಮೇಲೆ ನೀವು ಅನ್ಯಮತ ಪ್ರಚಾರ ಮಾಡುತ್ತಿದ್ದೀರೆಂದು ಆರೋಪಣೆಯಿಂದ ದಾಳಿ ಮಾಡುತ್ತಿದ್ದಾರೆ. ಹಾಗೆ ದಾಳಿಗಳು ಮಾಡಿದರೆ ಯಾವ ಸ್ವಾಮೀಜಿ ಆದರೂ ಭಯಪಡದೆ ತಪ್ಪುವುದಿಲ್ಲ ಅಲ್ಲವೇ! ಅದರಿಂದ ಹಿಂದೂ ಧರ್ಮಗಳು ನಾಶವಾಗದೆ ಅಭಿವೃದ್ಧಿ ಹೇಗೆ ಆಗುತ್ತವೆ?

ಇತರ ಮತಗಳಲ್ಲಿ ಇಲ್ಲದ ರಕ್ಷಣ ಸಂಸ್ಥೆಗಳು ಒಂದು ಹಿಂದೂ ಮತದಲ್ಲಿಯೇ ಏಕೆ ಬಂದಿವೆ? ಎಂದು ಯಾರೂ ಪ್ರಶ್ನಿಸುತ್ತಿಲ್ಲ. ಹಿಂದೂಗಳು ಇತರ ಮತದೊಳಗೆ ಹೋಗುತ್ತಿದ್ದಾರೆ. ಆದ್ದರಿಂದ ಹಿಂದೂಮತ ಕ್ಷೀಣಿಸಿ ಹೋಗುತ್ತಿದೆಯೆಂದು, ಅದಕ್ಕಾಗಿಯೇ ಹಿಂದೂ ರಕ್ಷಣ ಸಂಸ್ಥೆಗಳೆಂದು ಕೆಲವರು ಹೇಳುತ್ತಿದ್ದಾರೆ. ಇತರ ಮತದವರು ಅವರ ಜ್ಞಾನವನ್ನು ಪ್ರಚಾರ ಮಾಡುತ್ತಿದ್ದಾರೆ. ಆದ್ದರಿಂದ ಬಹಳಜನ ಇತರ ಮತಗಳಿಗೆ ಹೋಗುವುದು ನಡೆದಿದೆ. ಹಾಗೆ ಅವರು ಇತರೆ ಮತಗಳಿಗೆ ಹೋಗುವುದಕ್ಕೆ ಮುಖ್ಯ ಕಾರಣ ಹಿಂದೂ ಮತದಲ್ಲಿರುವ **“ಕುಲ ವಿವಕ್ಷ”** ಮೊದಲ ಕಾರಣವಾಗಿದ್ದು, ಹಿಂದೂ ಮತದಲ್ಲಿ **ದೇವರ ಜ್ಞಾನವನ್ನು ಭಗವದ್ಗೀತೆ ಪ್ರಕಾರ ಬೋಧಿಸದೆ ಹೋಗುವುದು** ಎರಡನೇ ಕಾರಣವಾಗಿದೆ. ಜ್ಞಾನದ ಮೇಲೆ ಆಸಕ್ತಿ ಇರುವವರು ಹಿಂದೂ ಮತದಲ್ಲಿ ಜ್ಞಾನ ಲಭಿಸುವುದಿಲ್ಲ, ಪೂಜೆಗಳು ಹೊರತು ಏನೂ ಇಲ್ಲವೆಂದು ಬೇಸರಗೊಂಡು ಇತರ ಮತದೊಳಗೆ ಬಹಳಜನ ಹೋಗುವುದು ನಡೆದಿದೆ.

ಈ ದಿನ ಹಿಂದೂ ರಕ್ಷಣಾ ಸಂಸ್ಥೆಗಳಾಗಿ ಹೆಸರು ಇಟ್ಟುಕೊಂಡವರು ಯಾರಾದರೂ ಭಗವದ್ಗೀತಾ ಜ್ಞಾನವನ್ನು ಪ್ರಜೆಗಳಿಗೆ ಬೋಧಿಸುತ್ತಿದ್ದಾರಾ? ಎಷ್ಟೋತ್ತಿದ್ದರೂ ಇತರ ಮತಗಳ ಮೇಲೆ ದ್ವೇಷವನ್ನು ಪ್ರಜೆಗಳಿಗೆ ಅರೆದು ಹೊಯ್ಯುವುದು ಹೊರತು, ನಮ್ಮ ಮತದಲ್ಲಿನ ಜ್ಞಾನವನ್ನು ಎಷ್ಟರಮಟ್ಟಿಗೆ ಬೋಧಿಸುತ್ತಿದ್ದೇವೆಂದು ಸ್ವಲ್ಪವಾದರೂ ಆಲೋಚಿಸುತ್ತಿದ್ದಾರಾ? ನನ್ನ ಅನುಭವ ದಲ್ಲಿ ನಾವು ಸ್ವಚ್ಛವಾದ ಹಿಂದೂ ಧರ್ಮಗಳನ್ನು ಬೋಧಿಸುತ್ತಾ ನೂರು ಗ್ರಂಥಗಳನ್ನು ಶಾಸ್ತ್ರಬದ್ಧವಾದ ಜ್ಞಾನದಿಂದ ಬರೆದಿದ್ದೇವೆ. ಅದ್ವೈತ, ವಿಶಿಷ್ಟಾದ್ವೈತ,

ದ್ವೈತ ಸಿದ್ಧಾಂತಗಳಂತೆ **"ತ್ರೈತ ಸಿದ್ಧಾಂತ"** ವನ್ನು ಪ್ರತಿಪಾದಿಸಿ ಒಂದೇ ಸಿದ್ಧಾಂತದ ಮೇಲೆ ನೂರು ಗ್ರಂಥಗಳನ್ನು ಬರೆದಿದ್ದೇವೆ. ಇಂದೂ ಜ್ಞಾನ, ಇಂದೂ ಧರ್ಮ ದೊಡ್ಡದೆಂದು ಎಲ್ಲಾ ಮತದವರನ್ನು ಒಪ್ಪಿಸಿದ್ದೇವೆ. ಅವರಿಗೂ ಕೂಡಾ ಅವರ ಧರ್ಮಗಳನ್ನು ತಿಳಿಸಿ, ಇವು ಇಂದೂ ಧರ್ಮಗಳೆಂದು ತಿಳಿಸಿದ್ದೇವೆ. ನಮ್ಮನ್ನು ಮೂರು ಮತದವರು ಗೌರವಿಸುತ್ತಿದ್ದಾರೆ. ಆದರೆ ಕೆಲವು ಹಿಂದೂ ಸಂಸ್ಥೆಗಳಿಗೆ ನಾವು ಅನ್ಯಮತ ಪ್ರಚಾರಕರಾಗಿ ಕಾಣಿಸುತ್ತಿದ್ದೇವೆ. ಅವರ ಬೆದರಿಕೆಗಳಿಗೆ ಬಗ್ಗಲಿಲ್ಲವೆಂದು ದಾಳಿಗಳು ಕೂಡಾ ಮಾಡಿದ್ದಾರೆ. ಆದರೂ ಭಯಪಡಲಿಲ್ಲವೆಂದು ಸೋಷಿಯಲ್ ಮೀಡಿಯ ಪೇಸ್ ಬುಕ್‌ನಲ್ಲಿ ಅನೇಕ ವಿಧವಾದ ಆರೋಪಣೆಗಳನ್ನು ಮಾಡುತ್ತಾ, ನಾವು ಹಿಂದೂಗಳಲ್ಲ ಎಂದು ಪ್ರಚಾರ ಇಂದಿಗೂ ಮಾಡುತ್ತಿದ್ದಾರೆ. ಅವರು ಎಷ್ಟು ದುಷ್ಪ್ರಚಾರ ಮಾಡಿದರೂ ನಾವು ಯಾವುದಕ್ಕೂ ತಲೆಕೆಡಿಸಿಕೊಳ್ಳುತ್ತಿಲ್ಲ. ನಾನು ಹೇಳುವುದು ಹಿಂದೂ ಜ್ಞಾನ ಆಗಿರುವುದರಿಂದ ಅನೇಕಜನ ಹಿಂದೂಗಳು ನನ್ನನ್ನು ಗೌರವಿಸುತ್ತಿರುವಾಗ ಪಕ್ಕದಲ್ಲಿ ನಾಯಿಯಂತೆ ಬೊಗಳುವವರ ಬಗ್ಗೆ ತಲೆಕೆಡಿಸಿ ಕೊಳ್ಳಬೇಕಾದ ಅಗತ್ಯವಿಲ್ಲ.

## 24) ಪ್ರಶ್ನೆ :– ನೀವು ರಾಮನನ್ನು ದೇವರಲ್ಲ ಎಂದಿದ್ದೀರೆಂದು ಅವರು ಫೇಸ್‌ಬುಕ್‌ನಲ್ಲಿ ಪೋಸ್ಟ್‌ಗಳು ಇಡುತ್ತಿದ್ದಾರಲ್ಲ! ಅದಕ್ಕೆ ನೀವೇನು ಹೇಳುತ್ತೀರಾ?

**ಉತ್ತರ :–** ನಾನು ಹೇಳುವುದು ಆಧ್ಯಾತ್ಮಿಕ. ಆತ್ಮಗೆ ಸಂಬಂಧಿಸಿದ ವಿಷಯಗಳನ್ನು ಹೇಳುವುದೇ ನನ್ನ ಕೆಲಸವಾಗಲಿ ರಾಮನಿಂದ ನನಗೆ ಕೆಲಸವಿಲ್ಲ. ಈ ಮಧ್ಯಕಾಲದಲ್ಲಿ **"ದ್ರಾವಿಡ ಬ್ರಾಹ್ಮಣ"** ಎಂಬ ಗ್ರಂಥವನ್ನು ಬರೆದಾಗ ಸಂದರ್ಭಾನುಸಾರ **ನಡೆದ ಚರಿತ್ರೆ**ಯನ್ನು ಹೇಳುತ್ತಾ 'ರಾಮನು ವಾಲಿಯನ್ನು ಸಾಯಿಸಿದ್ದಾನೆ' ಎಂದು ಬರೆದಿದ್ದೇವೆ. ಅದು ಎಲ್ಲರಿಗೂ ತಿಳಿದ ಚರಿತ್ರೆ ಆಗಿರುವುದರಿಂದ ಆ ಮಾತಿನಲ್ಲಿ ತಪ್ಪಿಲ್ಲ ಅಲ್ಲವೇ! ಎಲ್ಲಾ ರಾಮಾಯಣಗಳಲ್ಲಿ ರಾಮನು ವಾಲಿಯನ್ನು ಸಾಯಿಸಿರುವುದು ಇರುವ ವಿಷಯವೇ ಅಲ್ಲವೇ! ನಂತರ **"ರಾವಣ ಬ್ರಹ್ಮ"** ಗ್ರಂಥ ಬರೆದಾಗ ಅದರಲ್ಲಿ "ರಾಮನು ರಾವಣನನ್ನು

ಸಾಯಿಸಿದ್ದಾನೆ" ಎಂದು ಬರೆದಿದ್ದೇವೆ. ಅದು ಕೂಡಾ ಚರಿತ್ರೆಯಲ್ಲಿನ ವಿಷಯವೇ. ಎಲ್ಲರೂ ಹೇಳುವ ವಿಷಯವೇ. ಅಷ್ಟೇ ಹೊರತು ರಾಮನನ್ನು ದೇವರೆಂದಾಗಲಿ ಅಥವಾ ರಾಮನು ದೇವರಲ್ಲ ಎಂದಾಗಲಿ ನಾನು ಎಲ್ಲಿಯೂ ಬರೆಯಲಿಲ್ಲ. ಹಾಗೆ ಬರೆಯುವ ಅವಶ್ಯಕತೆ ನನಗೆ ಇಲ್ಲ. ರಾಮನು ಧರ್ಮವರನೆಂದಾಗಲಿ, ಅಧರ್ಮವರನೆಂದಾಗಲಿ ಎಲ್ಲಿಯೂ ಬರೆಯಲಿಲ್ಲ. ನಡೆದ ಚರಿತ್ರೆಯನ್ನು ಬರೆದಿದ್ದೇವೆ ಹೊರತು, ರಾಮನ ಪ್ರಸ್ಥಾವನೆ ಏನೂಯಿಲ್ಲ. ಆದರೂ ಅದೇ ಕೆಲಸವಾಗಿ ಆರೋಪಣೆ ಮಾಡಬೇಕೆಂದುಕೊಳ್ಳುವವರು ಇರುವವು ಅಲ್ಲದೆ ಹೋದರೂ, ಇಲ್ಲದವುಗಳನ್ನು ಕಲ್ಪಿಸಿ ಹೇಳುವುದು ಪರಿಪಾಟವಾಗಿದೆ.

ಒಂದು ವಿಷಯವನ್ನು ಗಮನಿಸಿರಿ. ನಾನು ಒಂದು ಸಂದರ್ಭದಲ್ಲಿ ಮಾತನಾಡುತ್ತಾ "ನಾನು ಸ್ನಾನ ಮಾಡದೆ ಗುಡಿಗೆ ಹೋಗುವುದಿಲ್ಲ ಯಾವ ದೇವರಿಗು ಮುಗಿಯುವುದಿಲ್ಲ" ಎಂದು ಹೇಳಿದ್ದೇನೆ ಅಂದುಕೊಳ್ಳಿ. ಅದನ್ನೇ ಗ್ರಂಥದಲ್ಲಿ ಕೂಡಾ ಬರೆದಿದ್ದೇನೆ ಎಂದುಕೊಳ್ಳಿ. ಆಗ ನನ್ನನ್ನು ತಪ್ಪಾಗಿ ಅರೋಪಣೆ ಮಾಡುವವರು "ನಾನು ಸ್ನಾನ ಮಾಡದೆ" ಎಂಬ ಮಾತನ್ನು ತೆಗೆದುಹಾಕಿ "ನಾನು ಗುಡಿಗೆ ಹೋಗುವುದಿಲ್ಲ, ಯಾವ ದೇವರಿಗು ಮುಗಿಯುವುದಿಲ್ಲ" ಎಂದು ಮಾತ್ರ ತೋರಿಸಿದರೆ ಅದು ತಪ್ಪಾಗಿಯೇ ಕಾಣಿಸುತ್ತದೆ, ನಾನು ನಾಸ್ತಿಕನಾಗಿಯೇ ಕಾಣಿಸಬಹುದು. "ನಾನು ಸ್ನಾನ ಮಾಡದೆ" ಎಂಬ ಮಾತನ್ನು ಹೇಳದಂತೆ "ಗುಡಿಗೆ ಹೋಗುವುದಿಲ್ಲ, ದೇವರಿಗೆ ಮುಗಿಯುವುದಿಲ್ಲ" ಎಂದು ಮಾತ್ರ ಹೇಳಿದಂತೆ ತೋರಿಸುವುದು ಅದೇ ಕೆಲಸವಾಗಿ ದುಷ್ಪ್ರಚಾರ ಮಾಡಿದಂತೆ ಅಲ್ಲವೇ! ಅದೇ ವಿಧವಾಗ ಕೆಲವರು ಪೋಲಿ ಹುಡುಗರು ಯುವಕರಾಗಿದ್ದು, ಎಲ್ಲಾ ದುರಭ್ಯಾಸಗಳಿಗೆ ಒಳಗಾದವರು ಇತರರನ್ನು ಬ್ಲಾಕ್‌ಮೇಲ್ ಮಾಡಿ, ಅವರ ಮರ್ಯಾದೆ ತೆಗೆದರೆ ಸುಲಭವಾಗಿ ಹಣ ಬರುತ್ತದೆಂದುಕೊಂಡವರು ಯಾವುದೋ ಒಂದು 'ಧರ್ಮ ರಕ್ಷಣಾ ಸಂಘ' ಎಂದು ಹೆಸರಿಟ್ಟುಕೊಂಡು, ಆರೋಪಣೆಗಳು ಮಾಡುವುದು ಈದಿನಗಳಲ್ಲಿ ಅಲ್ಲಲ್ಲಿ ನಡೆಯುತ್ತಿದೆ. ಅಂತಹವರು ನನ್ನನ್ನು ತಪ್ಪಾಗಿ ಆರೋಪಿಸುವ ನಿಮಿತ್ತ ಅದೇ ಕೆಲಸವಾಗಿ ನಾನು ರಾಮನನ್ನು ದೇವರು ಅಲ್ಲವೆಂದು

ಹೇಳಿದಂತೆ ಪ್ರಚಾರ ಮಾಡುತ್ತಿದ್ದಾರೆ ಹೊರತು, ಅದರಲ್ಲಿ ಯಾವಮಾತ್ರ ಸತ್ಯವಿಲ್ಲ. ನಾನು ಒಬ್ಬ ಸಿದ್ಧಾಂತಕರ್ತನು. ಎಲ್ಲರಂತೆ ಬೋಧಕನಲ್ಲ. ನನ್ನ ಸಿದ್ಧಾಂತವನ್ನು ಕುರಿತು ಹೇಳುತ್ತಿರುತ್ತೇನೆ ಹೊರತು ರಾಮನನ್ನು ಕುರಿತು ದೇವರೆಂದಾಗಲಿ, ದೇವರಲ್ಲ ಎಂದಾಗಲಿ ಹೇಳಬೇಕಾದ ಅಗತ್ಯವಿಲ್ಲ. ನಾನು ಹಾಗೆ ಹೇಳಿದ್ದೇನೆಂಬುವುದು ಪೂರ್ತಿ ಅಸತ್ಯ. ನಾನು ಹಾಗೆ ಬರೆದಿದ್ದರೆ ನಾನು ಬರೆದಿರುವ ನೂರು (100) ಗ್ರಂಥಗಳಲ್ಲಿ ಎಲ್ಲಾದರೂ ತೋರಿಸಿ ನಿರೂಪಿಸಬಹುದು. ಹಾಗೆ ಬರೆಯುವ ಅಗತ್ಯ ನನಗಿಲ್ಲ. ಆದ್ದರಿಂದ ಅದು ನನ್ನನ್ನು ಬ್ಲಾಕ್‌ಮೇಲ್ ಮಾಡಬೇಕೆಂದುಕೊಳ್ಳುವುದು ಹೊರತು ಬೇರೆ ಉದ್ದೇಶವೇನು ಇಲ್ಲ. ಪ್ರತಿ ತಿಂಗಳು ಸುಮಾರು ಇಪ್ಪತ್ತು ಸಾವಿರ ಮಂದಿ ನನ್ನ ಭಕ್ತರು ಬಂದು, ನನ್ನ ಉಪನ್ಯಾಸವನ್ನು ಕೇಳಿ ಹೋಗುತ್ತಿರುತ್ತಾರೆ. ಇಲ್ಲಿಗೆ ನಮ್ಮ ಭಕ್ತರು ಲಕ್ಷಕ್ಕೆ ಮೇಲ್ಪಟ್ಟು ಇದ್ದಾರೆ. ಮುಂಬರುವ ಕಾಲದಲ್ಲಿ ಇನ್ನೂ ಹೆಚ್ಚಾಗುತ್ತಾರೆ. ಅವರೆಲ್ಲರಿಗೂ ಕಾಣಿಸದ ಲೋಪ 'ಧರ್ಮ ರಕ್ಷಣಾ ಸಂಘ' ಎನ್ನುವ ಹೆಸರಿಟ್ಟುಕೊಂಡ ಕುಡುಕರಿಗೆ ಕಾಣಿಸಿದೆ ಎನ್ನುವುದು ವಿಚಿತ್ರ ಅಲ್ಲವೇ!

ನಮ್ಮ ಬೋಧನೆಗಳಿಂದ ಇಂದೂತ್ವ(ಹಿಂದೂತ್ವ) ಬಲಪಟ್ಟು, ಎಲ್ಲರೂ ಜ್ಞಾನಿಗಳಾಗುವುದಕ್ಕೆ ಅವಕಾಶವಿದೆ. ನಮ್ಮ ಬೋಧನೆಗಳಿಂದ ಇತರ ಮತದವರು ಅವರ ಮತಗಳಲ್ಲಿ ಕೂಡಾ ನಾವು ಹೇಳುವ ಜ್ಞಾನವು ಇದೆಯೆಂದು, ಭಗವದ್ಗೀತೆ ಜ್ಞಾನ ಎಲ್ಲಾ ಮತಗಳಲ್ಲಿ ಕೂಡಾ ಇದೆಯೆಂದು ತಿಳಿದು, ಎಲ್ಲಾ ಮತದವರ ಐಕ್ಯಮತ್ಯವಾಗಿ ಇರುವುದಕ್ಕೆ, ಮತಸಾಮರಸ್ಯವಾಗಿ ಪ್ರವರ್ತಿಸುವುದಕ್ಕೆ ಅವಕಾಶವಿದೆ. ನಾವು ಹೇಳುವ ಜ್ಞಾನದಿಂದ ನಮ್ಮ **"ತ್ರೈತ ಸಿದ್ಧಾಂತ"** ಭಗವದ್ಗೀತೆಯಲ್ಲಿ ಪುರುಷೋತ್ತಮ ಪ್ರಾಪ್ತಿ ಯೋಗ ಎಂಬ ಅಧ್ಯಾಯದಲ್ಲಿ 16, 17ನೇ ಶ್ಲೋಕಗಳಲ್ಲಿ **ಕ್ಷರ, ಅಕ್ಷರ, ಪುರುಷೋತ್ತಮರಾಗಿ** ಇದೆಯೆಂದು ಇಂದೂಗಳು ಗ್ರಹಿಸುತ್ತಿದ್ದಾರೆ. ಹಾಗೇ ಇಂಜೀಲ್ (ಬೈಬಿಲ್) ಗ್ರಂಥದಲ್ಲಿ ಮತ್ತಾಯ ಸುವಾರ್ತೆಯಲ್ಲಿ 28ನೇ ಅಧ್ಯಾಯದಲ್ಲಿ 19ನೇ ವಚನದಲ್ಲಿ **ತಂದೆ, ಕುಮಾರ, ಪರಿಶುದ್ಧಾತ್ಮ** ಎಂಬ ಹೆಸರಿಂದ ಭಗವದ್ಗೀತೆಯಲ್ಲಿನ ತ್ರೈತ ಸಿದ್ಧಾಂತ ಇದೆಯೆಂದು ಗ್ರಹಿಸುತ್ತಿದ್ದಾರೆ. ಹಾಗೇ ಖುರಾನ್ ಗ್ರಂಥದಲ್ಲಿ ಸುರಾ 50 ರಲ್ಲಿ,

ಆಯತ್ 21ರಲ್ಲಿ **ಓಡಲ್ಪಡುವವನು, ಓಡಿಸುವವನು, ಸಾಕ್ಷಿಯಾಗಿ ನೋಡುವವನು** ಎಂದು ಭಗವದ್ಗೀಯಲ್ಲಿ ಮತ್ತು ಬೈಬಲ್‌ನಲ್ಲಿ ಹೇಳಿದ ಮೂವರು ಪುರುಷರ ತ್ರೈತ ಸಿದ್ಧಾಂತ ಇದೆಯೆಂದು ಗ್ರಹಿಸುತ್ತಿದ್ದಾರೆ. ಹಾಗೆ ಗ್ರಹಿಸಿದ ಅವರು ಎಲ್ಲಾ ಮತಗಳಲ್ಲಿ ಒಂದೇ ಜ್ಞಾನವಿದೆಯೆಂದು ತಿಳಿದು, ಮತ ಸಾಮರಸ್ಯವನ್ನು ಪ್ರದರ್ಶಿಸುತ್ತಿದ್ದಾರೆ. ಹಿಂದೂಧರ್ಮ ರಕ್ಷಣಾ ಸಂಸ್ಥೆಗಳೆಂದು ಹೆಸರಿಟ್ಟುಕೊಂಡವರು ಇತರ ಮತಗಳನ್ನು ದೂಷಿಸುವುದು, ದ್ವೇಷಿಸುವುದರಿಂದ ಮತಕಲಹಗಳು ಏರ್ಪಡುತ್ತಿವೆ. ಧರ್ಮರಕ್ಷಣೆ ಎನ್ನುತ್ತಾ ಅನ್ಯಮತಗಳನ್ನು ಬೇರೆ ವಿಧವಾಗಿ ಹೇಳುತ್ತಾ, ಅವರ ದೇವರು ಬೇರೆ, ನಮ್ಮ ದೇವರು ಬೇರೆ ಎಂದು ಹೇಳುವುದರಿಂದ ಮತಕಲಹಗಳು ಬರುತ್ತಿವೆ. ನಮ್ಮ ಬೋಧನೆಗಳಿಂದ ಎಲ್ಲರ ದೇವರು ಒಬ್ಬನೇ, ಎಲ್ಲಾ ಮತಗಳ ಜ್ಞಾನ ಒಂದೇಯೆಂದು ತಿಳಿದು ಎಲ್ಲರೂ ಒಗ್ಗಟ್ಟಾಗಿ, ಪ್ರೀತಿಯಿಂದಿರುವುದು ಒಳ್ಳೆಯದೊ, ಅಲ್ಲವೊ ಆಲೋಚಿಸಿರಿ. ಮತರಕ್ಷಣೆ ಎಂಬ ಹೆಸರು ಹೊಂದಿದ ಯುವಸಂಘಗಳಿಂದ ಅಧರ್ಮಗಳನ್ನು, ಅಜ್ಞಾನವನ್ನು ಪ್ರೇರೇಪಿಸುವ ಮೂರ್ಖ ಸಮುದಾಯದಿಂದ, ಇತರ ಮತಗಳನ್ನು ದೂಷಿಸಿ ಸಮಾಜದಲ್ಲಿ ಹೆಸರು ತಂದುಕೊಳ್ಳಬೇಕೆಂದುಕೊಳ್ಳುವ ಅನಾಮಿಕರಿಂದ, ಸ್ವಲ್ಪವಾದರೂ ಧರ್ಮಗಳನ್ನು ತಿಳಿಯದ ಅಧರ್ಮರಿಂದ, ಸಮ ಸಮಾಜವಾಗಿ ಇರುವ ಮನುಷ್ಯರಲ್ಲಿ **ಮತ** ಎಂಬ ಕಿಚ್ಚನ್ನು ಇಟ್ಟು ಸಮಾಜದಲ್ಲಿ ಹಿಂಸೆಯನ್ನು ಪ್ರೇರೇಪಿಸುವವರಿಂದ ಮನುಷ್ಯರೆಲ್ಲರಿಗೂ, ಎಲ್ಲಾ ಮತದವರಿಗು ಪ್ರಮಾದ ಉಂಟಾಗುತ್ತಿದೆ. ಒಂದು ಕಡೆ ಮತವೆಂಬ ಹೆಸರಿನಿಂದ ಕಿಚ್ಚು ಎಬ್ಬಿಸಿ, ಕಿಚ್ಚು ಇಟ್ಟವರು ಹಾಯಾಗಿ ಮನೆಯಲ್ಲಿರುವಾಗ, ಆ ಕಿಚ್ಚಿಗೆ ಅಮಾಯಕ ಪ್ರಜೆಗಳು ಬಲಿಯಾಗುತ್ತಿದ್ದಾರೆ. ಆದ್ದರಿಂದ ಇನ್ನಾದರೂ ಪುಡಿಕಾಸಿನಂತೆ ಹುಟ್ಟಿಬಂದ 'ಧರ್ಮರಕ್ಷಣೆ' ಎನ್ನುವವರಿಗೆ ಹಿಂದೂಗಳು ದೂರವಾಗಿರಿ.

(ಒಂದು ಸಮಯದಲ್ಲಿ ನಡೆದ ಮತ ಘರ್ಷಣೆಗಳಲ್ಲಿ ಘೋರವಾಗಿ ಹೊಡೆತ ತಿಂದು, ಸಾಯದೆ ಬದುಕಿದ್ದು ನೋವನ್ನು ಅನುಭವಸುವ ಒಬ್ಬ ಹಿಂದೂ ತನ್ನ ಬಾಧೆಯನ್ನು ಹೀಗೆ ಹೊರಗಿಟ್ಟಿದ್ದಾನೆ. ಆ ವಿಷಯವನ್ನು ಕೆಳಗೆ ಹೊಂದಿಸಿದ್ದೇವೆ ನೋಡಿರಿ.)

# ನಾವು ಹಿಂದೂಗಳಾ?

ಹೆಸರಿಗೆ ನಾವು ಭಾರತೀಯರೆ ಆದರೂ ಕೆಲವರು ಭಾರತೀಯರಾಗಿ ಬದುಕುತ್ತಿದ್ದರೆ, ಕೆಲವರು ಮಾತ್ರ ಆ ಹೆಸರಿಗೆ ಯಾವ ಮಾತ್ರ ಹೊಂದಿಕೆಯಿಲ್ಲದೆ ಬದುಕುತ್ತಿದ್ದಾರೆ. ವಿವರವಾಗಿ ಹೇಳಿದರೆ ಅನೇಕ ಮತಗಳು, ಅನೇಕ ಜಾತಿಗಳಿಂದ ಕೂಡಿಕೊಂಡು ಎಂತಹ ಬೇಧವಿಲ್ಲದೆ ಬದುಕುತ್ತಿದೆ ಭಾರತೀಯ ಸಮಾಜ. ಅಂತವರನ್ನೇ ಭಾರತೀಯರೆನ್ನಬೇಕು. ಆದರೆ ಕೆಲವರು ಭಾರತೀಯರಾಗಿ ಬದುಕುತ್ತಿಲ್ಲ. ಮತಭೇದಗಳಿಂದ, ಜಾತಿಬೇಧಗಳಿಂದ ನನ್ನದು ಇಂತಹ ಮತ, ನನ್ನದು ಇಂತಹ ವರ್ಗ ಎಂದು ದೊಡ್ಡದಾಗಿ ಹೇಳಿಕೊಂಡು ಬದುಕುತ್ತಿದ್ದಾರೆ. ಮತವೆಂಬ ಮುಸುಗನ್ನು ಅನೇಕ ಹೆಸರಿಗಳಿಂದ ತಗಲಿಸಿಕೊಂಡು, ಸಾಟಿ ಸಮಾಜವನ್ನು, ಅದರಲ್ಲಿನ ಅಮಾಯಕ ಪ್ರಜೆಗಳನ್ನು ಬಲಿಪಶುಗಳನ್ನಾಗಿ ಮಾಡುತ್ತಿದ್ದಾರೆ. ಯಾವ ಮತದ್ವೇಷವಿಲ್ಲದ ಪ್ರಜೆಗಳು ಎಷ್ಟೋಜನ ಮತ ಛಾಂದಸವಾದಿಗಳ ಕಾರಣವಾಗಿ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ. ಮತ್ತೆಷ್ಟೋಜನರು ಕಾಲುಗಳನ್ನು, ಕೈಗಳನ್ನು, ಕಣ್ಣುಗಳನ್ನು ಕಳೆದುಕೊಂಡು ಬಾಧೆಪಡುತ್ತಾ ಬದುಕುತ್ತಿದ್ದಾರೆ. ತಾವು ಹಾಗೆ ಬದಲಾಗುವುದಕ್ಕೆ ಈ ಮಧ್ಯಕಾಲದಲ್ಲಿ ಗೋಕುಲ್ ಚಾರ್ಟ್‌ನಲ್ಲಿಯೂ, ಲುಂಬಿನಿ ಪಾರ್ಕ್‌ನಲ್ಲಿಯೂ ಕತಗಾತ್ರರಾಗಿ, ಯಾವ ಕೆಲಸ ಮಾಡಲಾರದ ಸ್ಥಿತಿಯಲ್ಲಿ ಇತರರ ಮೇಲೆ ಆಧಾರಬಿದ್ದು ಬದುಕುತ್ತಿರುವವರಲ್ಲಿ ಕೆಲವರನ್ನು ಬೇಟಿಯಾಗಿ ಮಾತನಾಡಿದರೆ, ಅವರ ಜೀವನಗಳು ಈ ವಿಧವಾಗಿ ಬದಲಾಗಿಹೋಗುವುದಕ್ಕೆ ಕಾರಣವಾದವರ ಮೇಲೆ, ಅವರು ಹೊರಗಿಟ್ಟ ಅಭಿಪ್ರಾಯವನ್ನು ಕೇಳಿದರೆ ನಾವು **'ಮತ'** ಎನ್ನುವ ಮತ್ತಿನಲ್ಲಿ ಎಷ್ಟು ಅನಾಗರಿಕವಾಗಿ ಬದಲಾಗಿಹೋಗಿದ್ದೇವೊ ಅರ್ಥ ವಾಗುತ್ತಿದೆ. ಗೋಕುಲ್ ಚಾಟ್ ಹತ್ತಿರ ಬಾಂಬ್ ಸಿಡಿದಿರುವುದರಿಂದ ಬೆನ್ನುಮೂಳೆಗೆ ಪೆಟ್ಟುಬಿದ್ದು ಮಂಚದಲ್ಲಿ ಕದಲಲಾರದೆ ಇರುವ ಒಬ್ಬ ಹಿಂದೂ ಹೀಗೆ ಹೇಳುತ್ತಿದ್ದಾನೆ. ನಾನು ಯಾರಿಗೂ ಶತ್ರುವಲ್ಲ, ನನಗೆ ಯಾರೂ ಶತ್ರುಗಳಿಲ್ಲ. ಆದರೆ ನಾನು, ನನ್ನಂತಹ ಅಮಾಯಕರೆಷ್ಟೋ ಬಾಂಬು ಸ್ಫೋಟದಲ್ಲಿ ಬಲಿಯಾಗಿ ಹೋಗಿದ್ದಾರೆ. ಬಾಂಬು ಇಟ್ಟಿರುವುದು ಮುಸ್ಲಿಮ್‌ರೇ, ಆದರೂ ಅವರು

ಕ್ರೂರವಾಗಿ ಬದಲಾಗಿಹೋಗಿ ಅವರಿಗೆ ಯಾವ ವಿಧವಾಗಿಯೂ ಶತ್ರುಗಳಲ್ಲದ ಅಮಾಯಕ ಪ್ರಜೆಗಳನ್ನು ಬಲಿತೆಗೆದುಕೊಳ್ಳುವಂತೆ ಪ್ರೇರೇಪಣೆ ಮಾಡಿರುವುದು ಹಿಂದೂಗಳಲ್ಲಿ ಕೆಲವು ಮಂದಿ? ಈ ದಿನ ಕೆಲವರು ಹಿಂದೂಗಳು, ಅವರು ನಾಯಕರಾಗಿ ಕಾಣಿಸುವುದಕ್ಕೆ 'ಮತ ರಕ್ಷಣೆ' ಎಂದು ಹೆಸರಿಟ್ಟುಕೊಂಡು ಇತರ ಮತಸ್ಥರನ್ನು ನೀಚವಾಗಿ ಮಾತನಾಡುವುದರಿಂದ, ಇತರ ಮತಸ್ಥರ ಮೇಲೆ ಶತ್ರುಭಾವನೆ ತೋರಿಸುವುದರಿಂದ, ನಾವು ಈ ದಿನ ಹೀಗೆ ಆಗಿಹೋಗಿದ್ದೇವೆ. ಪಾಪ ಮಾಡಿರುವುದು ಹಿಂದೂಮತದಲ್ಲಿನ ಪರಿಷತ್‌ಗಳು, ದಳ್‌ಗಳು, ಸೇನೆಗಳು, ಸೇವಕರು ಎನ್ನುವವರು. ಅನುಭವಿಸುವುದು ಅಮಾಯಕರಾದ ನಾವು. ನಾವು ಈ ವಿಧವಾಗಿ ಬಾಧೆಗಳನ್ನು ಅನುಭವಿಸುವುದಕ್ಕೆ ಕಾರಣ ಬಾಂಬು ಇಟ್ಟಿರುವ ಮುಸ್ಲಿಮ್‌ರಲ್ಲ! ಅವರನ್ನು ಹಾಗೆ ಪ್ರೇರೇಪಿಸಿದ ಹಿಂದೂ ಸಂಸ್ಥೆಗಳು. ಇದನ್ನನು ಸರಿಸಿ ನಮಗೆ ನಿಜವಾದ ಶತ್ರುಗಳು ಹಿಂದೂ ಸಂಸ್ಥೆಗಳೇ. ನಾನೊಬ್ಬನೇ ಈ ಮಾತನ್ನು ಹೇಳುತ್ತಿಲ್ಲ. ಎಲ್ಲವನ್ನು ಆಲೋಚಿಸಿದ ಪ್ರತಿ ಹಿಂದೂ ಇವರನ್ನು ದ್ವೇಷಿಸುತ್ತಿದ್ದಾನೆ. ಹಿಂದೂಗಳು ಎಷ್ಟೋಜನ ತಮ್ಮನ್ನು ದ್ವೇಷಿಸುತ್ತಿದ್ದಾರೆಂದು ತಿಳಿದರೂ, ನಾವೇ ನಿಜವಾದ ದೇಶಭಕ್ತರೆಂದು, ನಮ್ಮಿಂದಲೇ ಹಿಂದೂಮತ ರಕ್ಷಿಸಲ್ಪಡುತ್ತಿದೆ ಯೆಂದು ಹೇಳುವುದು ವಿಡ್ಡೂರ ಅಲ್ಲವೇ!

ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟು ಜಾತಿಪಿತ ಎಂದು ಹೆಸರುವಾಸಿ ಯಾದ **ಮಹಾತ್ಮ** ಎಂದು ಎಲ್ಲರಿಂದ ಕರೆಯಲ್ಪಟ್ಟ ಗಾಂಧಿಯನ್ನು ಆ ದಿನ ಸುಟ್ಟು ಸಾಯಿಸಿರುವವರು ಮತರಕ್ಷಕರಾ? ಈ ದಿನ ನನ್ನಂತಹ ಅಮಾಯಕರಾದ ಎಷ್ಟೋಜನ ಪ್ರಜೆಗಳನ್ನು ದಾಳಿಗಳಿಗೆ ಗುರಿ ಮಾಡಿಸಿದ ಇವರಾ, ಹಿಂದೂಮತ ರಕ್ಷಕರು? ಉನ್ನತವಾದ ಧರ್ಮಗಳಿಗೆ ನಿಲಯವಾದ ಹಿಂದೂಮತದಲ್ಲಿ ಧರ್ಮಗಳ್ಯಾವೂ ತಿಳಿಯದೆ, ದೈವಜ್ಞಾನ ಅರ್ಥವಾಗದ ಸ್ಥಿತಿಯಲ್ಲಿರುವ ಕೆಲವರು ಹಿಂದೂಗಳು, ಇತರ ಮತದಲ್ಲಿನ ಜ್ಞಾನಕ್ಕೆ ಆಕರ್ಷಿತರಾಗಿ ಮತವನ್ನು ಬದಲಾಯಿಸಿಕೊಂಡಿದ್ದಾರೆ. ಅವರು ಹಾಗೆ ಬದಲಾಗುವುದಕ್ಕೆ ಮುಖ್ಯ ಕಾರಣ ಏನು? ಎಂದು ನೋಡದಂತೆ ನಮ್ಮ ಮತದಲ್ಲಿ ಜ್ಞಾನ ತಿಳಿಯದಿರುವಾಗ ಪಕ್ಕದ ಮತದಲ್ಲಿನ ಜ್ಞಾನ ಪ್ರಚಾರಕ್ಕೆ ನಮ್ಮವರು ಆಕರ್ಷಿತರಾಗಿದ್ದಾರೆಂದು

ಸ್ವಲ್ಪವೂ ತಿಳಿಯದೆ, ಇತರ ಮತಸ್ಥರನ್ನು ದ್ವೇಷಿಸುವುದರಿಂದ, ಹಿಂದೂಮತ ಅಭಿವೃದ್ಧಿಯಾಗದೆ ಕ್ಷೀಣಿಸಿಹೋಗುವ ಪ್ರಮಾದ ಇದೆಯೆಂದು ಈ ಸಂಸ್ಥೆಗಳು ಗ್ರಹಿಸುತ್ತಿಲ್ಲ. ಅಂತಹ ಪ್ರಮಾದವನ್ನು ಗ್ರಹಿಸಿದ ಕೆಲವರುಸ್ವಾಮೀಜಿಗಳು, ಹಿಂದೂಮತದಲ್ಲಿನ ಸೂತ್ರಗಳನ್ನು ಬೋಧಿಸುತ್ತಿದ್ದರೆ. ಹಿಂದೂಧರ್ಮಗಳ್ಯಾವುವೊ ತಿಳಿಯದೆಯೇ ಹಿಂದೂ ಸಂಸ್ಥೆಗಳಾಗಿ ಹೆಸರು ಇಟ್ಟುಕೊಂಡವರು ಹಿಂದೂ ಧರ್ಮಗಳನ್ನೇ ಗುರುತಿಸ ಲಾರದ ಕುರುಡರಾಗಿ, ಸ್ವಚ್ಛವಾದ ಹಿಂದೂ ಗುರುಗಳನ್ನು ಕೂಡಾ ಪರಮತಸ್ಥರಾಗಿ ಭಾವಿಸಿ, ಅವರ ಮೇಲೆ ಕೂಡಾ ದಾಳಿ ಮಾಡುತ್ತಿದ್ದಾರೆ.

'ಇಂದೂ' ಎಂದರೇ ಪರಮತವೆಂದು, ಸ್ವಚ್ಛವಾದ ಇಂದೂವನ್ನು ಸಾಯಿಸಿದವರು, ಹಿಂದೂ ಗುರುಗಳ ಮೇಲೆಯೇ ದಾಳಿ ಮಾಡಿದವರು, ಅಮಾಯಕ ಹಿಂದೂಗಳು ದಾಳಿಗಳಿಗೆ ಗುರಿಯಾಗುವುದಕ್ಕೆ ಕಾರಣರಾದವರು, ಸಾಮಾಜಿಕ ನ್ಯಾಯವನ್ನು ಹೇಳಿದ, ಹೆಸರುವಾಸಿಯಾದ ಒಬ್ಬ ಹಿಂದೂ ದರ್ಶಕನ ಮೇಲೆ (ದರ್ನಗಳು) ಮಾಡಿ, ಕ್ಷಮಾಪಣೆ ಹೇಳಿರೆಂದವರು, ದೇಶದಿಂದಲೇ ಹೊರಹಾಕುತ್ತೇವೆ (ಬಹಿಷ್ಕಾರ) ಎಂದು ಹೇಳುವವರು ವಾಸ್ತವಕ್ಕೆ ಹಿಂದೂ ಗಳೇನಾ? ಎಂದು ಪ್ರಶ್ನಿಸದೆ ತಪ್ಪೋಲ್ಲ.

ಈ ದಿನ ಒಂದು ಸಿನಿಮಾದ ಮೂಲಕ ಒಳ್ಳೆಯ ಸಂದೇಶ ಕೊಟ್ಟ ಒಬ್ಬ ಜವಬ್ಧಾರಿಯುಳ್ಳ ದರ್ಶಕನು ಮಾಡಿದ ತಪ್ಪೇನು? ಒಂದು ಕಡೆ ಅಣ್ಣ ತಂಗಿ ಸೇರಿ ಮಾತನಾಡಿದರೂ ನೀವು ಪ್ರೇಮಿಕರೇ ಎಂದು ಅವರಿಗೆ ಬಲವಂತವಾಗಿ ತಾಳಿ ಕಟ್ಟಿಸುವುದು ಹಿಂದೂ ಧರ್ಮದಲ್ಲಿ ಇದೆಯಾ? ಸಮಾಜಕ್ಕೆ ಒಳ್ಳೆಯ ಸಂದೇಶ ಕೊಟ್ಟ ದರ್ಶಕನಾದ ಕೃಷ್ಣವಂಶಿಯನ್ನು ಪ್ರಜೆಗಳು ಹೊಗಳುತ್ತಿದ್ದರೆ, ಹೊರಹಾಕುತ್ತೇವೆ ಎಂದವರಿಗಗಲಿ ಆ ಸಂಸ್ಥೆ ಹಿರಿಯರಿಗಾಗಲಿ ಅಸಲಿಗೆ ಹಿಂದೂ ಧರ್ಮಗಳು ಏನೊ ತಿಳಿದಿದೆಯಾ? ಎಂದು ಪ್ರಶ್ನಿಸುತ್ತಿದ್ದೇವೆ. ಈ ಮೂರ್ಖರೊಂದಿಗೆ ಯಾಕೆ ಎಂದು ಬಹಳ ಜನ ಹಿಂದೂಗಳು ಈ ವಿಷಯದ ಮೇಲೆ ಬಾಯಿ ಬಿಚ್ಚದಂತಿದ್ದಾರೆ. ಆದರೆ ಎಲ್ಲರೂ ಹಾಗೇ ಇದ್ದರೆ ಹಿಂದೂಮತ ಇನ್ನೂ ನಾಶವಾಗಿ ಹೋಗುತ್ತದೆ. ಆದ್ದರಿಂದ ನಾನೊಬ್ಬ

ಹಿಂದೂವಾಗಿ, ಹಿಂದೂಗಳಿಗಾಗಿ ಬಾಯಿಬಿಚ್ಚಿ ಹೇಳಬೇಕೆನಿಸಿದೆ. 'ಹಿಂದೂ ಮತ' ಎಂಬ ಮುಸುಗು ಹಾಕಿಕೊಂಡು, ಹಿಂದೂ ರಕ್ಷಣೆ ಸಂಸ್ಥೆಗಳಾಗಿ ಹೆಸರು ಇಟ್ಟುಕೊಂಡ ನಿಮ್ಮನ್ನು ಹಿಂದೂ ಭಕ್ಷಣೆ ಸಂಸ್ಥೆಗಳಾಗಿ ಹಿಂದೂಗಳು ಭಾವಿಸುತ್ತಿದ್ದಾರೆ. ಹಾಗೆ ಭಾವಿಸುವುದರಿಂದಲೇ ನೀವು ರಾಜಕೀಯದಲ್ಲಿ ಮುಂದುವರೆಯುವುದಕ್ಕೆ ಯಾವ ಹಿಂದೂವು ಇಷ್ಟಪಡುವುದಿಲ್ಲ.

ಹಿಂದೂ ಗ್ರಂಥವಾದ ಭಗವದ್ಗೀತೆಯಲ್ಲಿನ ಧರ್ಮಗಳನ್ನು ತಿಳಿಯದಂತೆ, ನೀವು ಹಿಂದೂಗಳೆಂದು ಹೇಳಿಕೊಳ್ಳುವುದಕ್ಕೆ ಅರ್ಹರೇ ಅಲ್ಲ! ಹೀಗೇ ಅಜ್ಞಾನದಿಂದ ಪ್ರವರ್ತಿಸುತ್ತಾ, ಹಿಂದೂಗಳಿಗೇ ವಿರುದ್ಧವಾಗಿ ಬದಲಾಗಿಹೋದರೆ ಹಿಂದೂಗಳು ಎಲ್ಲರೂ ಸೇರಿ ಒಗ್ಗಟ್ಟಾಗಿ ನಿಮ್ಮ ಇರುವಿಕೆಯನ್ನೇ ಇಲ್ಲದಂತೆ ಮಾಡುವ ಕಾಲ ಬರುತ್ತದೆಂದು ಒಬ್ಬ ಹಿಂದೂವಾಗಿ ಹೇಳುತ್ತಿದ್ದೇನೆ.

ಈಗಲಾದರೂ ಗಾಂಧಿಯನ್ನು ಸಾಯಿಸಿದ್ದಕ್ಕೆ ಭಾರತದೇಶಕ್ಕೆ ಕ್ಷಮಾಪಣೆ ಮೀಡಿಯಾ ಮೂಲಕ ಹೇಳಿರಿ. ಅಮಾಯಕ ಪ್ರಜೆಗಳನ್ನು ದಾಳಿಗೆ ಗುರಿಮಾಡಿದ್ದಕ್ಕೆ ಪ್ರಜೆಗಳಿಗು, ಹಿಂದೂ ಗುರುಗಳನ್ನೇ ಅವಮಾನಿಸಿದ್ದಕ್ಕೆ ಹಿಂದೂಗಳಿಗು, ಸಾಮಾಜಿಕ ನ್ಯಾಯವನ್ನು ಹೇಳಿದ ಹಿಂದೂ ದರ್ಶಕನನ್ನು ವಿರೋಧಿಸಿ ಬಹಿಷ್ಕರಿಸುತ್ತೇವೆಂದಿದ್ದಕ್ಕೆ, ಒಟ್ಟಾರೆ ಹಿಂದೂ ಸಮಾಜಕ್ಕೆ ಕ್ಷಮಾಪಣೆ ಹೇಳಿರಿ! ಇಲ್ಲದಿದ್ದರೆ ನಿಮ್ಮ ಪಾಪಗಳಿಗೆ ನಿಷ್ಕೃತಿ ಇಲ್ಲ!!

ಇಂತಿ

**ಒಬ್ಬ ಹಿಂದೂವು**

*ದಿನಾಂಕ : ಅಕ್ಟೋಬರ್ 2, 2009*

*ಶ್ರೀಕಾಂತ್ ನಟಿಸಿದ **(ಮಹಾತ್ಮ)** ಸಿನಿಮಾ ಬಿಡುಗಡೆ ಸಮಯದಲ್ಲಿ ಡೈರೆಕ್ಟರ್ ಕೃಷ್ಣವಂಶಿ ಮೇಲೆ ದಾಳಿಯನ್ನು ಕುರಿತು ಒಬ್ಬ ಹಿಂದೂ ಹೇಳಿದ ವಿಷಯ.*

**25) ಪ್ರಶ್ನೆ :– ಹಿಂದೂ ವಾಹಿನಿ, ಭಜರಂಗದಳ್, ವಿಶ್ವ ಹಿಂದೂ ಪರಿಷತ್, ಆರ್.ಎಸ್.ಎಸ್ (R.S.S), ಪರಶುರಾಮ್ ಪರಿವಾರ್, ಹಿಂದೂ ಜಾಗರಣ ಸಮಿತಿ (H.J.S ), ಶಿವಶಕ್ತಿ, ಹಿಂದೂ ಯುವಶಕ್ತಿ ದಳ್, ಹಿಂದೂ ಜನಶಕ್ತಿ, ಶಿವಸೇನೆ, ಸಮರಸತ ಸೇವಾ ಫೌಂಡೇಷನ್, ಹಿಂದೂ ಧರ್ಮಾಚಾರ್ಯ ಪ್ರತಿಸ್ಟಾನ್, ರಾಷ್ಟ್ರೀಯ ಹಿಂದೂ ಸೇನೆ, ಹಿಂದೂ ಪ್ರಸ್ಥಾಕ್, ವಿಶ್ವ ಧರ್ಮ ಪರಿರಕ್ಷಣೆ, ಪ್ರಜಾ ಹಿಂದೂದಳ, ಹಿಂದೂ ರಕ್ಷಕದಳ್ ಮತ್ತು ಮುಂತಾದ ಹೈಂದವ ಧಾರ್ಮಿಕ ಪರಿರಕ್ಷಣೆ ಸಂಸ್ಥೆಗಳಿಗೆ ಮತ್ತು ರಾಮನನ್ನು ಆರಾಧ್ಯ ದೈವವಾಗಿ ಪೂಜಿಸುವ ಪ್ರತಿ ಹೈಂದವ ಸೋದರರಿಗು ನನ್ನ ಮನವಿ.**

ರಾಮನನ್ನು ಅಧರ್ಮಪರನನ್ನಾಗಿ ಚಿತ್ರೀಕರಿಸುತ್ತಾ, ಇಲ್ಲದ ವಿಷಯಗಳನ್ನು ಹೇಳಿಸುತ್ತಾ. ರಾಮನ ಮೇಲೆ ಆಪಾಧನೆಗಳು ಹೊರಿಸುತ್ತಾ, ಭಾರತದೇಶ ಅಂಶದಲ್ಲಿ ಉತ್ತರ, ದಕ್ಷಿಣ ಎನ್ನುವ ವಿವಕ್ಷ ಸೃಷ್ಟಿಸುತ್ತಾ, ಯಜ್ಞ ಯಾಗಾದಿ ಕ್ರತುಗಳು ವ್ಯರ್ಥ ಎಂದು ಬೋಧಿಸುತ್ತಾ, ಭಗವದ್ಗೀತೆಯನ್ನು 17 ಅಧ್ಯಾಯಗಳಿಗೆ ಕುಗ್ಗಿಸುತ್ತಾ, ಸ್ವಂತ ಭಾಷ್ಯದಿಂದ ಗೀತೆಯನ್ನು ಅವಮಾನಿಸುತ್ತಾ ಫೆಯಿಲ್ ಆದ ಆರ್ಯ ದ್ರಾವಿಡ ಸಿದ್ಧಾಂತವನ್ನು ಹೇಳುತ್ತಾ ಕಾರ್ತಿಕ ದೀಪಗಳು ಮೂರ್ಖತ್ವ ಎನ್ನುತ್ತಾ, ರಾವಣಾಸುರನು

## ದೇವರು ಎಂದು ಪ್ರಚಾರ ಮಾಡುತ್ತಾ, ಸನಾತನ ಧರ್ಮವನ್ನು ಅವಮಾನಪಡಿಸುತ್ತಾ ತ್ರೈತ ಸಿದ್ಧಾಂತವನ್ನು ಪ್ರಚಾರ ಮಾಡುತ್ತಿರುವ ಪ್ರಬೋಧಾನಂದ ಸ್ವಾಮಿಯನ್ನು ಎದುರಿಸಿರಿ ಎಂದು ಕೆಲವರು ಹೇಳಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಾ?

**ಉತ್ತರ :–** ಇದು ಕೆಲಸ ಕಾರ್ಯ ಇಲ್ಲದೇ ಬೀಧಿಯಲ್ಲಿ ವ್ಯರ್ಥವಾಗಿ ತಿರುಗುವ ಹತ್ತುಜನ ಗುಂಪಾಗಿರುವ ಪೋರ್ಕಿ ಹುಡುಗರು 'ಹಿಂದೂ ರಕ್ಷಕದಳ್' ಎನ್ನುವ ಹೆಸರು ಇಟ್ಟುಕೊಂಡವರು ಫೇಸ್‌ಬುಕ್‌ನಲ್ಲಿ ಇಟ್ಟಿರುವ ಸಮಾಚಾರ. ಇದರಲ್ಲಿ ಎದುರಿಗಿರುವ ವ್ಯಕ್ತಿಯನ್ನು ಅಂದರೇ ನಮ್ಮನ್ನು ತಪ್ಪಾಗಿ ತೋರಿಸುವ ಉದ್ದೇಶದಿಂದ ಬರೆದಿರುವುದು ಹೊರತು ಬೇರೆ ಏನೂಯಿಲ್ಲವೆಂದು ಹೇಳುತ್ತಿದ್ದೇವೆ. ಇವರು ಬರೆದ ಪ್ರತಿ ಮಾತಿಗು ಸಮಾಧಾನ ಕೊಡುತ್ತಿದ್ದೇವೆ ಯಾರದು ತಪ್ಪೋ ನೀವೇ ನೋಡಿರಿ!

ಇದು ಬರೆದಿರುವುದು ಹತ್ತುಜನ ಯುವಕರಿಗೆ ನಾಯಕನಾಗಿದ್ದು ಇಂತಹ ಕಾರ್ಯ ಕಲಾಪಗಳೇ ಕೆಲಸವಾಗಿ ಇಟ್ಟುಕೊಂಡ ಒಬ್ಬ ವ್ಯಕ್ತಿ. ಈತನ ಹೆಸರನ್ನು ನಾನು ಹೇಳಬೇಕೆಂದುಕೊಳ್ಳಲಿಲ್ಲ ಆದರೆ, ಈತನ ಆಕಾರವನ್ನು ಹೇಳಿದರೆ ಭೂಮಿಯಿಂದ ಅಳತೆ ಮಾಡಿದರೆ ಮೂರು ಅಡಿಗಳಷ್ಟು ಉದ್ದ ಇರುತ್ತಾನೆ. ಆದರೂ ಆರು ಅಡಿಗಳ ಮನುಷ್ಯನಂತೆ ಮಾತನಾಡುತ್ತಿರುತ್ತಾನೆ. ವೇಷದಲ್ಲಿ ಆಗಾಗ ಕಾಷಾಯ ವಸ್ತ್ರಗಳನ್ನು ಧರಿಸಿ, ವಿಭೂತಿ ಮುಖದಲ್ಲಿ ತಿದ್ದಿರುತ್ತಾನೆ. ಈತನನ್ನು ನೋಡಿದರೆ ಪಾಪ ಎನಿಸುತ್ತದೆ, ನೋಡದೆಹೋದರೆ ಕೋಪ ಬರುತ್ತದೆ. ಈತನು ಆರು ತಿಂಗಳ ಕೆಳಗೇ ನಮ್ಮ ಮೇಲೆ ಕೆಲವು ಆರೋಪಣೆಗಳಿಂದ ಫೇಸ್‌ಬುಕ್‌ನಲ್ಲಿ ಪ್ರಚಾರ ಮಾಡಿ ಒಬ್ಬ ಮಧ್ಯವರ್ತಿ ಮುಖಾಂತರ ಹಣವನ್ನು ಡಿಮಾಂಡ್ ಮಾಡಿದ್ದಾನೆ. ನಾವು ಆಗ ಏನೂ ಮಾತನಾಡಲಿಲ್ಲವೆಂದು ನಮಗೆ ಶತ್ರುಗಳಾಗಿರುವವರ ಹತ್ತಿರಕ್ಕೆ ಸೇರಿ,

ಶತ್ರುಗಳೊಂದಿಗೆ ಕೈಸೇರಿಸಿ ಎಂಟು ಲಕ್ಷಗಳು ಹಣ ತೆಗೆದುಕೊಂಡು ಅಂದಿನಿಂದ ಇಲ್ಲಿಯವರೆಗು ಆರು ತಿಂಗಳ ಕಾಲದಿಂದ ಪ್ರತಿದಿನ ಯಾವುದೋ ಒಂದು ಆರೋಪಣೆ ಮಾಡುವುದೇ ಕೆಲಸವಾಗಿ ಇಟ್ಟುಕೊಂಡಿದ್ದಾನೆ. ಶತ್ರುಗಳು ಧನಿಕರು, ರಾಜಕೀಯ ಬಲ ಇರುವವರು ಆಗಿರುವುದರಿಂದ ಅವರೊಂದಿಗೆ ಮೊದಲು ಸ್ವಲ್ಪ ಹಣ ತೆಗೆದುಕೊಳ್ಳುವುದೇ ಅಲ್ಲದೆ ಪ್ರತಿ ತಿಂಗಳು 28 ಸಾವಿರ ಸಂಬಳ ತೆಗೆದುಕೊಳ್ಳುತ್ತಾ, ನನ್ನನ್ನು ವಿಮರ್ಶಿಸುವುದೇ ಉದ್ಯೋಗವಾಗಿ ಇಟ್ಟುಕೊಂಡು ಪ್ರತಿದಿನ ಆತನು ಆರೋಪಣೆಗಳು ಮಾಡುತ್ತಲೇ ಇದ್ದಾನೆ.

ಆತನ ಆರೋಪಣೆಗಳಲ್ಲಿ ನಾವು 'ರಾಮನನ್ನು ಅಧರ್ಮಪರನನ್ನಾಗಿ ಚಿತ್ರಿಸುತ್ತಿದ್ದೇವೆಂದು ಹೇಳಿ ಬರೆದಿದ್ದಾನೆ. ಬರೆಯಬೇಕಾದ ಪದವನ್ನು ಕೂಡಾ ಸರಿಯಾಗಿ ಬರೆಯಲಾರದವನು ರಾಮನನ್ನು ಅಧರ್ಮಪರನನ್ನಾಗಿ ಬರೆದಿದ್ದಾನೆ. 'ಅಧರ್ಮಪರನು' ಎಂದರೇ ಅಧರ್ಮಗಳಿಗೆ ಪರವಾಗಿರುವವನು ಎಂಬ ಅರ್ಥ ಬರುತ್ತದೆ. ಅದರಲ್ಲಿ ರಾಮನು ಧರ್ಮಗಳು ಇರುವವನೆಂದೇ ಅರ್ಥ ಬರುತ್ತದೆ. ಆತನು ಬರೆಯಬೇಕಾಗಿರುವುದು 'ಅಧರ್ಮವರನು' ಎಂದು ಹಾಗೆ ಬರೆದರೆ ರಾಮನು ಧರ್ಮಗಳು ಇಲ್ಲದವನು, ಧರ್ಮಗಳು ತಿಳಿಯದವನೆಂದು ಅರ್ಥ ಬರುತ್ತದೆ. ನಾನು ರಾಮನನ್ನು ಕೆಟ್ಟದಾಗಿ ಹೇಳುತ್ತಾ ಅಧರ್ಮವರನು ಎಂದು ಹೇಳಿದಂತೆ ಬರೆದಿದ್ದಾನೆ. ನಾನು ಎಂದಿಗೂ ರಾಮನ ವ್ಯಕ್ತಿತ್ವವನ್ನು ಕುರಿತಾದ ವಿವರವೇ ಹೇಳಲಿಲ್ಲ. ಅಂತದರಲ್ಲಿ ಇದು ಅಸತ್ಯ ಆರೋಪಣೆ ಹೊರತು ಏನೂ ಅಲ್ಲವೆಂದು ತಿಳಿಯಬೇಕು. ನಾನು ಒಂದು ಮಾತನ್ನು ಕೇಳುತ್ತಿದ್ದೇನೆ. ಇವು ಅಧರ್ಮಗಳು, ಇವು ಧರ್ಮಗಳು ಎಂದು ಮೊದಲು ನಿನಗೇ ತಿಳಿದಿಲ್ಲ, ನಾನು ರಾಮನನ್ನು ಕುರಿತು ಅಧರ್ಮಗಳಿರುವವನೆಂದು ಹೇಳಿದಂತೆ, ಧರ್ಮಗಳ್ಯಾವೂ ತಿಳಿಯದ ನಿನಗೆ ಹೇಗೆ ತಿಳಿದಿದೆ?

'ಯಜ್ಞಗಳು ವ್ಯರ್ಥವೆಂದು' ಹೇಳಿದಂತೆ ಬರೆದಿದ್ದಾನೆ. ನಾನು ಹೇಳಿರುವುದು ಹೊರಗಿನ ಯಜ್ಞಗಳಿಂದ ದೇವರು ತಿಳಿಯಲ್ಪಡುವುದಿಲ್ಲ, ಒಳಗಿನ ಯಜ್ಞಗಳನ್ನು ಮಾಡಿರೆಂದು ಭಗವದ್ಗೀತೆಯಲ್ಲಿನ ಮಾತನ್ನು ಹೇಳಿದ್ದೇನೆ ಆದರೆ,

ಯಜ್ಞಗಳನ್ನೇ ಮಾಡಬಾರದೆಂದು ಹೇಳಲಿಲ್ಲ. ಕೈಲಾದರೆ ಶರೀರದೊಳಗಿನ ಯಜ್ಞಗಳು ಮಾಡಿರೆಂದು ಹೇಳಿದ್ದೇನೆ. **"ಅದಿ ಯಜ್ಞೋಹಮೇ ವಾತ್ರ ದೇಹೇ ದೇಹ ಭೃತಾಂವರ"** ಎನ್ನುವ ಗೀತಾವಾಕ್ಯವನ್ನು ಅನುಸರಿಸಿ **"ದೇಹದಲ್ಲಿ ನಡೆಯುವ ಯಜ್ಞ ಮಾಡಿರೆಂದಿದ್ದೇನೆ"**. ಅಷ್ಟೇಅಲ್ಲದೆ *"ಶ್ರೇಯಾನ್ ದ್ರವ್ಯಮಯಾ ದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ॥"* ಎನ್ನುವ ಗೀತಾ ವಾಕ್ಯದ ಪ್ರಕಾರ **"ಹೊರಗೆ ಮಾಡುವ ದ್ರವ್ಯ ಯಜ್ಞಗಳಿಗಿಂತ ಶರೀರದಲ್ಲಿ ಮಾಡುವ ಜ್ಞಾನಯಜ್ಞ ಶ್ರೇಷ್ಠವೆಂದು"** ಹೇಳಿದ್ದೇನೆ. ಈ ಮಾತು ನನ್ನದಲ್ಲ ಪ್ರಥಮ ದೈವಗ್ರಂಥವಾದ ಭಗವದ್ಗೀತೆಯೊಳಗಿನದ್ದು. ಇದರಲ್ಲಿ ತಪ್ಪು ಹಿಡಿದರೆ "ನೀವು ದೇವರನ್ನೇ ತಪ್ಪು ಹಿಡಿದಂತಾಗುತ್ತದೆ." ಏಕೆಂದರೇ! ಬಾಹ್ಯ ಯಜ್ಞಗಳು ದ್ರವ್ಯಗಳಿಂದ ಮಾಡುವವೆಂದು ಭಗವಂತನೇ ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಅಷ್ಟೇಅಲ್ಲದೆ **"ಬಾಹ್ಯ ಯಜ್ಞಗಳಿಂದ ದೇವರನ್ನು ತಿಳಿಯುವುದಕ್ಕೆ ಶಕ್ಯವಲ್ಲ"** ಎಂದು "ನ ಶಕ್ಯೋ" ಎಂದು ವಿಶ್ವರೂಪ ಸಂದರ್ಶನಯೋಗ ಎಂಬ ಅಧ್ಯಾಯದಲ್ಲಿ 48, 53ನೇ ಶ್ಲೋಕಗಳಲ್ಲಿ ಹೇಳಿದ್ದಾನೆಂದು ತಿಳಿದರೆ ನಾನು ಹೇಳಿರುವುದು ಸತ್ಯವೆಂದೇ ತಿಳಿಯಬಲ್ಲದು.

ಭಗವದ್ಗೀತೆಯನ್ನು ನಾನು **"ತ್ರೈತ ಸಿದ್ಧಾಂತ ಭಗವದ್ಗೀತೆ"** ಎಂಬ ಹೆಸರಿನಿಂದ ವಿವರಿಸಿ ಬರೆದಿದ್ದೇವೆ. ಇಂದು ನಾನು ಹೇಳಿದ ತ್ರೈತ ಸಿದ್ಧಾಂತ ಭಗವದ್ಗೀತೆ ಪ್ರಜೆಗಳಲ್ಲಿ ಒಳ್ಳೆಯ ಹೆಸರು ತಂದುಕೊಂಡಿದೆ. ಅಷ್ಟೇಅಲ್ಲದೆ ರಷ್ಯಾ ದೇಶದಲ್ಲಿ ಭಗವದ್ಗೀತೆಯನ್ನು ನಿಷೇಧಿಸಬೇಕೆಂಬ ಅವರ ಉದ್ದೇಶವನ್ನು ಬದಲಾಯಿಸಿ, ಇದು ಇರಬಹುದು ಎನ್ನುವಂತೆ ಮಾಡಿರುವುದು ತ್ರೈತ ಸಿದ್ಧಾಂತ ಭಗವದ್ಗೀತೆಯೆಂದು, ಆ ದೇಶದಿಂದ ಈ ಮಧ್ಯದಲ್ಲಿಯೇ ನಮಗೆ ಸಮಾಚಾರ ತಿಳಿದಿದೆ. ಭಾರತದೇಶದಲ್ಲಿ ವಿವರ ಬರೆಯಲ್ಪಟ್ಟ ಭಗವದ್ಗೀತೆಗಳು ಸುಮಾರು ಮುನ್ನೂರ ಮೂವತ್ತು(330) ಇರುವಾಗ, ಅದರಲ್ಲಿ ಎಲ್ಲವನ್ನು ಅತಿಕ್ರಮಿಸಿ ವಿವರವನ್ನು ಹೇಳಿರುವುದು **ತ್ರೈತ ಸಿದ್ಧಾಂತ ಭಗವದ್ಗೀತೆ** ಯೆಂದು, ಎಷ್ಟೋ ಭಗವದ್ಗೀತೆಗಳನ್ನು ಓದಿದವರು ನಿರ್ಣಯಿಸಿ ಹೇಳಿದ್ದಾರೆ. ಅದನ್ನು ಅರ್ಥ ಮಾಡಿಕೊಳ್ಳದ ಪರಿಸ್ಥಿತಿಯಲ್ಲಿ ಇಲ್ಲದೆ ಅದೇ ಕೆಲಸವಾಗಿ ಆರೋಪಣೆ

ಮಾಡಬೇಕೆಂಬ ಉದ್ದೇಶದಿಂದ ಭಗವದ್ಗೀತೆಯನ್ನು ವಕ್ರೀಕರಿಸಿ ಬರೆದಿದ್ದಾನೆನ್ನುವುದು ತಿಳುವಳಿಕೆಯಿಲ್ಲದ ಕೆಲಸ ಅಲ್ಲವೇ! ಇಲ್ಲಿ ಸಿಂಹವನ್ನು ಅಣಕಿಸಿದಂತಿದೆ! ನಾನು 'ಭಗವದ್ಗೀತೆಯನ್ನು ಹದಿನೇಳು (17) ಅಧ್ಯಾಯಗಳಿಗೆ ಕುಗ್ಗಿಸಿದ್ದೇನೆ' ಎಂದು ಹೇಳಿದ್ದಾರೆ. ನಾನು ಒಬ್ಬ ವ್ಯಕ್ತಿಯನ್ನು ಕುರಿತು ಆತನು ಅಂಗಿಯವರೆಗೇ ಹೇಳಿದ್ದೇನೆ, ಲುಂಗಿಯವರೆಗು ಹೇಳಲಿಲ್ಲ. ಅಷ್ಟುಮಾತ್ರಕ್ಕೆ ಆತನಿಗೆ ಕೆಳಗೆ ಲುಂಗಿ ಇಲ್ಲವೆಂದು ಏಕೆ ಅಂದುಕೊಳ್ಳಬೇಕು? ಹಾಗೇ ಭಗವದ್ಗೀತೆಯಲ್ಲಿ ನಾನು ವಿವರಿಸಿ ಹೇಳಿರುವುದು 17 ಅಧ್ಯಾಯಗಳೇ, ಒಂದು ಅಧ್ಯಾಯಕ್ಕೆ ವಿವರವನ್ನು ಹೇಳಲಿಲ್ಲ. ಅಷ್ಟುಮಾತ್ರಕ್ಕೆ ಭಗವದ್ಗೀತೆಯಲ್ಲಿ ಒಂದು ಅಧ್ಯಾಯ ಇಲ್ಲವೆಂದು ನೀನೇಕೆ ಅಂದುಕೊಳ್ಳಬೇಕು? ಹಾಗೆ ಅಂದುಕೊಳ್ಳುವುದು ಅಂಗಿ ಇದೆ, ಲುಂಗಿಯಿಲ್ಲ ಎಂದುಕೊಂಡಂತಿರುತ್ತದೆ. ಸ್ವಂತ ಭಾಷ್ಯದಿಂದ ಗೀತೆಯನ್ನು ಅವಮಾನಿಸುತ್ತಾ ಬರೆದಿದ್ದಾರೆ ಎಂದಿದ್ದಾರೆ. ನಾನು ಎಲ್ಲಿ ವಕ್ರೀಕರಿಸಿ ಬರೆದಿದ್ದೇನೊ ತೋರಿಸಬಲ್ಲಿರಾ? ಬಹಳ ಜನ ಬರೆದಿರುವುದರಲ್ಲಿನ ತಪ್ಪುಗಳನ್ನು ಸರಿತಿದ್ದಿ ಹೇಳಿದ್ದೇವೆ. **"ಚಾತುರ್ವರ್ಣ್ಯಂ"** ಎನ್ನುವ ಶ್ಲೋಕಕ್ಕೆ ಎಲ್ಲರೂ ಕುಲಗಳನ್ನು ಬರೆದಿದ್ದಾರೆ. ದೇವರು ತನ್ನ ಗ್ರಂಥಗಳಲ್ಲಿ ಕುಲಗಳನ್ನು ಮತಗಳನ್ನು ಕುರಿತು ಎಲ್ಲಿಯೂ ಹೇಳಲಿಲ್ಲ. ಆದ್ದರಿಂದ ಆ ಶ್ಲೋಕಕ್ಕೆ ಗುಣಗಳಿದ್ದಹಾಗೆ ಹೇಳಿದ್ದೇವೆ. ಎಲ್ಲರೂ ಬರೆದಿರುವುದು ಶಾಸ್ತ್ರಬದ್ಧವಾಗಿ ಇಲ್ಲವೆಂದು, ಅದರ ನಿಜ ಭಾವನೆಯನ್ನು ಶಾಸ್ತ್ರೀಯವಾಗಿ ಬರೆದಿದ್ದೇನೆ. ಅದು ಅರ್ಥ ಮಾಡಿಕೊಳ್ಳುವ ಶಕ್ತಿಯಿಲ್ಲದ ನೀವು ಗೀತೆಯನ್ನು ವಕ್ರೀಕರಿಸಿ ಬರೆದಿದ್ದಾನೆ ಎನ್ನುವುದು ಬುದ್ಧಿಯಿಲ್ಲದ ಕೆಲಸವಲ್ಲದೆ ಏನಾಗುತ್ತದೆ! **ಗೀತೆ ಸರ್ವ ಮಾನವರಿಗು ಹೇಳಿರುವುದು ಹೊರತು, ಕುಲಗಳಿಗು, ಮತಗಳಿಗು ಹೇಳಿರುವುದಲ್ಲ**. ಭಗವದ್ಗೀತೆಯೊಳಗೆ ಕುಲಗಳನ್ನು ತೆಗೆದುಕೊಂಡು ಬಂದವರು ಸಕ್ರಮವಾಗಿ ಬರೆದಂತೇನಾ? ಎಂದು ನಾನು ಕೇಳುತ್ತಿದ್ದೇನೆ.

**"ದ್ರಾವಿಡ ಬ್ರಾಹ್ಮಣ"** ಎನ್ನುವ ಗ್ರಂಥದಲ್ಲಿ ಗತ ಚರಿತ್ರೆಯಲ್ಲಿ ಏನು ನಡೆದಿದೆಯೋ ಅದನ್ನೇ ಬರೆದಿದ್ದೇವೆ. ದಕ್ಷಿಣ ಭಾರತದೇಶದಲ್ಲಿನ ಗಿರಿಜನರಾದ

ಆಜಾನುಬಾಹನಾಗಿ, ಅಂದವಾಗಿರುವ ಆಂಜನೇಯನನ್ನು ಕೋತಿಯಂತೆ ಚಿತ್ರೀಕರಿಸಿದ ಆರ್ಯರು ತಪ್ಪು ಮಾಡಿದ್ದಾರೆಂದು, ವಿವಕ್ಷದಿಂದ ಹಾಗೆ ಚಿತ್ರೀಕರಿಸಿ ತೋರಿಸಿದ್ದಾರೆಂದು ಹೇಳಿದ್ದೇವೆ. **ನಾವು ಹೇಳಿರುವುದು ಯಥಾರ್ಥ**. ಆರ್ಯರು ದಕ್ಷಿಣ ದೇಶ ಗಿರಿಜನರನ್ನು ಅವರ ಕೆಲಸ ನಿಮಿತ್ತ ಬಳಸಿಕೊಂಡು, ಕೊನೆಗೆ ಗಿರಿಜನರನ್ನು ಕೋತಿಗಳಂತೆ, ಕರಡಿಗಳಂತೆ ಏಕೆ ತೋರಿಸಿದ್ದಾರೆ? ಎಂದು ಕೇಳಿದ್ದೇವೆ. ಹಾಗೆ ತೋರಿಸುವುದು ಪ್ರಾಂತೀಯ ವಿವಕ್ಷ ಅಲ್ಲವೇ! ರಾಮನ ಪರವಾಗಿ ಯುದ್ಧವನ್ನು ಮಾಡಿದ ಮನುಷ್ಯರು ಕೊನೆಗೆ ಪ್ರಾಣಿಗಳಂತೆ ಕಾಣಿಸಿದ್ದಾರಾ? ಎಂದು ಕೇಳಿದ್ದೇವೆ. ಆ ದಿನ ನಲ್ಲಮಲ ಅರಣ್ಯಗಳಲ್ಲಿನ ಗಿರಿಜನರು ಕೋತಿಗಳು, ಕರಡಿಗಳಾದರೆ ರಾಮನ ಪರವಾಗಿ ಯುದ್ಧವನ್ನು ಹೇಗೆ ಮಾಡಿದ್ದಾರೆಂದು ಕೇಳಿದ್ದೇವೆ? ಕೊನೆಗೆ ಸಹಾಯ ಮಾಡಿದ ಆಂಜನೇಯ ನನ್ನು ಮನುಷ್ಯನ ಆಕಾರದಿಂದ ಕೋತಿ ಆಕಾರವಾಗಿ ಬದಲಿಸಿ ರಾಮನ ಕಾಲುಗಳ ಹತ್ತಿರ ತೋರಿಸುವುದು ತಪ್ಪಲ್ಲವೇ? ಎಂದು ಕೇಳಿದ್ದೇವೆ. ನಡೆಯದ ಚರಿತ್ರೆಯನ್ನು ನಡೆದಂತೆ ತೋರಿಸಿ ಬರೆಯುವುದು, ದಕ್ಷಿಣ ದೇಶದ ರಾಜನಾದ ರಾವಣಬ್ರಹ್ಮನನ್ನು ಅನುಚಿತ ಕಾರ್ಯಗಳನ್ನು ಮಾಡಿದಂತೆ ಹೇಳುವುದು ಪ್ರಾಂತೀಯ ವಿವಕ್ಷ ಅಲ್ಲವಾ? ಆರ್ಯರ ಅಹಂಕಾರ ಅಲ್ಲವಾ? ಎಂದು ಕೇಳಿದ್ದೇವೆ. ಆರ್ಯರು ಇಂದಿಗೂ ಕೆಲವರಿದ್ದಾರೆಂದು, ದ್ರಾವಿಡರನ್ನು ಕಿರುನೋಟ ನೋಡುತ್ತಿದ್ದಾರೆಂದು **ಸತ್ಯ**ವನ್ನು ಹೇಳಿದ್ದೇವೆ. ಆರ್ಯರಿಗೆ ಹುಟ್ಟಿ, ದಕ್ಷಿಣ ದೇಶದಲ್ಲಿರುವ ಆರ್ಯರಿಗಾದರೆ ನಾನು ಹೇಳಿದ ಮಾತುಗಳು ಇಷ್ಟವಾಗುವುದಿಲ್ಲ. ಆದ್ದರಿಂದ ನನ್ನನ್ನು ವಿಮರ್ಶಿಸುವ ನೀನು, ನಿನ್ನಲ್ಲಿ ಆರ್ಯರ ಗಾಳಿ ಏನಾದರೂ ಇದೆಯೇನೊ ನೋಡಿಕೊ ಎಂದು ಹೇಳುತ್ತಿದ್ದೇನೆ.

**"ದೇವಾಲಯ ರಹಸ್ಯಗಳು"** ಎನ್ನುವ ಗ್ರಂಥದಲ್ಲಿ ಧ್ವಜಸ್ತಂಭವನ್ನು ಕುರಿತು ಹೇಳುವಾಗ ಕಾರ್ತಿಕ ದೀಪಗಳನ್ನು ಕುರಿತು ಹೇಳಿದ್ದೇವೆ. ಹಿಂದೂಗಳು ಕಾರ್ತಿಕ ಮಾಸದಲ್ಲಿ ಕಾರ್ತಿಕ ದೀಪವನ್ನು ಜ್ಞಾನಜ್ಯೋತಿಯಾಗಿ ಭಾವಿಸಿ ಧ್ವಜಸ್ತಂಭದ ಮೇಲೆ ಇಡುತ್ತಿದ್ದರೆಂದು ಹೇಳಿದ್ದೇವೆ. ಅಷ್ಟೇಹೊರತು ಕಾರ್ತಿಕ ದೀಪ ಇಡುವುದು ಮೂರ್ಖತ್ವವೆಂದು ನಾನು ಎಲ್ಲಿಯೂ ಹೇಳಲಿಲ್ಲ. ನೀವು

ನಮ್ಮ ಮೇಲೆ ಅಸೂಯೆಯಿಂದ ಹೇಳುವ ಮಾತೇ ಹೊರತು ಬೇರೆಯಿಲ್ಲವೆಂದು ಹೇಳುತ್ತಿದ್ದೇನೆ. **"ರಾವಣ ಬ್ರಹ್ಮ"** ಎನ್ನುವ ಗ್ರಂಥದಲ್ಲಿ ದೇವರ (ಪರಮಾತ್ಮ) ಮೊದಲ ಅವತಾರ ರಾವಣಬ್ರಹ್ಮನಾಗಿ ಬಂದಿದೆಯೆಂದು ಯಥಾರ್ಥವನ್ನು ಹೇಳಿದ್ದೇವೆ. ಹಾಗೆ ಹೇಳುವುದಕ್ಕೆ ಕಾರಣ **ಎಲ್ಲಿಯಾದರೆ ಧರ್ಮಗಳು ಹೇಳಲ್ಪಡುತ್ತಿವೆಯೋ ಅಲ್ಲಿ ದೇವರು ಅವತರಿಸಿದ್ದಾನೆ** ಎನ್ನುವ ಸೂತ್ರದ ಪ್ರಕಾರ ಹೇಳಿದ್ದೇವೆ ಹೊರತು, ನಾನು ಕುರುಡನಂತೆ ಹೇಳಲಿಲ್ಲ. ದೇವರ ಅವತಾರವಾದ ರಾವಣಬ್ರಹ್ಮ ಈ ದಿನ ದುಷ್ಟನಾಗಿ ಚಿತ್ರಿಕರಿಸಲ್ಪಟ್ಟಿದ್ದಾನೆ. ನಿನ್ನೇ ಮೊನ್ನೆಯವರೆಗು ರಾವಣ ಬ್ರಹ್ಮನನ್ನು ದುಷ್ಟನೆಂದು ನಾನು ಕೂಡಾ ಅಂದುಕೊಂಡಿದ್ದೇನೆ. **ಸತ್ಯ ಶೋಧನೆ** ಮಾಡಿದ ನಂತರ **ಆತನು ಸಾಕ್ಷಾತ್ತೂ ದೇವರ ಅವತಾರವೆಂದು** ಆದ್ದರಿಂದಲೇ ಯಜ್ಞಗಳನ್ನು, ತಪಸ್ಸುಗಳನ್ನು ವಿರೋಧಿಸಿದ್ದಾನೆಂದು ತಿಳಿದಿದೆ. ಇಲ್ಲಿಯವರೆಗು ರಾವಣಬ್ರಹ್ಮನನ್ನು ಅರ್ಥ ಮಾಡಿಕೊಳ್ಳದೆ ಇರುವುದಕ್ಕೆ, ಇತರರ ಮಾತುಗಳು ಕೇಳಿ ಆತನನ್ನು ಕೆಟ್ಟವನನ್ನಾಗಿ ಭಾವಿಸಿರುವುದಕ್ಕೆ ಚಿಂತಿಸುತ್ತಿದ್ದೇವೆ. ನೀವು ಒಂದುಸಲ **ಕಣ್ತೆರೆದು ನೋಡಿರಿ**. ಆತನ್ಯಾರೋ ಅರ್ಥವಾಗುತ್ತದೆ.

ಸನಾತನ ಧರ್ಮವನ್ನು ಅವಮಾನಿಸುತ್ತಾ, ತ್ರೈತ ಸಿದ್ಧಾಂತವನ್ನು ಪ್ರಚಾರ ಮಾಡುತ್ತಿದ್ದಾರೆಂದು ನನ್ನನ್ನು ಆರೋಪಿಸಿದ್ದಾರೆ. ಬಾಯಿದೆಯೆಂದು ಮಾತನಾಡಿದರೆ ಅರ್ಥವಿಲ್ಲದೆ ಅರಚುವ ಕತ್ತೆಗೆ ಕೂಡಾ ಬಾಯಿರುತ್ತದೆ. ಅರ್ಥವಿಲ್ಲದೆ ಮಾತನಾಡುವವನು ಕತ್ತೆಗೆ ಸಮಾನವೆಂದು ನಾವು ಅಂದುಕೊಳ್ಳದೆ ತಪ್ಪೋಲ್ಲ. ಸನಾತನ ಧರ್ಮ ಎಂದರೆ ಏನೋ ತಿಳಿದಿದೆಯಾ? ಕನಿಷ್ಟ ಅದರ ಅರ್ಥವಾದರೂ ತಿಳಿದಿದೆಯಾ ಎಂದು ಕೇಳುತ್ತಿದ್ದೇನೆ. ಧರ್ಮ ಎಂದರೆ ಏನೋ ತಿಳಿಯದವರು "ಸನಾತನ ಧರ್ಮ" ಎಂದು ಹೇಳುವುದು ಆಶ್ಚರ್ಯ. ಸನಾತನ ಧರ್ಮ ಏನೊ ಕನಿಷ್ಟ ಅದರ ಅರ್ಥ ಕೂಡಾ ತಿಳಿಯದಂತೆ ಮಾತಾಡುವುದು ಒಬ್ಬ ಹಿಂದೂ ಮಾಡಬೇಕಾದ ಕೆಲಸವಲ್ಲ. ಹಿಂದೂಗಳಲ್ಲಿ 'ಧರ್ಮರಕ್ಷಣದಳ್' ಎಂದು ಹೆಸರಿಟ್ಟುಕೊಂಡವರಿಗೆ ಧರ್ಮಗಳೇ ತಿಳಿಯದೆಹೋದರೆ ಅವುಗಳನ್ನು ರಕ್ಷಿಸುವುದ್ದೇಗೆ ಎಂದು ಕೇಳುತ್ತಿದ್ದೇವೆ. ಧರ್ಮಗಳನ್ನು ಕುರಿತು ಅಹರ್ನಿಶೆಗಳು

ಜ್ಞಾನದಿಂದ ಶೋಧಿಸುವ ಯೋಗಿಗಳಿಗೆ, ಗುರುಗಳಿಗೆ ತಿಳಿದಿದೆ. **ದೇವರು ತನ್ನ ಗ್ರಂಥಗಳಲ್ಲಿ ಹೇಳಿದ ಧರ್ಮಗಳನ್ನು ವಿವರವಾಗಿ ಪ್ರಜೆಗಳಿಗೆ ಹೇಳುವವರು ಯೋಗಿಗಳು, ಗುರುಗಳು,** ಇಂದೂ ಧರ್ಮ (ಹಿಂದೂ ಧರ್ಮ) ಪ್ರಬೋಧಿಕರು ಗುರುಗಳು. ಆಧ್ಯಾತ್ಮಿಕ ಗುರುಗಳು ಹೇಳಿದರೆ ನಿಮ್ಮಂತಹವರಿಗೆ ಧರ್ಮಗಳು ತಿಳಿಯಲ್ಪಡುತ್ತವೆ. ಅಷ್ಟೇಹೊರತು ಬೀಧಿ ರೌಡಿಗಳಿಗೆ, ಗುರುಗಳನ್ನು ಬೆದರಿಸಿ ಕೊಳ್ಳುವವರಿಗು ಧರ್ಮಗಳು ತಿಳಿಯುವುದಿಲ್ಲ, ಅವರು ಅವುಗಳನ್ನು ರಕ್ಷಿಸಲಾರರು, **ಧರ್ಮಗಳನ್ನು ವಿವರವಾಗಿ ಬೋಧಿಸುವವರು ಗುರುಗಳು, ಧರ್ಮಗಳನ್ನು ಉದ್ಧರಿಸುವವನು, ರಕ್ಷಿಸುವವನು ದೇವರು,** ದೇವರು ಹೇಳಿದ ಧರ್ಮಗಳನ್ನು ಪ್ರಜೆಗಳಿಗೆ ವಿವರವಾಗಿ ಹೇಳುವವರನ್ನೇ ನೀವು ಅವಮಾನಿ ಸುತ್ತಿದ್ದೀರೆಂದರೇ ನೀವು ಹಿಂದೂ ಜಾತಿಯೇ ಅಲ್ಲವೆಂದು ತಿಳಿಯುತ್ತಿದೆ.

ಸನಾತನ ಧರ್ಮದಲ್ಲಿನ ಅರ್ಥವನ್ನು ವಿವರಿಸಿಕೊಂಡು ನೋಡಿದರೆ **'ಸನಾತನ ಎಂದರೇ ಯಾವಾಗಲೂ ಎಂದು ಅರ್ಥ. ಸೃಷ್ಟ್ಯಾದಿಯಿಂದ ಇಂದಿನ ವರೆಗೂ ಅಚ್ಚಳಿಯದಂತೆ ಇರುವ ಧರ್ಮವನ್ನು 'ಸನಾತನ ಧರ್ಮ'** ಎಂದು ಕರೆಯುತ್ತೇವೆ. ನಾವು ಧರ್ಮಗಳನ್ನು ಉದ್ಧರಿಸುವವರು ಎಂದು ಹೇಳಿಕೊಳ್ಳುವ ವರೆಲ್ಲರೂ ಸನಾತನ ಧರ್ಮವೆಂದು ಹೇಳುತ್ತಿರುತ್ತಾರೆ. ಅವರನ್ನು ಕೇಳಿದರೆ ಕಾಲವನ್ನನುಸರಿಸಿ ಧರ್ಮಗಳು ಬದಲಾಗುತ್ತಿರುತ್ತವೆಂದು ಕೂಡಾ ಹೇಳುತ್ತಿದ್ದಾರೆ. ಸನಾತನ ಧರ್ಮವೆಂದರೇ ಎಂದಿಗೂ ಒಂದೇ ಇರುವುದಾ ಅಥವಾ ಯಾವಾಗಲೂ ಬದಲಾಗುತ್ತಿರುವುದಾ! ಎಂದು ಅವರಿಗೇ ತಿಳಿಯದಂತೆ ಹೋಗಿದೆ. ಅದು ಕೃತಯುಗದಲ್ಲಿನ ಧರ್ಮ, ಇದು ಕಲಿಯುಗದಲ್ಲಿನ ಧರ್ಮ ಎಂದು ಹೇಳುವವರಿಗೆ ಸನಾನತ ಧರ್ಮವನ್ನು ಕುರಿತು ತಿಳಿದಿಲ್ಲವೆಂದೇ ಹೇಳಬಹುದು. **'ಸನಾತನ ಧರ್ಮ'** ಎಂದರೇ **ಸೃಷ್ಟಿ ಆದಿಯಿಂದ ಇಂದಿನ ವರೆಗು ಒಂದೇ ವಿಧವಾಗಿ, ಒಂದೇ ಬಲವಾಗಿ ನಿಂತಿರುವುದು ಸನಾತನ ಧರ್ಮ.** ಮೊದಲು ಪ್ರಾರಂಭವಾಗಿರುವುದು ಎಂದಿಗೂ ಬದಲಾಗದಂತೆ ಇರುವುದೇ ಅಲ್ಲದೇ, ಅದು ಹೊರತುಪಡಿಸಿ ಬೇರೆ ಧರ್ಮ ಇಲ್ಲದಿರುವುದು ಸನಾತನ ಧರ್ಮ

ವಾಗುತ್ತದೆ. ಮಧ್ಯದಲ್ಲಿ ಇನ್ನೊಂದು ಧರ್ಮ ಬಂದು ಮೊದಲನೆಯದನ್ನು ಇಲ್ಲದಂತೆ ಮಾಡಿದರೂ, ಬಲಹೀನ ಪಡಿಸಿದರೂ ಮೊದಲನೇಯದು ಸನಾತನ ಅಲ್ಲದಂತೆ ಹೋಗುತ್ತದೆ. ಆದ್ದರಿಂದ ಸೃಷ್ಠಿ ಆದಿಯಲ್ಲಿ ದೇವರು ಯಾವ ಧರ್ಮಗಳನ್ನು ಬೋಧಿಸಿದ್ದಾನೊ ಅದೇ ಧರ್ಮಗಳು ಇಲ್ಲಿಯವರೆಗು ಇವೆ. ಸೃಷ್ಠ್ಯಾದಿಯಿಂದ ಒಬ್ಬ ದೇವರೇ ಇದ್ದಾನೆ. ಹಾಗೇ ಸೃಷ್ಠ್ಯಾದಿಯಿಂದ ಒಂದೇ ಧರ್ಮವಿದೆ. ಮಧ್ಯದಲ್ಲಿ ಯಾವಾಗಾದರೂ ಬೇರೆ ದೇವರು ಬಂದರೆ, ಬೇರೆ ಧರ್ಮ ಬರುತ್ತದೆ. ಮಧ್ಯದಲ್ಲಿ ಇಲ್ಲಿಯವರೆಗು ಯಾವ ದೇವರು ಬರಲಿಲ್ಲ, ಆದ್ದರಿಂದ ಇತರ ಧರ್ಮ ಬರಲಿಲ್ಲ. **ಸೃಷ್ಠ್ಯಾದಿಯಿಂದ ಒಬ್ಬನೇ ದೇವರು, ಒಂದೇ ಧರ್ಮವಿದೆ, ಅದನ್ನೇ ಸನಾತನ ಧರ್ಮ** ಎಂದು ಹೇಳುತ್ತೇವೆ.

**26) ಪ್ರಶ್ನೆ :– ಎರಡು ಸಾವಿರ ವರ್ಷಗಳ ಪೂರ್ವದಲ್ಲಿ "ಕ್ರೈಸ್ಥವ ಮತ" ಬಂದಿದೆ. ಅದರಿಂದ ಕ್ರೈಸ್ಥವ ಧರ್ಮ ಬಂದಿದೆ. "ಯೆಹೋವಾ" ದೇವರು ಬಂದಿದ್ದಾನೆ. ಆಗ ದೇವರು ಬೇರೆ ಬರುವುದು, ಧರ್ಮ ಬೇರೆ ಬರುವುದು ನಡೆದಿದೆ ಅಲ್ಲವೆ! ಹಾಗೇ 1400 ವರ್ಷಗಳ ಹಿಂದೆ "ಇಸ್ಲಾಮ್ ಮತ" ಬಂದಿದೆ. "ಅಲ್ಲಾಹ್" ದೇವರು ಬಂದಿದ್ದಾನೆ ಅವರಿಗೆ, ಇಸ್ಲಾಮ್ ಧರ್ಮ ಬಂದಿದೆ. ಆಗಲೂ ಸಹಾ ಬೇರೆಯೊಬ್ಬ ದೇವರು ಬರುವುದು, ಬೇರೆಯೊಂದು ಮತ ಬರುವುದು ನಡೆದಿದೆ ಅಲ್ಲವೆ! ಇದನ್ನನುಸರಿಸಿ ನೀವು ಹೇಳಿದ ಪ್ರಕಾರವಾದರೆ ಸನಾತನ ಧರ್ಮ ಒಂದೇ ಎಂದಿಗೂ ಇಲ್ಲವಲ್ಲ! ಆಗ ಸನಾತನ ಧರ್ಮ ಎಂಬಮಾತೇ ಇಲ್ಲ ಅಲ್ಲವೇ! ಅಂತಹದರಲ್ಲಿ ಹಿಂದೂಗಳು ಮಾತ್ರ ನಮ್ಮದು 'ಸಾನತನ ಧರ್ಮ' ಎಂದು ಏಕೆ ಹೇಳಬೇಕು? ಇತರ**

**ಮತಗಳ ಬರುವಿಕೆಯಿಂದ ಹಿಂದೂಮತ ಕ್ಷೀಣಿಸಿ ಹೋದರೂ, ಹೋಗದಿದ್ದರೂ ಅದು ಒಂದೇ 'ಸನಾತನ ಧರ್ಮ' ಎಂದು ಏಕೆ ಹೇಳಬೇಕು? ಉಳಿದ ಮತ ಧರ್ಮಗಳು ಕೂಡಾ ಹುಟ್ಟಿದಾಗಿನಿಂದ ಇವೆ ಅಲ್ಲವೇ! ಆಗ ಅವು ಕೂಡಾ ಸನಾತನ ಧರ್ಮಗಳೇ ಆಗುತ್ತವೆ ಅಲ್ಲವೇ! ಇದಕ್ಕೆ ನೀವೇನು ಹೇಳುತ್ತೀರ?**

**ಉತ್ತರ :–** ಮಧ್ಯದಲ್ಲಿ ಬೇರೆ ದೇವರು ಬಂದರೂ, ಬೇರೆ ಧರ್ಮ ಬಂದರೂ ಅಂದಿನಿಂದ ಬಂದಿರುವ ಧರ್ಮ ಗುರುತಿಸಲ್ಪಡುತ್ತದೆ. ಆದ್ದರಿಂದ ಮೊದಲಿರುವುದು ಸನಾತನ ಎನಿಸಿಕೊಳ್ಳುವುದಿಲ್ಲ. ಒಂದು ದೇಶಕ್ಕೆ ಎಂದಿಗೂ ಒಬ್ಬನೇ ಚಕ್ರವರ್ತಿ ಇರಬೇಕು. ಹಾಗೆ ಇದ್ದರೆ ಆತನನ್ನು ಶಾಶ್ವತ ಚಕ್ರವರ್ತಿ ಎಂದು ಹೇಳಬಹುದು. ಹಾಗೆ ಅಲ್ಲದೇ ಮಧ್ಯದಲ್ಲಿ ಆ ದೇಶಕ್ಕೆ ಇನ್ನೊಬ್ಬ ಚಕ್ರವರ್ತಿ ಬಂದಾಗ ಮೊದಲಿನ ಚಕ್ರವರ್ತಿ ರಾಜನಂತೆ ಬದಲಾಗಿಹೋಗುತ್ತಾನೆ, ಚಕ್ರವರ್ತಿ ಪದವಿ ಹೋಗುತ್ತದೆ. ಬೇರೆ ಚಕ್ರವರ್ತಿ ಬರದವರೆಗು ಅವನು ಶಾಶ್ವತ ಚಕ್ರವರ್ತಿ ಎನಿಸಿಕೊಳ್ಳುತ್ತಾನೆ. ಬೇರೆ ಚಕ್ರವರ್ತಿ ಬಂದರೇ ಆತನು ರಾಜನಾಗಿ ಬದಲಾಗಿ ಹೋಗುತ್ತಾನೆ. ಅದೇ ವಿಧವಾಗಿ ಒಬ್ಬನೇ ದೇವರು, ಒಂದೇ ಧರ್ಮ ಇರುವವರೆಗು ಅದನ್ನು ಶಾಶ್ವತ ಧರ್ಮ ಇಲ್ಲವೇ ಸನಾತನ ಧರ್ಮವೆಂದು ಹೇಳುತ್ತೇವೆ. ದೇವರನ್ನು ಅನುಸರಿಸಿ ಧರ್ಮ ಇರುತ್ತದೆ. ಆದ್ದರಿಂದ ದೇವರು ಬದಲಾದರೆ ಧರ್ಮ ಬದಲಾಗುತ್ತದೆ, ಆದಕಾರಣ ಸನಾತನ ಧರ್ಮ ಇರುವುದಿಲ್ಲ ಎಂಬ ಮಾತು ವಾಸ್ತವವೇ ಆದರೂ ಸೃಷ್ಠಿ ಆದಿಯಿಂದ ದೇವರು ಬದಲಾಗಲಿಲ್ಲ. ಧರ್ಮ ಬದಲಾಗಲಿಲ್ಲ. ಆದ್ದರಿಂದ ಎಂದಿಗೂ ಒಂದೇ ಧರ್ಮ ಇದೆ ಆದ್ದರಿಂದ ಇರುವುದು ಒಂದೇ ಶಾಶ್ವತ ಧರ್ಮವೆಂದು ಅದನ್ನೇ ಸನಾತನ ಧರ್ಮವೆಂದು ಹೇಳುತ್ತಿದ್ದೇವೆ. ಸೃಷ್ಠಿ ಆದಿಯಲ್ಲಿಂದ ಹಿಂದೂ ಧರ್ಮ ಇರುವ ಮಾತು ವಾಸ್ತವವೇ. ಇಂದೂ (ಹಿಂದೂ) ಧರ್ಮವನ್ನು **ಶಾಶ್ವತ ಧರ್ಮ ಅಥವಾ ಸನಾತನ ಧರ್ಮ** ಎನ್ನುವುದು ನಡೆಯುತ್ತಿದೆ.

ಮಧ್ಯದಲ್ಲಿ ಕ್ರೈಸ್ಥವ ಎಂಬ ಹೆಸರು (ಮತ) ಬಂದರೂ, ನಂತರ ಇಸ್ಲಾಮ್ ಎಂಬ ಹೆಸರು (ಮತ) ಬಂದರೂ ಅದರಲ್ಲಿ ಕೂಡಾ ಮೊದಲು ಇದ್ದ ದೇವರೇ ಇದ್ದಾನೆ, ಆದ್ದರಿಂದ ಮೊದಲಿದ್ದ ಧರ್ಮವೇ ಇದೆ. ಆದಕಾರಣ ಅಂದಿಗೂ ಇಂದಿಗೂ ಒಂದೇ ಧರ್ಮ, ಒಂದೇ ದೇವರು ಇದ್ದಾನೆಂದು ಹೇಳಬಹುದು. ಮಧ್ಯದಲ್ಲಿ ಮತಗಳ ಹೆಸರು ಬದಲಾದರೂ, ದೇವರ ಹೆಸರು ಬದಲಾದರೂ ದೇವರು ಒಬ್ಬನೇ ಇದ್ದಾನೆ. ಧರ್ಮವು ಒಂದೇ ಇದೆ. ಮೊದಲು ಸೃಷ್ಠಿ ನಡೆದ ನಂತರ ಅದೇ ವಿಧಾನವೇ ಇಲ್ಲಿಯವರೆಗು ನಡೆಯುತ್ತಾ ಬಂದಿದೆ. ಮನುಷ್ಯನಿಗೆ ದೇವರ ವಿಧಾನ ಅರ್ಥವಾಗುವುದಕ್ಕೆ ಹೊಸ ಹೆಸರಿನಿಂದ ದೇವರು, ಹೊಸ ಹೆಸರಿನಿಂದ ಧರ್ಮ ಬಂದರೂ, ಬಂದಿರುವ **ದೇವರು** ಮೊದಲಿನವನೇ, ಬಂದಿರುವ **ಧರ್ಮ** ಮೊದಲಿನ ಧರ್ಮವೇ. ಆದ್ದರಿಂದ ಸೃಷ್ಠಿ ಆದಿಯಿಂದ ಒಬ್ಬನೇ ದೇವರು, ಒಂದೇ ಧರ್ಮವೇ ಇದೆಯೆಂದು ಹೇಳಬಹುದು. ಅದನ್ನೇ ಸನಾತನ ದೇವರು, ಸನಾತನ ಧರ್ಮ ಎಂದು ಹೇಳಬಹುದು. ಆದರೂ ಈ ದಿನ ಧರ್ಮವೊಂದರ ವಾಸನೆ ಕೂಡಾ ತಿಳಿಯದವರು ನಮ್ಮನ್ನು ಆರೋಪಿಸು ವುದು ಆನೆಯನ್ನು ನೋಡಿ ನಾಯಿಗಳು ಬೊಗಳಿದಂತೇಯೆಂದು ತಿಳಿಯಿರಿ.

## 27) ಪ್ರಶ್ನೆ :- ನಿಮಗೆ ಸಂಸ್ಕೃತ ಬರುವುದಿಲ್ಲ, ನೀವು ವೇದಗಳನ್ನು ಓದಲಿಲ್ಲ ಅಂತಹವರು ಗುರುಗಳು ಹೇಗೆ ಆಗುತ್ತಾರೆ ಎಂದು ಕೆಲವರು ಅನ್ನುತ್ತಿದ್ದಾರೆ. ಅದಕ್ಕೆ ನೀವು ಏನು ಹೇಳುತ್ತೀರಾ?

**ಉತ್ತರ :-** ಸಂಸ್ಕೃತ ಒಂದು ಭಾಷೆ. ಭಾವವನ್ನು ತಿಳಿಸುವುದು ಭಾಷೆ. ಅಷ್ಟೇಅಲ್ಲದೆ ಸಂಸ್ಕೃತ ಭಾಷೆಗೆ ಲಿಪಿಯಿಲ್ಲ. ಲಿಪಿ ಇಲ್ಲದ ಭಾಷೆ ಲಿಪಿ ಇರುವ ಭಾಷೆಗಿಂತ ಕಡಿಮೆಯದ್ದೇ ಆಗುತ್ತದೆ. **ಆಧ್ಯಾತ್ಮಿಕ ಎಂದರೇ ಆತ್ಮವನ್ನು ಅಧ್ಯಾಯನ ಮಾಡುವುದು**. ಆಧ್ಯಾತ್ಮಿಕಕ್ಕು, ಭಾಷೆಗು ಯಾವ ರೀತಿಯ ಸಂಬಂಧವಿಲ್ಲ. **ಬುದ್ಧಿ ಗ್ರಾಹಿತಶಕ್ತಿ** ಮೇಲೆ ಆಧ್ಯಾತ್ಮಿಕವು ಆಧಾರಪಟ್ಟಿರುತ್ತದೆ ಆದರೆ, ಭಾಷೆ ಮೇಲೆ ಆಧಾರ ಪಟ್ಟಿರುವುದಿಲ್ಲ. ಅದೂ ಲಿಪಿ ಇಲ್ಲದ ಭಾಷೆ ದೊಡ್ಡದಾ?

ಲಿಪಿ ಇರುವ ಭಾಷೆ ದೊಡ್ಡದಾ? ಸ್ವಲ್ಪ ಬುದ್ಧಿಯನ್ನುಪಯೋಗಿಸಿ ಆಲೋಚಿಸಿರಿ. ಯಾರೋ ಏನೊ ಹೇಳಿದರೆ ಅದನ್ನೇ ನೀನು ಹೇಳುವುದು, ನಿನ್ನ ಬುದ್ದಿವೊಂದರ ದೊಡ್ಡಸ್ತಿಕೆ ಅಲ್ಲ. ನೀನು ಸ್ವತಃವಾಗಿ ಆಲೋಚಿಸಿ ತಿಳಿದುಕೊ, ಆಧ್ಯಾತ್ಮಿಕಕ್ಕು, ಸಂಸ್ಕೃತ ಭಾಷೆಗು ಎಂತಹ ಸಂಬಂಧವಿಲ್ಲ. ಆದ್ದರಿಂದ ಈ ದಿನ ಸಂಸ್ಕೃತವನ್ನು ಕಲಿತಿರುವ ಒಬ್ಬರಿಗೂ ಕೂಡಾ **ಆಧ್ಯಾತ್ಮಿಕ** ತಿಳಿದಿಲ್ಲ. ವೇದಗಳ ವಿಷಯಕ್ಕೆ ಬಂದರೇ ಪ್ರಥಮ ದೈವಗ್ರಂಥವಾದ ಭಗವದ್ಗೀತೆಯೇ ವೇದಗಳನ್ನು ಕುರಿತು ಹೇಳುತ್ತಾ **"ತ್ರೈಗುಣ್ಯ ವಿಷಯಾ ವೇದಾ"** ಎಂದು ಹೇಳಿದೆ. ಅದರಲ್ಲಿ **"ವೇದಗಳಲ್ಲಿ ಮೂರು ಗುಣ ವಿಷಯಗಳು ಹೊರತು ಏನೂ ಇಲ್ಲ"** ಎಂದು ಹೇಳಿ **"ಮೂರು ಗುಣಗಳನ್ನು ವಿಸರ್ಜಿಸಿದಾಗಲೇ ಆಧ್ಯಾತ್ಮಿಕವು ತಿಳಿಯುತ್ತದೆ."** ಎಂದು ಕೂಡಾ ಹೇಳುವುದು ನಡೆದಿದೆ. ಅಷ್ಟೇಅಲ್ಲದೆ **"ಗುಣ ಮಯಿ ಮಮ ಮಾಯ"** ಎಂದು ಕೂಡಾ ಹೇಳಿದ್ದಾರೆ. **'ನನ್ನ ಮಾಯೆ ಎನ್ನುವುದು ಗುಣಗಳಿಂದ ಕೂಡಿಕೊಂಡಿದೆ.'** ಎಂದು ಹೇಳಿದ್ದಾರೆ. **ಆಗ ವೇದಗಳು ಮಾಯೆ ಎಂದು, ಗುಣಗಳ ಸೇರುವಿಕೆ ಎಂದು** ತಿಳಿಯುತ್ತಿದೆ ಅಲ್ಲವೇ!

**"ಮೂರು ಗುಣಗಳ ವಿಷಯಗಳೇ ವೇದಗಳಲ್ಲಿ ಇವೆಯೆಂದು"** ಭಗವದ್ಗೀತೆ ಸಾಂಖ್ಯಯೋಗದಲ್ಲಿ 45ನೇ ಶ್ಲೋಕದಲ್ಲಿಯೂ **"ಗುಣಗಳೇ ಮಾಯೆಯೆಂದು, ಮಾಯೆಯನ್ನು ಜಯಿಸುವುದು ದುಸ್ಸಾಧ್ಯವೆಂದು"** ವಿಜ್ಞಾನ ಯೋಗದಲ್ಲಿ 14ನೇ ಶ್ಲೋಕದಲ್ಲಿ ಹೇಳಿರುವುದೇ ಅಲ್ಲದೆ, ಭಗವದ್ಗೀತೆಯಲ್ಲಿಯೇ ವಿಶ್ವರೂಪ ಸಂದರ್ಶನ ಯೋಗದಲ್ಲಿ 48, 53 ಶ್ಲೋಕಗಳಲ್ಲಿ **"ವೇದಾಧ್ಯಯನ ದಿಂದ ದೇವರನ್ನು ತಿಳಿಯುವುದಕ್ಕೆ ಶಕ್ಯವಲ್ಲಯೆಂದು"** ಹೇಳಿರುವಾಗ, ಮೂರುಕಡೆ ಹೇಳಿದ ದೇವರ ಮಾತನ್ನು ಅತಿಕ್ರಮಿಸಿ ವೇದಗಳನ್ನು ಓದುವುದು, ದೇವರ ಮಾತನ್ನು ಲೆಕ್ಕಮಾಡದೆ ವಿರುದ್ಧವಾಗಿ ಪ್ರವರ್ತಿಸಿದಂತಲ್ಲವೇ! ಮನುಷ್ಯರು ಹೇಳುವ ಮಾತುಗಳು ಕೇಳಿ ವೇದಗಳನ್ನು ಓದಿದರೆ ದೇವರ ಮಾತನ್ನು ಹೇಗೆ ಕೇಳಿದಂತಾಗುತ್ತದೆ? ದೇವರ ಧರ್ಮವನ್ನು ಹೇಗೆ ಆಚರಿಸಿದಂತಾಗುತ್ತದೆ? ವೇದಗಳು ಓದಿದರೆ ದೇವರಿಗೆ ವಿರುದ್ಧ ಭಾವನೆಯಲ್ಲಿ ಹೋದಂತಾಗುತ್ತದೆ. ಆದ್ದರಿಂದ ನಾವು ವೇದಗಳಿಗೆ ದೂರವಾಗಿರುತ್ತೇವೆ. ವೇದಗಳನ್ನು ಓದುವವರನ್ನು

ದೇವರ ಮಾತನ್ನು ಕೇಳದವರಾಗಿ ಲೆಕ್ಕಿಸುತ್ತೇವೆ. ನಾವು ವೇದಗಳು ಓದಲಿಲ್ಲ, ಆದ್ದರಿಂದ ನಮ್ಮ ಹತ್ತಿರ ದೈವಶಕ್ತಿ ಸಂಪೂರ್ಣವಾಗಿದೆ. ನಿಮ್ಮ ಹತ್ತಿರವೇನಿದೆಯೋ ಹೇಳಿರಿ ನೋಡೋಣ. ಪ್ರಜೆಗಳು ಪ್ರಶ್ನಿಸಿದರೆ ನೀವೇನು ಹೇಳುತ್ತೀರಾ?

## 28) ಪ್ರಶ್ನೆ :– ಈ ದಿನ ಹಿಂದೂ ಧರ್ಮರಕ್ಷಣಾ ಸಂಸ್ಥೆಗಳು ಎರಡು ಹತ್ತರ ಸಂಖ್ಯೆಯಲ್ಲಿ ಇವೆ ಅಲ್ಲವೇ! ಅವರು ಮತಾಂತರ ನಡೆಯದಂತೆ ನೋಡುತ್ತಿದ್ದಾರಲ್ಲ! ಅದು ಅಗತ್ಯ ಇಲ್ಲವೆನ್ನುತ್ತೀರಾ?

**ಜವಾಬು:–** ಮತ ಬದಲಾವಣೆ ನಡೆಯದಂತೆ ನೋಡುತ್ತಿರುವ ಸಂಸ್ಥೆಗಳಿಗೆ, ಮತ ರಕ್ಷಣೆ ಸಂಸ್ಥೆಗಳೆಂದು ಹೆಸರು ಇಟ್ಟುಕೊಳ್ಳುವುದು ಒಳ್ಳೆಯದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. 'ಮತವನ್ನು ರಕ್ಷಿಸುತ್ತಾ, ಧರ್ಮರಕ್ಷಣೆ' ಎಂದು ಹೆಸರು ಇಟ್ಟುಕೊಳ್ಳುವುದು, ನಾವು ಹಿಂದೂ ಧರ್ಮರಕ್ಷಣೆ ಮಾಡುತ್ತಿದ್ದೇವೆನ್ನುವುದು, ಒಂದು ಮಾಡುತ್ತಾ ಮತ್ತೊಂದನ್ನು ಹೇಳಿದಂತೆ ಅಲ್ಲವೆ! ಒಣ ಮೀನುಗಳನ್ನು ಮಾರುವವನು 'ಒಣ ಮೆಣಸಿನಕಾಯಮ್ಮೊ' ಎನ್ನುವಂತಿದೆ. ಮಾಡುವುದೊಂದು, ಹೇಳುವುದು ಮತ್ತೊಂದಾ? **ಮತ ಪ್ರಪಂಚ ಸಂಬಂಧವಾದುದು, ಧರ್ಮ ಎನ್ನುವುದು ದೈವ ಸಂಬಂಧವಾದುದು.** ನೀವು ನಿಮ್ಮ ಮತವನ್ನು ಪ್ರೀತಿಸುತ್ತಿದ್ದೀರ, ಸರಿ ನೀವು ಮತ ಕ್ಷೀಣಿಸದಂತೆ, ಮತಾಂತರ ನಡೆಯದಂತೆ ನೋಡುತ್ತಿದ್ದೀರ. ನೀವು ಮಾಡುವುದು ಪ್ರಪಂಚ ಸಂಬಂಧವಾಗಿ ಒಳ್ಳೆಯ ಕೆಲಸವೇ. ಆದರೇ ನೀವು ಮಾಡುತ್ತಿರುವ ಕೆಲಸವನ್ನು ಧೈರ್ಯವಾಗಿ ಹೇಳಿಕೊಳ್ಳಿರಿ ಅದರಲ್ಲಿ ತಪ್ಪಿಲ್ಲ. ಹಾಗಲ್ಲದೆ **ಮಾಡುವುದು ಮತರಕ್ಷಣೆ, ಹೇಳುವುದು ಧರ್ಮರಕ್ಷಣೆ** ಇದು ಏನಾದರೂ ನ್ಯಾಯವೆನ್ನುತ್ತೀರಾ?

ನಾನು ಧರ್ಮಗಳನ್ನು ರಕ್ಷಿಸಲಿಲ್ಲ ಆದರೆ, ದೇವರು ಹೇಳಿದ ಧರ್ಮ ಗಳನ್ನು ವಿವರಿಸಿ ಪ್ರಜೆಗಳಿಗೆ ಹೇಳುತ್ತಿದ್ದೇನೆ. ನನ್ನ ಲೆಕ್ಕದಲ್ಲಿ ಮತಕ್ಕು, ಧರ್ಮಕ್ಕು ಸಂಬಂಧ ಬೇರೆ. ಆದ್ದರಿಂದ **"ಸಮಸ್ತ ಮಾನವರಿಗು ನಾನು ಧರ್ಮಗಳನ್ನು**

**ತಿಳಿಸುತ್ತಿದ್ದೇನೆ."** ಆದ್ದರಿಂದ ನಮ್ಮ ಹತ್ತಿರಕ್ಕೆ ಹಿಂದೂ, ಕ್ರೈಸ್ಥವ, ಮುಸ್ಲಿಮ್ ಮೂರು ಮತದವರು ಬರುತ್ತಿದ್ದಾರೆ. ಮೂರು ದೈವ ಗ್ರಂಥಗಳಾದ ಭಗವದ್ಗೀತೆ, ಬೈಬಿಲ್, ಖುರಾನ್ ಗ್ರಂಥಗಳಲ್ಲಿ ಒಂದೇ ಧರ್ಮವನ್ನು ಅವರಿಗೆ ತೋರಿಸುತ್ತಿದ್ದೇನೆ. ಒಬ್ಬ ದೇವರನ್ನೇ ತಿಳಿಯುವಂತೆ ಮಾಡುತ್ತಿದ್ದೇನೆ. ಆದ್ದರಿಂದ ನನ್ನ ಹತ್ತಿರಕ್ಕೆ ಬಂದಿರುವ ಮೂರು ಮತದವರು ಒಂದೇ ದೇವರ ಮುದ್ರೆಯನ್ನು ಧರಿಸುತ್ತಿದ್ದಾರೆ. ದೇವರ ಮುದ್ರೆಯನ್ನು ಕುರಿತು **ಮುಸ್ಲಿಮ್‌ರು ತಮ್ಮ ಗ್ರಂಥದಲ್ಲಿ ಸುರಾ 22ರಲ್ಲಿ, ಆಯತ್ 32ರಲ್ಲಿ "ದೇವರ ಚಿಹ್ನೆ (ದೇವರ ಮುದ್ರೆ)" ಇದೆಯೆಂದು ತಿಳಿದುಕೊಂಡಿದ್ದಾರೆ. ಹಾಗೇ ಕ್ರೈಸ್ಥರು ತಮ್ಮ ಬೈಬಿಲ್‌ನಲ್ಲಿ ಯೋಹಾನ್ ಪ್ರಕಟಣೆಯಲ್ಲಿ 9ನೇ ಅಧ್ಯಾಯ 4ನೇ ವಚನದಲ್ಲಿರುವ 'ದೇವರಮುದ್ರೆ'ಯನ್ನು ಗ್ರಹಿಸಿದ್ದಾರೆ.** ನಾವು ವಿವರಿಸಿ ಹೇಳಿದ ದೇವರ ಚಿಹ್ನೆಯಾದ ನಾಲ್ಕು ಚಕ್ರಗಳ ಆಕಾರವನ್ನು ಮೂರು ಮತದವರು ಧರಿಸಿ, ಒಂದೇ ವೇದಿಕೆ ಮೇಲೆ ನಾವೆಲ್ಲರೂ ಒಂದೇಯೆಂಬ ಭಾವನೆಯನ್ನು ತಿಳಿಸುತ್ತಾ ಕಾಣಿಸುತ್ತಿದ್ದಾರೆ. ನಮ್ಮ ಹತ್ತಿರ **'**ಮತ**'** ಎನ್ನುವ ಪ್ರಸ್ತಾಪ ಇಲ್ಲದೇ, **'**ಮತಾಂತರ**'** ಎಂಬ ಆಲೋಚನೆಯೇ ಇಲ್ಲದಂತೆ ಧರ್ಮಗಳ ಮೇಲೆ ದೃಷ್ಠಿಯಿಂದ ಇದ್ದಾರೆ. ನಾವು ಹಿಂದೂ ಧರ್ಮ ರಕ್ಷಕರು ಎನ್ನುವವರು ಇತರ ಮತದವರಿಗೆ ಒಂದೇ ಧರ್ಮವನ್ನು ಕುರಿತಾದ ಜ್ಞಾನವನ್ನು ಹೇಳಬಲ್ಲಿರಾ? ಮುಸ್ಲಿಮ್‌ರ ಹಣೆಯ ಮೇಲಾಗಲಿ, ಕ್ರೈಸ್ಥರ ಹಣೆಯ ಮೇಲಾಗಲಿ ಅವರ ಇಷ್ಟ ಪ್ರಕಾರ ದೇವರ ಮುದ್ರೆಯನ್ನು ಧರಿಸುವಂತೆ ಮಾಡಬಲ್ಲಿರಾ? ಯಾರೂ ಮಾಡಲಾರರು. ಯಾರೂ ಮಾಡಲಾರದ ಕೆಲಸವನ್ನು ನಾನು ಮಾಡಿ ತೋರಿಸುತ್ತಾ, ಎಲ್ಲಾರ ದೇವರು ಒಬ್ಬನೇ, ಎಲ್ಲಾರ ಧರ್ಮ ಒಂದೇಯೆಂದು ಹೇಳುತ್ತಿದ್ದೇವೆ. ನೀವು ಮತ ರಕ್ಷಕರು, ನಾವು ಧರ್ಮ ಬೋಧಕರು. ಇದು ಗ್ರಹಿಸದೆ ನನ್ನನ್ನು ಅಧರ್ಮಗಳು ಪ್ರಚಾರ ಮಾಡುವವನನ್ನಾಗಿ, ಹಿಂದೂ ಧರ್ಮಗಳನ್ನು ನಾಶ ಮಾಡುವವರನ್ನಾಗಿ ಚಿತ್ರಿಸಿ ಆರೋಪಣೆಗಳು ಮಾಡುವುದನ್ನು ದೇವರು ಕೂಡಾ ಸಹಿಸುವುದಿಲ್ಲ.

ಮತಕ್ಕು ಧರ್ಮಕ್ಕು, ನರಿಗು ನಾಗಲೋಕಕ್ಕು ಇರುವಷ್ಟು ವ್ಯತ್ಯಾಸ ಇದೆ. ಅಂತಹ ಮತ ಪ್ರಚಾರವನ್ನು ಮಾಡುತ್ತಾ, ನಮ್ಮ ಮತವೇ ಶ್ರೇಷ್ಠವಾದುದೆಂಬ

ಭಾವನೆಯಲ್ಲಿ ಮತಾಂತರ ನಡೆಯದಂತೆ ಇಷ್ಟು ಸಂಸ್ಥೆಗಳು ನೋಡುತ್ತಿದ್ದರೂ, ನಿತ್ಯವೂ ಮತಾಂತರ ನಡೆಯುತ್ತಲೇ ಇದೆ. ಹಿಂದೂಗಳು ಕ್ರೈಸ್ಥರಾಗಿ, ಮುಸ್ಲಿಮ್‌ರಾಗಿ ಬದಲಾಗುತ್ತಲೇ ಇದ್ದಾರೆ. ಅಂತದರಲ್ಲಿ ನೀವು ಏನು ಮಾಡುತ್ತಿದ್ದೀರಾ? ಜ್ಞಾನವನ್ನು ಬೋಧಿಸಿ ಧರ್ಮವನ್ನು ತಿಳಿಸುವುದರಿಂದ ಎಲ್ಲಾ ಮತಗಳಲ್ಲಿಯೂ ಒಂದೇ ಧರ್ಮ, ಒಬ್ಬನೇ ದೇವರಿದ್ದಾನೆಂದು ತಿಳಿದು ಯಾರೂ ಮತವನ್ನು ಬದಲಾಯಿಸುವುದಿಲ್ಲ. ನಾನು **"ಮತಾಂತರ ದೈವದ್ರೋಹ"** ಎನ್ನುವ ಗ್ರಂಥವನ್ನು ಬರೆದಿದ್ದೇನೆ. ಅದನ್ನು ಓದಿದವರು ಯಾರೂ ಮತವನ್ನು ಬದಲಾಗಬೇಕೆಂದುಕೊಳ್ಳಲಿಲ್ಲ. ಹಿಂದೂ ಮತದಲ್ಲಿನ ಭಗವದ್ಗೀತೆಯಲ್ಲಿ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿರುವ **"ಮೂವರು ಪುರುಷರ ಧರ್ಮವೇ"** ಬೈಬಲ್‌ನಲ್ಲಿಯೂ ಖುರಾನ್‌ನಲ್ಲಿಯೂ ತೋರಿಸಿರುವು ದರಿಂದ ಇಲ್ಲಿರುವುದೇ ಅಲ್ಲಿದೆಯೆಂದು ಇರುವ ಮತದಲ್ಲಿಯೇ ಜ್ಞಾನವನ್ನು ತಿಳಿಯುತ್ತಿದ್ದಾರೆ ಹೊರತು, ಮತವನ್ನು ಬದಲಾಯಿಸಿಕೊಳ್ಳಬೇಕೆಂಬ ಆಲೋಚನೆಯೇ ಅವರಲ್ಲಿ ಇಲ್ಲದಂತೆ ಹೋಗಿದೆ. ಧರ್ಮ ತಿಳಿದರೆ ಯಾವ ಮತದಲ್ಲಾದರೂ **ಒಬ್ಬನೇ ದೇವರು, ಒಂದೇ ಧರ್ಮ** ಇದೆಯೆಂದು ತಿಳಿಯುತ್ತದೆ. ನೀವು ಹಾಗೆ ಧರ್ಮಗಳನ್ನು ಬೋಧಿಸಿ ಧರ್ಮರಕ್ಷಕರೆಂಬ ಹೆಸರನ್ನು ಸಾರ್ಥಕ ಮಾಡಿಕೊಳ್ಳಿರಿ. ಹಾಗಲ್ಲದೆ ಮತರಕ್ಷಣೆ ಮಾಡುತ್ತಾ ಧರ್ಮರಕ್ಷಣೆ ಎಂದು ಹೇಳಿಕೊಳ್ಳುವುದು ತಪ್ಪು.

"ತಾನು ಕೆಟ್ಟ ಕೋತಿ ವನವೆಲ್ಲ ಕೆಡಿಸಿತು" ಎನ್ನುವಂತೆ ಯಾರೋ ವಾಕ್ ಚಾತುರ್ಯ ಇರುವ ಸ್ವಾಮೀಜಿ ಮತವನ್ನು ಕುರಿತು ಬೋಧಿಸಿ, ನಾವು ನಮ್ಮಮತವನ್ನು ರಕ್ಷಿಸಿಕೊಳ್ಳಬೇಕೆಂದು ರೊಚ್ಚಿಗೆಬ್ಬಿಸಿದರೆ ಅದರ ಪ್ರಕಾರ ರೊಚ್ಚಿಗೆದ್ದು ಮತ ಘರ್ಷಣೆಗಳವರೆಗೂ ಹೋಗಬೇಡಿ. **ದೇವರು ಧರ್ಮಗಳನ್ನು ರಕ್ಷಿಸಬಲ್ಲನು, ಉದ್ಧರಿಸಬಲ್ಲನು. ನೀನು ಧರ್ಮಗಳನ್ನು ತಿಳಿಯುವ ಕೆಲಸವನ್ನು ಮಾತ್ರ ಮಾಡಿಕೊ. ನೀನೇ ಧರ್ಮಗಳನ್ನು ರಕ್ಷಿಸಿದರೆ ದೇವರು ಭೂಮಿಮೇಲೆ ಧರ್ಮ ಸಂರಕ್ಷಣಾರ್ಥವಾಗಿ ಹುಟ್ಟಬೇಕಾದ ಕೆಲಸವೇ ಇಲ್ಲ. ನೀನು ಧರ್ಮಗಳನ್ನು**

**ತಿಳಿದುಕೊ, ಧರ್ಮಗಳನ್ನು ಆಚರಿಸು. ಅದೇ ನಿನ್ನ ಕೆಲಸ. ದೇವರು ಕೆಲಸ ಧರ್ಮಗಳನ್ನು ರಕ್ಷಿಸುತ್ತಾನೆ, ತಿಳಿಸುತ್ತಾನೆ.** ಹಾಗಲ್ಲದೆ ಧರ್ಮ ರಕ್ಷಣೆ ಎಂದು ಮತರಕ್ಷಣೆ ಮಾಡುವುದಕ್ಕೆ ಸಿದ್ಧನಾಗಬೇಡ. ಯಾವನೋ ಮತ ಉನ್ಮಾದಿ ನಿನ್ನನ್ನು ರೊಚ್ಚಿಗೆಬ್ಬಿಸಿದರೆ ನೀನು ರೊಚ್ಚಿಗೇಳಬೇಡ. ಮತದ್ವೇಷಗಳನ್ನು ಬೆಳೆಸುವವರು, ಮತ ರಕ್ಷಣೆ ಎಂಬ ಹೆಸರಿನಿಂದ ಅನ್ಯಮತಗಳನ್ನು ದ್ವೇಷಿಸುವಂತೆ ಮಾಡುವವರು ಬೋಧಕರಾಗಿ, ಗುರುಗಳಾಗಿ ಇದ್ದರೂ ಅವರ ಮಾತನ್ನು ನೀನು ಕೇಳಬೇಡ. ಅವರಿಗಿರುವ ವಾಕ್‌ಚಾತುರ್ಯದಿಂದ ಮತದ್ವೇಷವನ್ನು ಹೊರಗಿಡುತ್ತಾ ಬಸ್ಟಾಂಡಿನಲ್ಲಿಯೂ, ರೈಲ್ವೇಸ್ಟೇಷನ್‌ನಲ್ಲಿಯೂ, ರೈಲು ಪೆಟ್ಟಿಗೆ ಯಲ್ಲಿಯೂ ಎಲ್ಲಿ ದೊರೆತರೆ ಅಲ್ಲಿ ಮತವನ್ನು ಬೋಧಿಸುತ್ತಾ, ನಮ್ಮ ಧರ್ಮವನ್ನು ನಾವು ಕಾಪಾಡಿಕೊಳ್ಳಬೇಕೆಂದು ಹೇಳುವ ಒಬ್ಬ ವ್ಯಕ್ತಿ ಹೇಗೆ ಹೇಳುತ್ತಿದ್ದಾನೊ, ಹೇಗೆ ಮನುಷ್ಯರನ್ನು ರೊಚ್ಚಿಗೆಬ್ಬಿಸುತ್ತಿದ್ದಾನೊ ನೋಡಿರಿ. ಆತನ ವೇಷ ಪರಮ ಭಕ್ತನಂತೆ ಮಾರುದ್ದ ಜುಟ್ಟು ಹೊಂದಿದ್ದು, (ಬೆತ್ತೆಡು) ನಾಮ ಹೊಂದಿರುವ ಅವನು ಹೇಳಿದರೆ ಯಾರಾದರೂ ಕೇಳುತ್ತಾರೆ. ಆತನು ಏನು ಹೇಳುತ್ತಿದ್ದಾನೊ ನೋಡಿರಿ!

ಪ್ರಸ್ತುತ ಇರುವ ಸಮಾಜ ಪೂರ್ತಿಯಾಗಿ **'ಮತ'** ಎನ್ನುವ ಅಧರ್ಮದಲ್ಲಿ ಮುಳುಗಿ ಹೋಗಿದೆ. ದೈವಜ್ಞಾನ, ಧರ್ಮ ಪ್ರಚಾರ ಮಾಡುವ ಆಧ್ಯಾತ್ಮಿಕ ಸಂಸ್ಥೆಗಳು, ಅವುಗಳ ಪ್ರಚಾರಕರು ಮೂಲ ದೈವಗ್ರಂಥಗಳಲ್ಲಿನ ವಾಸ್ತವ ದೈವಜ್ಞಾನವನ್ನು ಸತ್ಯವಾಗಿ, ಸಶಾಸ್ತ್ರೀಯವಾಗಿ, ಹೇತುಬದ್ಧವಾಗಿ ಪ್ರಜೆಗಳಿಗೆ ವಿವರಿಸಬೇಕಾದ ಅಗತ್ಯ ಇದೆ. ಆದರೆ 99.99% ಆಧ್ಯಾತ್ಮಿಕ ಸಂಸ್ಥೆಗಳು ಜನರ ಮನಸ್ಸನ್ನು ಬೇಕಾಗಿ ಉದ್ದೇಶಪೂರ್ವಕವಾಗಿ ರೊಚ್ಚಿಗೆಬ್ಬಿಸುವ ವಿಧವಾಗಿ ವ್ಯಾಖ್ಯೆಗಳು ಮಾಡಿ, ಸಮಾಜವನ್ನು ಮತ್ತಷ್ಟು ಆಳಕ್ಕೆ ತಳ್ಳುತ್ತಿವೆ. ಸ್ವಮತದ ಮೇಲೆ ವೀರಾಭಿಮಾನ ಬೆಳೆಸಿಕೊಂಡು, ಪರಮತಗಳ ಮೇಲೆ ಅಂತ್ಯವಿಲ್ಲದ ದ್ವೇಷಗಳನ್ನು ಬೆಳೆಸಿಕೊಂಡು ತಾವು ಕೆಟ್ಟುಹೋಗುವುದಲ್ಲದೆ, ತಮ್ಮ ಸಹಚರರನ್ನು ಕೂಡಾ ಕೆಡಿಸುತ್ತಿದ್ದಾರೆ.

'ಇಸ್ಕಾನ್' ಎನ್ನುವ ಸಂಸ್ಥೆಯಲ್ಲಿ ಭಗವದ್ಗೀತೆ ಉಪನ್ಯಾಸಕನಾಗಿರುವ ರಾಧಾ ಮನೋಹರ್ ದಾಸ್ ಸ್ವಾಮಿ (ರಾಧಾ ಮನೋಹರಂ) ಎನ್ನುವ ಒಬ್ಬ ಮತ ಪ್ರಚಾರಕನು ನೋಡುವುದಕ್ಕೆ ಒಬ್ಬ ಪಂಡಿತನಾಗಿ, ಭಕ್ತನಾಗಿ, ಒಳ್ಳೆಯವನಂತೆ ಕಾಣಿಸುತ್ತಿದ್ದರೂ ಒಳಗೆ ಸ್ವಮತಾಭಿಮಾನ, ಪರಮತ ದ್ವೇಷದಿಂದ ತಾನು ಎಲ್ಲಿಗೆ ಹೋದರೆ, ಅಲ್ಲಿಯೇ ಮತದ್ವೇಷವನ್ನು ತೋರಿಸುತ್ತಾ, ಸಹಚರರಲ್ಲಿ ಮತವಿಷ ಬೀಜಗಳನ್ನು ನಾಟಿ, **ಮತ ಸಾಮರಸ್ಯವನ್ನು, ದೇಶ ಸಮಗ್ರತೆಯನ್ನು, ರಾಜ್ಯಾಂಗ ಸೆಕ್ಯುಲರ್ ಭಾವಜಾಲವನ್ನು, ವಿಶ್ವಮಾನವ ಸೌಖ್ಯವನ್ನು ಕ್ಷೀಣಿಸುವಂತೆ** ಯಾವ ಪಾಪ ತಿಳಿಯದ ಚಿಕ್ಕ ಮಕ್ಕಳ ಹತ್ತಿರದಿಂದ, ದೊಡ್ಡ ವಯಸ್ಸಿನವರವರೆಗು ಪ್ರತಿಯೊಬ್ಬರನ್ನು ಎಷ್ಟುಜನ ಸಿಕ್ಕರೆ ಅಷ್ಟು ಜನರನ್ನು (ಕನಿಷ್ಟ ಒಬ್ಬರು ದೊರೆತರೂ ಸರೀನೇ) ತನ್ನ ವಾಕ್‌ಚಾತುರ್ಯದಿಂದ ಆಕರ್ಷಿಸಿ, ವಿಷಮತ ಪ್ರಚಾರ ಮಾಡಿ ಮನುಷ್ಯರನ್ನು, ಮತಗಳನ್ನು ಅಗೌರವಪಡಿಸುತ್ತಿದ್ದಾನೆ. ಅದರಿಂದ ತಾನೇ ಅಲ್ಲದೆ ತನ್ನ ಬಲಿಗೆ ಬಂದವರನ್ನು ಕೂಡಾ **ದೇವರ ಜ್ಞಾನಕ್ಕೆ** ದೂರ ಮಾಡುತ್ತಿದ್ದಾನೆ. ಆತನ ಉದ್ದೇಶ ಪೂರ್ವಕ, ಮತದ್ವೇಷ, ಕುಳ್ಳು ಕುತಂತ್ರ, ಕುಟಿಲ ಬುದ್ಧಿಯನ್ನು ಆತನ ವ್ಯಾಖ್ಯೆಗಳಲ್ಲಿ ಕೆಳಗೆ ನೋಡಿರಿ.

**ಒಂದು ರೈಲ್ವೇಸ್ಟೆಷನ್ ಪ್ಲಾಟ್‌ಫಾರಂ ಮೇಲೆ ಮತದ್ವೇಷ ವ್ಯಾಖ್ಯೆಗಳು**

ಬ್ರಾಹ್ಮಣನಾಗಿ, ಪಂಡಿತನಾಗಿ, ಭಕ್ತನಾಗಿ ಕಾಣಿಸುತ್ತಿರುವ ರಾಧಾ ಮನೋಹರ್ ಸ್ವಾಮಿ, ಒಬ್ಬ ಸಾಫ್ಟ್‌ವೇರ್ ಇಂಜಿನೀಯರ್‌ನೊಂದಿಗೆ ಬೇರೊಂದುಕಡೆ ತಾನು ರೈಲಿನಲ್ಲಿ ಮಾತನಾಡಿದ ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸುತ್ತಾ, ಗುಂಪುಕೂಡಿದ ಜನರೊಂದಿಗೆ ಕೆಳಗಿನ ವಿಧವಾಗಿ ರೊಚ್ಚಿಗೆಬ್ಬಿಸುತ್ತಿದ್ದಾನೆ.

"ಎಲ್ಲಾ ಮತಗಳು ಸಮಾನವಾ? ಎಲ್ಲಾ ದೇವರುಗಳು ಸಮಾನವಾ? ಮತ್ತು ಎಲ್ಲಾ ಮತ ಗ್ರಂಥಗಳಲ್ಲಿ ಒಂದೇ ಇದೆಯಾ?" ಎಂದು ಕೇಳಿದ್ದೇನೆ. ಸಾಫ್ಟ್‌ವೇರ್ ಇಂಜಿನೀರ್ "ಹೌದು! ಒಂದೇ ಇದೆ." ಎಂದಿದ್ದಾನೆ. ಬ್ರಾಹ್ಮಣನು "ಸಾಫ್ಟ್‌ವೇರ್ ಹುಡುಗನು, ಸಾಫ್ಟ್‌ಫೆಲೋ" ಎನ್ನುತ್ತಾ "ಎಲ್ಲವುಗಳಲ್ಲಿ ಒಂದೇ ಇದೆ. ಎಲ್ಲಾ ಮತಗಳು ಒಂದೇ ಎನ್ನುತ್ತಿದ್ದೀಯಾ. ಹಾಗಾದ್ರೆ ನಾನು ನಿನಗೆ

ಒಂದು ಅವಾರ್ಡ್ ಕೊಡಬೇಕೆಂದುಕೊಳ್ಳುತ್ತಿದ್ದೇನೆ. ಏನು ಆ ಅವಾರ್ಡ್! 'ನೀನು ಹುಚ್ಚ'. ಅದು ಪದ್ಮಶ್ರೀ ಅಲ್ಲ, ಪದ್ಮ ಭೂಷಣ ಅವಾರ್ಡ್ ಅಲ್ಲ" ಎಂದು ಹೇಳಿದ್ದಾನೆ. ಆಗ ಸಾಫ್ಟ್‌ವೇರ್ ಇಂಜಿನೀಯರ್ ಎಷ್ಟೋ ಸಮಯದಿಂದ ಬ್ರಾಹ್ಮಣನೊಂದಿಗೆ ಮಾತನಾಡುತ್ತಿದ್ದರೂ. 'ನೀನು ಹುಚ್ಚ' ಎಂದು ಅನ್ನುವುದರಿಂದ ತಾನು ಎಷ್ಟೋ ಆಶ್ಚರ್ಯ ಹೋಗಿದ್ದಾನಂತೆ. ಆಗ ಬ್ರಾಹ್ಮಣನು 'ನಾನು ನಿನ್ನನ್ನು ಏಕೆ ಬೈದಿದ್ದೇನೊ ತಿಳಿದಿದೆಯಾ? ನೀನು ಏನೂ ತಿಳಿಯದಂತೆ ಸ್ಟೇಟ್‌ಮೆಂಟ್‌ಗಳು ಕೊಡುತ್ತಿದ್ದೀಯಾ' ಎಂದು ರೈಲಿನಲ್ಲಿ ಯಾರನ್ನೊ ಮೂವರನ್ನು ತೋರಿಸುತ್ತಾ (ಗತದಲ್ಲಿ) ಬ್ರಾಹ್ಮಣರು "ಇವರ ತಂದೆ, ಇವರ ತಂದೆ, ಅವರ ತಂದೆ ಎಂದು ತೋರಿಸುತ್ತಾ, ಇವರ ಮೂವರು ತಂದೆಯರು ಕುಡುಕರು. ಈಗ ನೀನೇನನ್ನುತ್ತೀಯಾ" ಎಂದು ಬ್ರಾಹ್ಮಣನು ಕೇಳಿದ್ದಾನಂತೆ. ಹಾಗೆಯೇ "ಈಗ ಅವರು ಅಸಲಿಗೆ ಯಾರೋ ತಿಳಿದಿಲ್ಲ. 'ಅವರ ತಂದೆ ಕುಡುಕನು' ಎಂದು ನಾನ್ಯಾರೋ ತಿಳಿಯದವನು ಹೇಳಿದರೆ, ನೀನು ಹೌದ್ರೀ' ಎಂದು ಅಂದಿದ್ದೀಯೆಂದರೇ ನಿನಗೆ ಬುರುಡೆ ಇದ್ದಂತಾ ಅಥವಾ ಇಲ್ಲದಂತಾ".

"ನೀನು ಭಗವದ್ಗೀತೆ ಓದಿದ್ದೀಯಾ ಓದಲಿಲ್ಲ, ನೀನು ಬೈಬಲ್ ಓದಿದ್ದೀಯಾ, ಓದಲಿಲ್ಲ, ಮತ್ತೆ ಖುರಾನ್ ಓದಿದ್ದೀಯಾ, ಓದಲಿಲ್ಲ. ಮತ್ತೆ ಏನೂ ಓದದಂತೆ, ಎಲ್ಲಾ ಒಂದೇ ಎಂದು ಹೇಗೆ ಹೇಳುತ್ತಿದ್ದೀಯಾ? ನೀನು ಹುಚ್ಚನಾ ಅಲ್ಲವಾ!" ಎಂದು ಬ್ರಾಹ್ಮಣನು ಅಂದಿದ್ದಾನಂತೆ.

"ಆದಕಾರಣ ನಮ್ಮ ದೇಶಕ್ಕೆ ಪ್ರಮಾದ ಕ್ರೈಸ್ಥರಿಂದ ಇಲ್ಲ. ಮುಸ್ಲಿಮ್‌ರಿಂದ ಇಲ್ಲ. ಪ್ರಮಾದ ಯಾರೊಂದಿಗೆ ಇದೆಯೆಂದರೇ, ಏನೂ ಓದದಂತೆ, ಎಲ್ಲಾ ಒಂದೇ ಎನ್ನುವ ಕತ್ತೆಗಳಿದ್ದಾರೆ. ಸೆಕ್ಯುಲರ್ ನಾಯಿಗಳು ಹಿಂದೂಗಳು, ಈ ನಾಯಿಗಳಿಂದಲೇ ಪ್ರಾಬ್ಲಮ್! ಓದಿ ಅಲ್ಲವೇ ಮಾತನಾಡಬೇಕು. ನೀನ್ಯಾರೊ ನನಗೆ ತಿಳಿಯದು, ನಿಮ್ಮ ತಂದೆಯನ್ನು ಕುರಿತು ನಾನು ಕಾಮಿಡಿ ಮಾಡಬಹುದಾ? ನಿನ್ನನ್ನು ಕುರಿತು ಕಾಮೆಂಟ್ ಮಾಡಬಹುದಾ? ಆದಕಾರಣ 'ಎಲ್ಲಾ ಒಂದೇ' ಎನ್ನುವ ಹೇಸರಕತ್ತೆಗಳು ಓದಿ ಮಾತನಾಡಿರಿ"

ಬಹಳ ಕ್ಲಿಯರ್ ಆಗಿ ನಮಗೊಂದು ಹಾಡು ಸಂಕರಂ ಮಾಡಿದ್ದಾನೆ ಗಾಂಧಿ. ಏನದು? ಅದು "ರಘುಪತಿ ರಾಘವ ರಾಜಾರಾಂ, ಪತಿತ ಪಾವನ ಸೀತಾರಾಂ. 'ಆ ನಂತರ ಏನು? ಈಶ್ವರ್ ಅಲ್ಲಾ ತೇರೇನಾಮ್ ಸಭ್‌ಕೊ ಸನ್ಮತಿ ಹೇ ಭಗವಾನ್'. ಆದರೆ ಅದು ವಾಸ್ತವಕ್ಕೆ "ಗಂಗಾ ತುಲಸಿ ಸಾಲಗ್ರಾಮ್. ರಘುಪತಿ ರಾಘವ ರಾಜರಾಂ" ಅದು ಒರಿಜಿನಲ್ ಹಾಡು. ನಮ್ಮ ಗಾಂಧಿ ಅದನ್ನು ಸಂಕರಣ ಮಾಡಿ, "ಈಶ್ವರ್ ಅಲ್ಲಾ ತೇರೇನಾಮ್" ಎಂದಿದ್ದಾನೆ. ಅದರ ಮೀನಿಂಗ್ (ಅರ್ಥ) ಏನು? "ಯಾವ ದೇವರಾದರೂ ಒಂದೇ, ಅಲ್ಲಾ ಆದರೆ ಏನು, ಈಶ್ವರನಾದರೆ ಏನು?" ಆದರೆ ಈಶ್ಚರನಾದರೂ, ಅಲ್ಲಾ ಆದರೂ ಒಂದೇ ಎಂದು ಯಾರು ಹೇಳುತ್ತಾರೆ. ಈಶ್ವರನನ್ನು ನಂಬಿದವನು ಹೇಳುತ್ತಾನೆ. ಅಲ್ಲಾಹ್‌ನನ್ನು ನಂಬಿದವನು ಹೇಳುತ್ತಾನಾ? ಜಿಸಸ್‌ನ್ನು ನಂಬಿದವನು ಹೇಳುತ್ತಾನಾ? ಹೇಳುವುದಿಲ್ಲ. ಜಿಸಸ್‌ನ್ನು ನಂಬಿದವನು ಏನು ಹೇಳುತ್ತಾನೆ "ಏಸೇ ನಿಮ್ಮ ಬಾಸು, ನಂಬದಿದ್ದರೆ ಲಾಸು, ಇದೇ ನಾವು ಕೊಡುವ ಕ್ಲಾಸು" ಎಂದು ಹೇಳುತ್ತಾನೆ. "ಹೊಡೆದು ಹೋಗುತ್ತದೆ ಗ್ಲಾಸು, ಅಯೋಗ್ಯ"

ಎಲ್ಲರೂ ಏಸಿ (A/C) ಯಲ್ಲಿಯೇ ಹೊರಡುತ್ತೀರಾ, ಎಲ್ಲರೂ ಏಸಿ (A/C) ಯನ್ನೇ ನಂಬುತ್ತೀರಾ? ಅವನಿಗೆ ಮುದುಕಿ ಇಷ್ಟ, ಇವನಿಗೆ ಶಿವನು ಇಷ್ಟ, ಅವನಿಗೆ ರಾಮನು ಇಷ್ಟ, ಅವನಿಗೆ ಕೃಷ್ಣನು ಇಷ್ಟ, ಅವನಿಗೆ ದುರ್ಗಮ್ಮ ಇಷ್ಟ, ಒಬ್ಬನಿಗೆ ವೆಂಕಟೇಶ್ವರ ಸ್ವಾಮಿ ಇಷ್ಟ. ಎಲ್ಲರೂ ಬಜ್ಜಿಗಳೇ ತಿನ್ನಬೇಕು, ಕುದುರುತ್ತದಾ? ಎಲ್ಲರೂ ಕಾರವೇ ತಿನ್ನಬೇಕು, ಕುದುರುತ್ತದಾ? ಎಲ್ಲರೂ ಸಿಹಿಯೇ ತಿನ್ನಬೇಕು, ಕುದುರುತ್ತದಾ? ಒಬ್ಬೊಬ್ಬರಿಗೆ ಒಂದೊಂದು ಟೇಸ್ಟು ಇರುತ್ತದೆ.

ಎಲ್ಲರೂ ಏಸುಪ್ರಭುವಿಗೆ ಮುಗಿಯಬೇಕು. ಮುಗಿಯದೆ ಹೋದರೆ ನರಕಕ್ಕೆ ಹೋಗುತ್ತಾರೆ. 'ಅಲ್ಲಾಹು ಅಕ್ಬರ್, ಇಲ್ಲಿಲ್ಲಾ ಹು' ಏನು ಅದರರ್ಥ 'ಅಲ್ಲಾಹ್ ಮಾತ್ರವೇ ಅದ್ವಿತೀಯನು, ಆತನಿಗಿಂತ ಶ್ರೇಷ್ಠವಾದವನು ಯಾರೂ

ಇಲ್ಲ.' ಅವನು ದಿನಕ್ಕೆ ಐದುಸಲ ಹೇಳುತ್ತಾನೆ 'ಅಲ್ಲಾಹ್ ಮಾತ್ರವೇ ದೇವರು' ಎಂದು. ಇವನೇನೊ 'ಏಸೇ ದೇವರು!' ಎಂದು ಹೇಳುತ್ತಾನೆ. ಇವರಿಂದ ಒಪ್ಪಿಸುತ್ತೀರಾ, "ಎಲ್ಲಾ ಮತಗಳು ಸಮಾನವೇ" ಎಂದು, ಈ ನಾಚಿಕೆಯಿಲ್ಲದ ಕತ್ತೆಗಳು.

ಅದಕ್ಕೆಂದು ಈ ದೇಶಕ್ಕೆ ಪ್ರಮಾದ ಮುಸ್ಲಿಮ್‌ರು ಅಲ್ಲ, ಕ್ರೈಸ್ಥರು ಅಲ್ಲ. ಮುಸುಗು ಹಾಕಿಕೊಂಡ ಕಳ್ಳರು ಹಿಂದೂಗಳು. ಎಲ್ಲಾ ಸಮಾನವೇ ಎನ್ನುವ ಕಳ್ಳರು. ಇವರ ಕೊಂಪೆಗಳಲ್ಲಿ ಟೀವಿ ಇರುತ್ತದೆ, ಫ್ರಿಡ್ಜ್ ಇರುತ್ತದೆ, ವಾಷಿಂಗ್ ಮಿಷನ್ ಇರುತ್ತದೆ. ಆದರೆ ಭಗವದ್ಗೀತೆ ಇರುವುದಿಲ್ಲ. ಎಷ್ಟೋ ಪ್ರಮಾದ ಈ ದೇಶಕ್ಕೆ (ಈ ಹಿಂದೂಗಳು).

ಹಿಂದಿಯಲ್ಲಿ ಹೇಳುತ್ತಿರುತ್ತೇನೆ ನಾನು "ಹಿಂದೂಸ್ಥಾನ್ ಕಿ ಶತ್ರು ಕಿರ್‌ಸ್ಥಾನೀ ನಹೀ, ಪಾಕಿಸ್ತಾನೀ ನಹೀ, ಸಿರ್ಫ್ ಹಿಂದೂಸ್ಥಾನೀ. ಉಸ್‌ಕೋ ಮಾರ್‌ದೋ ಸಬ್ ಠೀಕ್ ಹೋಜಾತಾ ಹೈ". ನಮ್ಮ ಬಂಗಾರ ಚೆನ್ನಾಗಿಲ್ಲ. ನಮ್ಮ ಬಂಗಾರ ಚೆನ್ನಾಗಿಲ್ಲ. ಅವನ್ಯಾರನ್ನೊ ಅನ್ನುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಮ್ಮ ಬಂಗಾರವನ್ನು ಸರಿಮಾಡಿಕೊಳ್ಳೋಣ.

ನಮ್ಮವರು ಏನಾದರೇ ಈ ಅಜ್ಞಾನದಲ್ಲಿ ಇದ್ದಾರ್ರೋ, ಇವರನ್ನು ಗೈಡ್ ಮಾಡೋಣ. ಕತ್ತೆಗಳನ್ನು(ಹಿಂದೂಗಳನ್ನು) ಗೈಡ್ ಮಾಡಿ, ದಾರಿಯೊಳಗೆ ತೆಗೆದುಕೊಂಡು ಬರೋಣ. ಎಲ್ಲರೂ ಕೈಎತ್ತಿ ಹೇಳಿರಿ. "ಹರೇಕೃಷ್ಣ, ಹರೇ ಕೃಷ್ಣ, ಕೃಷ್ಣ ಕೃಷ್ಣ ಹರೇಹರೇ. ಹರೇರಾಮ ಹರೇರಾಮ, ರಾಮರಾಮ ಹರೇ ಹರೇ". ಶಿವಾರಾಮ್ ದಾಸ್ ಆಶ್ರಮ್ ಭಕ್ತಬೃಂದ್ ಕೀ ಜೈ, ವಲ್ಲೂರು ಭಕ್ತ್ ವೃಂದ್ ಕೀ ಜೈ, ಪರಂದಾಸ್ ಆಶ್ರಮ್ ಭಕ್ತ್‌ವೃಂದ್ ಕೀ ಜೈ. ಗೋವಿಂದಾ. . . . ಗೋ. . .ವಿಂದ, ಗೋವಿಂದಾ. . . ಗೋ. . .ವಿಂದ ! ಹರೇಕೃಷ್ಣ !! ಜೈ ಶ್ರೀರಾಮ್ !!!

## ಹಿಂದೂ ರಕ್ಷಣಾ! ಹಿಂದೂ ಭಕ್ಷಣಾ!!
## ಭಗವದ್ಗೀತೆಯನ್ನೇ ಓದದವನು ಹಿಂದೂ ರಕ್ಷಕನಾ?
## ಹಿಂದೂ ಧರ್ಮವೇ ತಿಳಿಯದವರು ಹಿಂದೂ ರಕ್ಷಕರಾ?

ಹಿಂದೂಗಳು ಈ ದಿನ ಕುಲಗಳಾಗಿ ಬೇರ್ಪಟ್ಟು, ಅದರಲ್ಲಿ ಹೆಚ್ಚುಕಡಿಮೆ ಕುಲಗಳಾಗಿ ವರ್ಣಿಸಲ್ಪಟ್ಟಿದ್ದಾರೆ ಎನ್ನುವುದು ಎಲ್ಲರಿಗೂ ತಿಳಿದ ಸತ್ಯ. ದೇವರು ಮನುಷ್ಯರೆಲ್ಲರನ್ನು ಸಮಾನವಾಗಿ ಹುಟ್ಟಿಸಿದರೆ, ಕೆಲವರು ಮನುಷ್ಯರು ತಮ್ಮ ಸ್ವಾರ್ಥ ಬುದ್ಧಿಯಿಂದ ಹಿಂದೂ (ಇಂದೂ) ಸಮಾಜವನ್ನು ಚೂರು ಚೂರುಗಳಾಗಿ ಸೀಳಿಸಿ ಬಲಹೀನಪಡಿಸಿ ಹಿಂದೂಸಮಾಜಕ್ಕೆಲ್ಲಾ ತಾವೇ ದೊಡ್ಡವರೆಂದು, ತಾವು ಹೇಳಿದಂತೇ ಎಲ್ಲರೂ ಕೇಳಿ ಎಲ್ಲಾಕಾರ್ಯಗಳು ಮಾಡಿಕೊಳ್ಳಬೇಕೆಂದು ಪ್ರಚಾರ ಮಾಡಿಕೊಂಡಿದ್ದಾರೆ. ಎಷ್ಟೋ ಕುಲಗಳಾಗಿರುವ ಹಿಂದೂ ಸಮಾಜದಲ್ಲಿ ತಮ್ಮ ಕುಲವೇ ಅಗ್ರಕುಲವೆಂದು ಹೇಳಿಕೊಳ್ಳುವುದೇ ಅಲ್ಲದೆ, ಇತರ ಕುಲದವರೆಲ್ಲರಿಗೂ ತಾವೇ ಮಾರ್ಗದರ್ಶಕರೆಂದು, ಗುರುಗಳೆಂದು ಪ್ರಕಟಿಸಿಕೊಂಡಿದ್ದಾರೆ. ಭವಿಷ್ಯತ್ತಿನಲ್ಲಿ ತಮಗೆ ಯಾರೂ ಅಡ್ಡಬಾರದಂತೆ, ಎಲ್ಲಾ ಕುಲಗಳನ್ನು ಅಂಟಬಾರದ ಕುಲಗಳನ್ನಾಗಿ ಮಾಡಿ, ಹಿಂದೂ ಸಮಾಜಕ್ಕೆ ತೀರದ ಅನ್ಯಾಯ ಮಾಡಿದ್ದಾರೆ. ಅಲ್ಲಿಗೆ ಸುಮ್ಮನಾಗದೆ ಇಂದಿಗೂ ಹಿಂದೂ ಸಮಾಜ ರಕ್ಷಕರಾಗಿ ಹೇಳಿಕೊಳ್ಳುತ್ತಾ, ಹಿಂದೂ ಸಮಾಜವನ್ನು ಸರ್ವನಾಶ ಮಾಡುತ್ತಾ, ಹಿಂದೂ ಸಮಾಜ ಇತರ ಮತಗಳಾಗಿ ಬದಲಾಗಿಹೋಗುವುದಕ್ಕೆ ಮೊದಲ ಕಾರಕರಾಗುತ್ತಿದ್ದಾರೆ. ಅಂತಹವರು ಹಿಂದೂ ಸಮಾಜಕ್ಕೆ ಜೇಡ ಹುಳಗಳಾಗಿದ್ದರೂ, ಉಳಿದ ಕುಲದವರೆಲ್ಲರೂ ಅವರ ನಿಜ ಸ್ವರೂಪವನ್ನು ತಿಳಿಯದೆ, ಅವರು ಹೇಳಿದಹಾಗೇ ಕೇಳುವುದರಿಂದ ಹಿಂದೂ ಸಮಾಜವನ್ನು ಪೂರ್ತಿಯಾಗಿ ಅಜ್ಞಾನ ಕಡೆಗೆ, ಅಧರ್ಮ ಮಾರ್ಗದಕಡೆಗೆ ನಡೆಸಿ, ಪ್ರಜೆಗಳಿಗೆ ಸ್ವಲ್ಪವಾದರೂ ದೈವಜ್ಞಾನವನ್ನು ತಿಳಿಯದಹಾಗೆ ಮಾಡಿ, ತಾವು ಹೇಳುವುದೇ ದೈವಬೋಧನೆ ಎಂದು ನಂಬಿಸಿದ್ದಾರೆ.

ಅಂತಹ ಸ್ಥಿತಿಯಲ್ಲಿ ಈ ದಿನ ತ್ರೈತ ಸಿದ್ಧಾಂತಕರ್ತನಾಗಿ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು ಅಜ್ಞಾನದ ದಿಕ್ಕಿಗೆ ನಿಂತುಹೋಗಿರುವ

ಹಿಂದೂಸಮಾಜವನ್ನು ಸರಿಯಾದ ದಾರಿಯಲ್ಲಿ ನಡೆಸುವುದಕ್ಕೆ, ಭಗವದ್ಗೀತೆಯಲ್ಲಿ ಪುರುಷೋತ್ತಮಪ್ರಾಪ್ತಿ ಯೋಗವೆಂಬ ಅಧ್ಯಾಯದಲ್ಲಿ ಬೋಧಿಸಲ್ಪಟ್ಟಿರುವ **ಕ್ಷರ, ಅಕ್ಷರ, ಪುರುಷೋತ್ತಮ** ಎನ್ನುವ ಮೂವರು ಪುರುಷರ ಸಮಾಚಾರವನ್ನು **"ತ್ರೈತ ಸಿದ್ಧಾಂತ"** ಎಂಬ ಹೆಸರಿನಿಂದ ಪ್ರತಿಪಾದಿಸಿ ದೈವಜ್ಞಾನವನ್ನು ಎಲ್ಲರಿಗೂ ಅರ್ಥವಾಗುವಂತೆ ಗ್ರಂಥರೂಪದಲ್ಲಿ ಬರೆಯುವುದು, ಬೋಧಿಸುವುದು ನಡೆಯುತ್ತಿದೆ. ಅದರಿಂದ **ಈ ದಿನ ಪ್ರಜೆಗಳು ನಿಜವಾದ ಜ್ಞಾನ ತಿಳಿಯುತ್ತಿದೆಯೆಂದು ಸಂತೋಷಪಡುತ್ತಿದ್ದಾರೆ**. ಅಗ್ರಕುಲವಾಗಿರುವವರಲ್ಲಿ ಸಹ ಎಷ್ಟೋಜನ ತಮ್ಮ ಅಜ್ಞಾನ ಕತ್ತಲನ್ನು ಬಿಟ್ಟು, ಇಲ್ಲಿಯವರೆಗೂ ತಮಗೆ ತಿಳಿಯದ ಜ್ಞಾನ ಯೋಗೀಶ್ವರರ ಮೂಲಕ ಈಗ ತಿಳಿಯುತ್ತಿದೆಯೆಂದು ಸಂತೋಷಪಟ್ಟು ಶಿಷ್ಯರಾಗಿ ಸೇರಿಹೋಗುತ್ತಿದ್ದಾರೆ. ಆದರೆ ಅಗ್ರಕುಲದಲ್ಲಿ ಕೆಲವರು ಮಾತ್ರ ಯೋಗೀಶ್ವರರು ತಿಳಿಸುವ ಜ್ಞಾನ ವಿಷಯಗಳನ್ನು ನೋಡಿ ಈ ಜ್ಞಾನದಿಂದ **ಪ್ರಜೆಗಳು ಜ್ಞಾನದಲ್ಲಿ ಚೈತನ್ಯರಾಗಿ,** ಜ್ಞಾನ ತಿಳಿಯದ ತಮ್ಮನ್ನು ಗೌರವಿಸುವುದಿಲ್ಲವೆಂದು ಭಾವಿಸಿ, ಅದರಿಂದ ಸಮಾಜದ ಮೇಲೆ ತಮ್ಮ ಆಧಿಪತ್ಯ ಇಲ್ಲದಂತಾಗುತ್ತದೆಂದು ತಿಳಿದು, ಯೋಗಿಶ್ವರರು ತಿಳಿಸುತ್ತಿರುವ ತ್ರೈತಸಿದ್ಧಾಂತವಾಗಲಿ, ತ್ರೈತ ಸಿದ್ಧಾಂತ ಭಗವದ್ಗೀತೆ ಯಾಗಲಿ ಹಿಂದೂಗಳ ಜ್ಞಾನವೇ ಅಲ್ಲವೆಂದು, ಅದು ಕ್ರೈಸ್ತವ ಮತಕ್ಕೆ ಸಂಬಂಧಿಸಿರುವುದೆಂದು, ಅದನ್ನು ಯಾರೂ ಓದಬಾರದೆಂದು ಪ್ರಚಾರ ಮಾಡಲು ಪ್ರಾರಂಭಿಸಿದ್ದಾರೆ. ಅಷ್ಟೇ ಅಲ್ಲದೆ ತಾವು ಹಿಂದೂಧರ್ಮರಕ್ಷಕರೆಂದು, ಸ್ವಲ್ಪ ರಾಜಕೀಯಬಣ್ಣವನ್ನು ಬಳಿದುಕೊಂಡು, ನಮ್ಮ ಜ್ಞಾನ ಪ್ರಚಾರಕ್ಕೆ ಅಲ್ಲಲ್ಲಿ ಅಡ್ಡಿಪಡಿಸುವುದು ನಡೆಯುತ್ತಿದೆ. ತಮ್ಮ ಮಾತು ಕೇಳುವ ಇತರ ಕುಲದವರಿಗೂ ಸಹ ಪ್ರಬೋಧಾನಂದಯೋಗೀಶ್ವರರು ಹೇಳುವ ಜ್ಞಾನ ಹಿಂದೂ ಜ್ಞಾನ ಅಲ್ಲ, ಕ್ರೈಸ್ತವರ ಜ್ಞಾನವೆಂದು ಹಿಂದೂಗಳ ಮುಸುಗಿನಲ್ಲಿ ಕ್ರೈಸ್ತವ ಮತ ಪ್ರಚಾರ ಮಾಡುತ್ತಿದ್ದಾರೆಂದು ಹೇಳುವುದಲ್ಲದೆ, ಅಂತಹವರನ್ನು ಪ್ರೇರೇಪಿಸಿ ನಮ್ಮ ಪ್ರಚಾರಕ್ಕೆ ತಡೆ ಹಾಕುವಂತೆ ಮಾಡುತ್ತಿದ್ದಾರೆ.

ಯೋಗೀಶ್ವರರು ನೆಲೆಗೊಳಿಸಿದ ಹಿಂದೂ (ಇಂದೂ) ಜ್ಞಾನ ವೇದಿಕೆ ಇಂತಹ ಸಮಸ್ಯೆಗಳನ್ನು ಸ್ವಲ್ಪಕಾಲದಿಂದ ಸಹನೆಯಿಂದ ನೋಡಲಾಗಿದೆ. ನಮ್ಮಲ್ಲಿ

ಸಹನೆ ನಶಿಸಿ, ನಮ್ಮನ್ನು ಅನ್ಯಮತ ಪ್ರಚಾರಕರಾಗಿ ವರ್ಣಿಸಿ ಹೇಳುವ ಅಗ್ರಕುಲದವರನ್ನು, ಅವರ ಅನುಚರರನ್ನು ನಾವು ಎದುರುತಿರುಗಿ ಪ್ರಶ್ನಿಸುವುದು ನಡೆದಿದೆ. ನಾವು ಪ್ರಶ್ನಿಸಿದ ಒಂದು ಪ್ರಶ್ನೆಗೂ ಸಹಾ ಅವರು ಸರಿಯಾದ ಸಮಾಧಾನ ಕೊಡಲಿಲ್ಲ. ಆ ಉತ್ತರಗಳು ಹೇಗೆ ಇವೆಯೋ ಓದುಗರಾಗಿ ನೀವೇ ನೋಡಿರಿ.

**ನಮ್ಮ ಪ್ರಶ್ನೆ :–** ಇಲ್ಲಿಯವರೆಗೂ ಯಾವ ಹಿಂದುವೂ ಮಾಡದ ವಿಧದಲ್ಲಿ ಊರೂರು ತಿರುಗಿ, ಊರಿನಲ್ಲಿ ಮನೆಮನೆ ತಿರುಗಿ ಹಿಂದೂ ಧರ್ಮಗಳನ್ನು ಪ್ರಚಾರ ಮಾಡುತ್ತಿದ್ದೇವಲ್ಲಾ! ಅಂತಹ ನಮ್ಮನ್ನು ನೀವು ಅನ್ಯಮತ ಪ್ರಚಾರಕರೆಂದು ಏಕೆ ಹೇಳುತ್ತಿದ್ದೀರಾ?

**ಅವರ ಉತ್ತರ :–** ಹಿಂದೂಮತದಲ್ಲಿ ಎಷ್ಟೋ ಜನ ಸ್ವಾಮೀಜಿಗಳು ಇದ್ದಾರೆ. ಅವರು ಯಾರೂ ಮನೆಮನೆ ತಿರುಗಿ ಪ್ರಚಾರ ಮಾಡಲಿಲ್ಲ. ಹಿಂದೂಗಳು ಹಾಗೆ ಯಾರೂ ಪ್ರಚಾರ ಮಾಡುವುದಿಲ್ಲ. ಕ್ರೈಸ್ತವರಾದರೇ ಬೀದಿ ಬೀದಿ, ಮನೆಮನೆ ತಿರುಗಿ ಪ್ರಚಾರ ಮಾಡುತ್ತಾರೆ. ನೀವು ಹಿಂದೂಗಳ ಮುಸುಗಿನಲ್ಲಿ ಮನೆಮನೆ ತಿರುಗಿ ಕ್ರೈಸ್ತವವನ್ನು ಪ್ರಚಾರ ಮಾಡುತ್ತಿದ್ದೀರ.

**ನಮ್ಮ ಪ್ರಶ್ನೆ :–** ನಾವು ಕ್ರೈಸ್ತವರಾದರೆ ಭಗವದ್ಗೀತೆಯನ್ನು ಏಕೆ ಪ್ರಚಾರ ಮಾಡುತ್ತೇವೆ?

**ಅವರ ಉತ್ತರ :–** ನೀವು ಪ್ರಚಾರ ಮಾಡುವುದು ತ್ರೈತ ಸಿದ್ಧಾಂತ ಭಗವದ್ಗೀತೆ. ಅದು ಕ್ರೈಸ್ತವರದ್ದು. ಬೈಬಲ್‌ಗೇ ನೀವು ಹಾಗೆ ಹೆಸರು ಇಟ್ಟಿದ್ದೀರಾ.

**ನಮ್ಮ ಪ್ರಶ್ನೆ :–** ಕ್ರೈಸ್ತವರು ತಮ್ಮನ್ನು ಕ್ರೈಸ್ತವರಾಗಿಯೇ ಹೇಳಿಕೊಳ್ಳುತ್ತಾರೆ. ಹಾಗೆಯೇ ಬೈಬಲನ್ನು ಬೈಬಲಾಗಿಯೇ ಹೇಳಿಕೊಳ್ಳುತ್ತಾರೆ. ಅವರ ಪ್ರಚಾರ ಕ್ರೈಸ್ತವವು, ಬೈಬಲ್ ಆದಾಗ ಅದೇ ಹೆಸರಿನ ಮೇಲೆ ಪ್ರಚಾರ ಮಾಡುತ್ತಾರೆ ಹೊರತು, ಹಿಂದೂಗಳಾಗಿ ಭಗವದ್ಗೀತೆ ಹೆಸರಿನಿಂದ ಏಕೆ ಪ್ರಚಾರ ಮಾಡುತ್ತಾರೆ? ಇಲ್ಲಿಯವರೆಗೂ ಈ ರೀತಿಯಾಗಿ ಎಲ್ಲಿಯೂ ನಡೆಯಲಿಲ್ಲ. ಯಾವ ಮತದವರು ಆ ಮತದ ಹೆಸರು ಹೇಳಿಕೊಳ್ಳುತ್ತಾರಾಗಲಿ ಇತರ ಮತದ ಹೆಸರು ಹೇಳುವುದಿಲ್ಲ.

ಅಷ್ಟೇತಕ್ಕೆ ನೀವು ನಮ್ಮ ಭಗವದ್ಗೀತೆಯನ್ನು ತೆರೆದು ನೋಡಿದ್ದೀರಾ? ಅದರಲ್ಲಿ ಭಗವದ್ಗೀತೆ ಶ್ಲೋಕಗಳಿವೆಯಾ? ಬೈಬಲ್ ವಾಕ್ಯಗಳಿವೆಯಾ?

**ಅವರ ಉತ್ತರ :–** ತ್ರೈತ ಸಿದ್ಧಾಂತವೆಂದು ಇದೆ ಅಲ್ವಾ! ತ್ರೈತ ಎಂದರೆ ತ್ರಿತ್ವ ಎಂದು ತ್ರಿನಿಟಿ ಎಂದು ನಮಗೆ ಚೆನ್ನಾಗಿ ಗೊತ್ತಿದೆ.

**ನಮ್ಮ ಪ್ರಶ್ನೆ :–** ಹಿಂದೂ ಧರ್ಮಗಳಲ್ಲಿ ಅದ್ವೈತ ಸಿದ್ಧಾಂತವನ್ನು ಆದಿಶಂಕರಾ ಚಾರ್ಯನು ಪ್ರತಿಪಾದಿಸಿದ್ದಾನೆ. ವಿಶಿಷ್ಟಾದ್ವೈತವನ್ನು ರಾಮಾನುಚಾರ್ಯರು ಪ್ರತಿಪಾದಿಸಿದ್ದಾನೆ, ದ್ವೈತವನ್ನು ಮಧ್ವಾಚಾರ್ಯರು ಪ್ರಕಟಿಸಿದ್ದಾನೆ. ಈಗ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು ತ್ರೈತ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ. ಸಿದ್ಧಾಂತಕರ್ತರು, ಸಿದ್ಧಾಂತಗಳು ಬೇರೆಯಾದರೂ ಎಲ್ಲರೂ ಹಿಂದೂಗಳೆಂದು ನೀವು ಏಕೆ ಅಂದುಕೊಳ್ಳಲಿಲ್ಲ?

**ಅವರ ಉತ್ತರ :–** ನಿಮ್ಮ ತ್ರೈತಸಿದ್ಧಾಂತ ಭಗವದ್ಗೀತೆಯಲ್ಲಿ ಯಜ್ಞಗಳನ್ನು ಮಾಡಬಾರದೆಂದು ಬರೆದಿದ್ದೀರಲ್ಲಾ! ನಿಜವಾಗಲು ಭಗವದ್ಗೀತೆಯಲ್ಲಿ ಹಾಗೆ ಇಲ್ಲ ಅಲ್ಲವೆ!

**ನಮ್ಮ ಪ್ರಶ್ನೆ :–** ನೀವು ಹಿಂದೂಗಳಲ್ಲಿ ಮುಖ್ಯಸ್ಥರಾಗಿದ್ದು ಅಷ್ಟು ಮೂರ್ಖವಾಗಿ ಮಾತನಾಡಿದರೆ ಹೇಗೆ? **ಪ್ರಪಂಚಕ್ಕೆಲ್ಲಾ ಒಂದೇ ಭಗವದ್ಗೀತೆ** ಇರುತ್ತದಾಗಲಿ, ನಿಮ್ಮ ಭಗವದ್ಗೀತೆ, ನಮ್ಮ ಭಗವದ್ಗೀತೆಯೆಂದು ಬೇರೆ ಬೇರೆ ಇರುವುದಿಲ್ಲ. ಭಗವದ್ಗೀತೆಗೆ ವಿವರ ಒಬ್ಬೊಬ್ಬರು ಒಂದೊಂದು ವಿಧವಾಗಿ ಅವರಿಗೆ ಅರ್ಥವಾದಂತೆ ಹೇಳಿರಬಹುದು ಆದರೆ, ಎಲ್ಲರಿಗೂ ಭಗವದ್ಗೀತೆ ಮೂಲ ಗ್ರಂಥ ಒಂದೇಯೆಂದು ನೆನಪಿಟ್ಟುಕೊಳ್ಳಿ. **ತ್ರೈತ ಸಿದ್ಧಾಂತ ಭಗವದ್ಗೀತೆ ಎಲ್ಲದಕ್ಕಿಂತ ಸರಿಯಾದ ಭಾವನೆಯಿಂದ ಇದೆಯೆಂದು,** ಓದಿದ ಜ್ಞಾನಿಗಳೆಲ್ಲರೂ ಹೊಗಳುತ್ತಿದ್ದರೆ, ನಿಮ್ಮ ಕುಲದಲ್ಲಿ ಎಷ್ಟೋ ಜನ ಪ್ರಶಂಸಿಸುತ್ತಾ ಇದ್ದರೆ, ನಿಮಗೆ ಕೆಲವರಿಗೆ ಮಾತ್ರ ವಿರುದ್ಧವಾಗಿ ಕಾಣಿಸಿದೆಯೆನ್ನುವುದು ಅಸೂಯೆಯಿಂದಲೇ ಎಂದು ನಮಗೆ ಅರ್ಥವಾಗುತ್ತಿದೆ. ಯಜ್ಞಗಳು ಮಾಡಬೇಡವೆಂದು ನಾವು ಎಲ್ಲಿಯೂ ಹೇಳಲಿಲ್ಲ. ಯಜ್ಞಗಳಿಂದ ಪುಣ್ಯ ಬರುತ್ತದೆ, ಸ್ವರ್ಗ ಬರುತ್ತದೆ ಎಂದು ಹೇಳಿದ್ದೇವೆ. ಯಜ್ಞಗಳಿಂದ ಮೋಕ್ಷ ಬರುವುದಿಲ್ಲ, ದೇವರು ತಿಳಿಯುವುದಿಲ್ಲವೆಂದು

ಹೇಳಿದ್ದೇವೆ. ಅಷ್ಟೇಕೆ ನಾವು ಎಲ್ಲಾ ಕುಲಗಳಿಗಿಂತ ಸ್ವಚ್ಛವಾದ ಹಿಂದೂಗಳೆಂದು ನೀವು ಹೇಳಿಕೊಳ್ಳುತ್ತಿದ್ದೀರಾ ಅಲ್ಲವೆ! ಭಗವದ್ಗೀತೆಯಲ್ಲಿ ಹೇಳಿದ ಒಂದು ಹಿಂದೂ ಧರ್ಮವನ್ನು ಹೇಳಿರಿ.

**ಅವರ ಉತ್ತರ :–** ಅವೆಲ್ಲಾ ಮಾತುಗಳು ಬೇಡ... ನೀವು ಹಿಂದೂಗಳು ಅಲ್ಲ.

**ನಮ್ಮ ಪ್ರಶ್ನೆ :–** ಮೊಂಡರಂತೆ ಮಾತನಾಡಬೇಡಿ ನೀವು ಅಗ್ರಕುಲದವರೆಂದು ಇಷ್ಟಬಂದಂತೆ ಮಾತನಾಡಬೇಡಿ. ನಾವು ಹಿಂದೂಗಳು ಅಲ್ಲವೆನ್ನುವುದಕ್ಕೆ ಆಧಾರವೇನಾದರೂ ತೋರಿಸುತ್ತೀರಾ? ನಮ್ಮ ಕಥೆ ಪಕ್ಕಕ್ಕಿಟ್ಟು ನೀವು ಸರಿಯಾದ ಹಿಂದೂಗಳೇ ಆದರೆ ಭಗವದ್ಗೀತೆಯಲ್ಲಿ ವಿಶ್ವರೂಪ ಸಂದರ್ಶನಯೋಗವೆಂಬ ಅಧ್ಯಾಯದಲ್ಲಿ **48ನೆ ಶ್ಲೋಕದಲ್ಲಿಯೂ, 53ನೆ ಶ್ಲೋಕದಲ್ಲಿಯೂ** ಭಗವಂತನು ಏನು ಹೇಳಿದ್ದಾನೋ ನೀವೇ ಹೇಳಿರಿ.

**ಅವರ ಉತ್ತರ :–** ನಾವು ಇಲ್ಲಿಯವರೆಗೂ ಭಗವದ್ಗೀತೆ ಓದಲಿಲ್ಲ. ನಿಮಗೆ ಬೇಕಾದರೆ ಸಂಪೂರ್ಣನಂದಸ್ವಾಮಿಯಿಂದ ಹೇಳಿಸುತ್ತೇವೆ.

**ನಮ್ಮ ಪ್ರಶ್ನೆ :–** ಕನಿಷ್ಟ ಭಗವದ್ಗೀತೆಯನ್ನು ಸಹ ಓದದ ನೀವು ಯೋಗೀಶ್ವರರಾದ ಪ್ರಬೋಧಾನಂದಸ್ವಾಮಿಯನ್ನು ದೂಷಿಸುವುದು ಒಳ್ಳೆಯದಾ? ಒಂದು ಹಿಂದೂ ಧರ್ಮವನ್ನು ಸಹ ತಿಳಿಯದ ನೀವು ಹಿಂದೂ ಧರ್ಮ ರಕ್ಷಕರೆಂದು ಹೇಳುವುದು ಒಳ್ಳೆಯದಾ? ಯೋಗೀಶ್ವರರು ಬರೆದ ಒಂದು ಗ್ರಂಥವನ್ನು ಸಹ ಓದದೆ ನಮ್ಮನ್ನು ಹೊರತುಪಡಿಸಿ ಪೂಜ್ಯರಾಗಿ, ಗುರುಗಳಾಗಿ ಯಾರೂ ಇರಬಾರದೆಂಬ ಅಸೂಯೆಯಿಂದ ಹೀಗೆ ಮಾತನಾಡಿದರೆ ದೇವರು ಸಹಿಸಿಕೊಳ್ಳುವುದಿಲ್ಲವೆಂದು ಹೇಳುತ್ತಿದ್ದೇವೆ.

**ಅವರ ಉತ್ತರ :–** ಹಿಂದೂ ಮತದಲ್ಲಿ ಎಷ್ಟೋ ದೇವರುಗಳಿದ್ದಾರೆ. ಶಿವನು ದೇವರೆ, ಶಿವನ ಮಗ ಗಣಪತಿ ದೇವರೇ, ರಾಮನು ದೇವರೆ, ರಾಮನ ಸೇವಕನು ಆಂಜನೇಯನು ದೇವರೆ. ಅಂತಹ ಹಿಂದೂ ಮತದಲ್ಲಿ 'ದೇವರು ಒಬ್ಬನೇ' ಎಂದು ಹೇಳುವುದು ನಿಮ್ಮದು ತಪ್ಪು ಅಲ್ಲವೆ?

**ನಮ್ಮ ಮಾತು :–** ನಾವು ಮತವನ್ನು ಕುರಿತು ಹೇಳಲಿಲ್ಲ. ಹಿಂದೂ ಮತದಲ್ಲಿ ಎಷ್ಟೋ ಮಂದಿ ದೇವತೆಗಳಿರುವುದು ನಿಜವೆ, ಆದರೆ ಹಿಂದೂ ಜ್ಞಾನದಲ್ಲಿ, ಹಿಂದೂ ಧರ್ಮದ ಪ್ರಕಾರ **ವಿಶ್ವಕ್ಕೆಲ್ಲಾ ಒಬ್ಬನೇ ದೇವರೆಂದು** ಹೇಳಿದ್ದೇವೆ. ಭಗವದ್ಗೀತೆಯಲ್ಲಿ ದೇವರು ಹೇಳಿರುವುದೇ ಹೇಳಿದ್ದೇವೆ ಹೊರತು ನಾವು ದೇವತೆಗಳನ್ನು ಕುರಿತು ಇಲ್ಲವೆಂದು ಹೇಳಲಿಲ್ಲ! ದೇವತೆಗಳೆಲ್ಲರಿಗೂ ಅಧಿಪತಿ ಯಾದ ದೇವರು ಒಬ್ಬನಿದ್ದಾನೆಂದು, ಆತನೇ ದೇವದೇವನೆಂದು, ಆತನನ್ನು ಆರಾಧಿಸೆಂದು ಹೇಳಿದ್ದೇವೆ.

**ಅವರ ಉತ್ತರ :–** ನೀವು ರಾಮನ ಹೆಸರು ಹೇಳುವುದಿಲ್ಲ, ಶಿವನ ಹೆಸರು ಹೇಳುವುದಿಲ್ಲ, ವಿನಾಯಕನ ಹೆಸರು ಹೇಳುವುದಿಲ್ಲ. ಯಾರ ಹೆಸರೂ ಹೇಳದಂತೆ ದೇವರು ಎಂದು, ಸೃಷ್ಠಿಕರ್ತ ಎಂದು ಅನೇಕಬಾರಿ ಹೇಳುತ್ತಿದ್ದೀರಾ. 'ದೇವರು' ಎಂಬ ಪದವನ್ನಾಗಲಿ, ಸೃಷ್ಠಿಕರ್ತ ಎಂಬ ಪದವನ್ನಾಗಲಿ ಕ್ರೈಸ್ತವರೇ ಬಳಸುತ್ತಾರೆ. ಹಿಂದೂಗಳು ಬಳಸುವುದಿಲ್ಲ. ಆದ್ದರಿಂದ ನಿಮ್ಮನ್ನು ಹಿಂದೂಗಳಲ್ಲ ಕ್ರೈಸ್ತವರು ಎನ್ನುತ್ತಿದ್ದೇವೆ.

**ನಮ್ಮ ಪ್ರಶ್ನೆ :–** ಕ್ರೈಸ್ತವ ಮತ ಹುಟ್ಟಿ ಎರಡುಸಾವಿರ ವರ್ಷಗಳಾಗಿದೆ. ಸೃಷ್ಠಿಹುಟ್ಟಿ ಎಷ್ಟು ಕೋಟಿ ವರ್ಷಗಳಾಗಿದೆಯೋ ಯಾರೂ ಹೇಳಲಾರರು. ಸೃಷ್ಠಿ ಆದಿಯಿಂದ **'ಸೃಷ್ಠಿಕರ್ತ'** ಎಂಬ ಪದವನ್ನು **'ದೇವರು'** ಎಂಬ ಪದವನ್ನು ಹಿಂದೂ ಸಮಾಜ ಬಳಸುತ್ತಲೇ ಇದೆ. ಮೊದಲಿನಿಂದ ಹಿಂದೂಸಮಾಜದಲ್ಲಿ ಇರುವ ದೇವರು, ಸೃಷ್ಟಿಕರ್ತ ಎಂಬ ಹೆಸರುಗಳನ್ನು ಹಿಂದೂಗಳು ಕ್ರೈಸ್ತವರಿಗೇನಾದರೂ ಲೀಜಿಗೆ ಕೊಟ್ಟಿದ್ದಾರಾ? ಅಥವಾ ಪೂರ್ತಿಯಾಗಿ ಅವರಿಗೇ ಮಾರಿದ್ದಾರಾ? ಎಂದು ಕೇಳುತ್ತಿದ್ದೇವೆ. ಸೃಷ್ಠಿಕರ್ತ ಎಂದಾಗಲಿ, ದೇವರು ಎಂದಾಗಲಿ ಹಿಂದೂಗಳಾ ದವರು ಅನ್ನಬಾರದೆಂದು ಎಲ್ಲಿಯಾದರೂ ಇದೆಯಾ ಎಂದು ಕೇಳುತ್ತಿದ್ದೇವೆ?

**ಅವರ ಉತ್ತರ :–** ನೀವು ಹಿಂದೂಮತವನ್ನು ಅಲ್ಲದೇ ಅನ್ಯಮತವನ್ನು ಬೋಧಿಸುತ್ತಿದ್ದೀರೆನ್ನುವುದಕ್ಕೆ, ನಿಮ್ಮನ್ನು ನೀವು ಹಿಂದೂಗಳಾಗಿ ಹೇಳಿಕೊಳ್ಳಲಿಲ್ಲ. ಹಿಂದೂಗಳಾಗಿ ಅಲ್ಲದೆ ಇಂದೂಗಳಾಗಿ ಹೇಳಿಕೊಳ್ಳುತ್ತಿದ್ದೀರ. ಅಂತಹದರಲ್ಲಿ ನೀವು ಹಿಂದೂಮತವನ್ನು ಸೀಳಿಸಿದಂತೆ ಅಲ್ಲವೆ! ಪ್ರತ್ಯೇಕಿಸಿ 'ಇಂದೂ ಮತ'

ಎನ್ನುವುದನ್ನು ಪ್ರಚಾರ ಮಾಡಿದಂತೆ ಅಲ್ಲವೆ! ನೀವು ಹಿಂದೂಗಳೇ ಆದಾಗ ನಿಮ್ಮ ಗ್ರಂಥಗಳಲ್ಲಾಗಲಿ, ನಿಮ್ಮ ಬೋಧನೆಗಳಲ್ಲಾಗಲಿ ಪ್ರತ್ಯೇಕಿಸಿ 'ಇಂದೂಗಳು' ಎಂದು ಏಕೆ ಹೇಳುತ್ತಿದ್ದೀರಾ?

**ನಮ್ಮ ಮಾತು :–** ನಾವು ನೇರವಾದ ಒಂದು ಪ್ರಶ್ನೆಯನ್ನು ಕೇಳುತ್ತೇವೆ ಉತ್ತರ ಹೇಳಿರಿ. **ಹಿಂದೂ, ಇಂದೂ** ಎಂಬ ಪದದಲ್ಲಿ ಸ್ವಲ್ಪಮಟ್ಟಿನ ಶಬ್ದ ಹೊರತುಪಡಿಸಿ ಏನು ವ್ಯತ್ಯಾಸವಿದೆಯೋ ನೀವೆ ಹೇಳಿರಿ. ತೆಲುಗು ಭಾಷೆಯನ್ನು ಬರೆಯುವ ವರೆಲ್ಲರೂ ಹಿರಣ್ಯಕಶ್ಯಪನನ್ನು ಸಾಯಿಸಿರುವುದು ನರಶಿಂಹಸ್ವಾಮಿ ಎಂದು ಹೇಳುತ್ತಿರುತ್ತಾರೆ, ಹಾಗೆಯೇ ಬರೆಯುತ್ತಿರುತ್ತಾರೆ. ಪ್ರಸ್ತುತಕಾಲದಲ್ಲಿ ನರಶಿಂಹ ಎಂದು ಹೆಸರಿರುವವನು ಸಹ ಅವನ ಹೆಸರನ್ನು **ನರಶಿಂಹ** ಎಂದು ಬರೆಯುವುದು ಎಲ್ಲರಿಗೂ ತಿಳಿದಿದೆ. ಆದರೆ ಆ ಮಾತು ತಪ್ಪು ಹಾಗೆ ಬರೆಯಬಾರದು ಅದನ್ನು **ನರಸಿಂಹ** ಎಂದು ಬರೆಯಬೇಕೆಂದು ಹೇಳುತ್ತಿದ್ದೇವೆ. ಕಾಡಿನಲ್ಲಿ ಮೃಗರಾಜನನ್ನು **ಸಿಂಹ** ಎಂದು ಅನ್ನುತ್ತೇವೆ ಹೊರತು **ಶಿಂಹ** ಎಂದು ಅನ್ನುವುದಿಲ್ಲ ಎಂದುಸಹ ಹೇಳುತ್ತಿದ್ದೇವೆ. 'ಸಿಂಹ' ಎಂದರೆ ಅರ್ಥವಿದೆ ಆದರೆ, **'ಶಿಂಹ'** ಎಂದರೆ ಅರ್ಥವಿಲ್ಲ ಎಂದು ಸಹ ಹೇಳಿದ್ದೇವೆ. ಹಾಗೆ ಇರುವುದು ಇದ್ದಂತೆ ಹೇಳಿದರೆ ಇಂದೂ ಎನ್ನುವುದಕ್ಕೆ ಅರ್ಥವಿದೆಯಾಗಲಿ **'ಹಿಂದೂ'** ಎನ್ನುವುದಕ್ಕೆ ಅರ್ಥವಿಲ್ಲವೆಂದು ಹೇಳಿದ್ದೇವೆ. ಸೃಷ್ಟ್ಯಾದಿಯಲ್ಲಿ ಹುಟ್ಟಿರುವುದು ಇಂದೂ ಸಮಾಜವೆಂದು, ಅದು ಮಧ್ಯದಲ್ಲಿ ಹೆಸರು ಬದಲಾಗಿ ದೃಷ್ಠಿ ಜಿಷ್ಠಿ ಆದಂತೆ, **'ಇಂದೂ'** ಎಂಬ ಶಬ್ದ 'ಹಿಂದೂ' ಎಂದು ಹೇಳಲ್ಪಡುತ್ತಿದೆಯೆಂದು ಹೇಳಿದ್ದೇವೆ. **'ಇಂದೂ'** ಪದ ಏಕೆ ಬಳಸಬೇಕು ಹಿಂದೂ ಪದವನ್ನು ಏಕೆ ಬಳಸಬಾರದೆಂದು ಸಹ ವಿವರವಾಗಿ ನಮ್ಮ ಗ್ರಂಥಗಳಲ್ಲಿ ಇದೆ. ಇರುವ ಸತ್ಯ ನಿಮಗೆ ತಿಳಿದರೂ, ನೀವು ನಮಗಿಂತ ದೊಡ್ಡವರು ಯಾರೂ ಇರಬಾರದೆಂಬ ಅಸೂಯೆಯಿಂದ ಮಾತನಾಡುತ್ತಿದ್ದೀರಾ.

ಅಗ್ರಕುಲದಲ್ಲಿ ಎಷ್ಟೋ ಜನ ಹಿರಿಯರು ನಮ್ಮ ಜ್ಞಾನವನ್ನು ತಿಳಿದು ಸಂತೋಷಿಸುತ್ತಿರುವಾಗ, ಕೆಲವರು ಮಾತ್ರ ಬೀದಿ ರೌಡಿಗಳಂತೆ ಹೊಡೆಯುತ್ತೇವೆ,

ಕೊಲ್ಲುತ್ತೇವೆ, ಸುಡುತ್ತೇವೆ ನೀವು ಪ್ರಚಾರ ಮಾಡಬಾರದೆಂದು ಹೇಳುವುದು ಒಳ್ಳೆಯದಲ್ಲ. ನಮ್ಮ ಗ್ರಂಥಗಳನ್ನು ಯಾವುದೂ ಓದದೆ ಮಾತನಾಡುವುದು, ನಾವು ಹೇಳಿದ ಮಾತುಗಳನ್ನು ಕೇಳದಂತೆ ಇವೆಲ್ಲಾ ಡ್ರಾಮಾಗಳು, ನಾಟಕಗಳು ಎನ್ನುವುದು ಒಳ್ಳೆಯದಲ್ಲ. ನೀವು ಯಾರಾದರೂ ನಮ್ಮ ಗ್ರಂಥಗಳಲ್ಲಿ ಇತರ ಮತಗಳನ್ನು ಪ್ರಚಾರ ಮಾಡಿದಂತಾಗಲಿ, ಇಂತಹ ಮತದೊಳಗೆ ಸೇರಿದ್ದೇವೆಂದು ಹೇಳಿದಂತಾಗಲಿ ಇದ್ದರೆ ನಿರೂಪಣೆ ಮಾಡಿರಿ, ಹಾಗೆ ನಿರೂಪಿಸಿದವರಿಗೆ ಇಂದೂ ಜ್ಞಾನವೇದಿಕೆ ಕಡೆಯಿಂದ ಹತ್ತು ಲಕ್ಷ ರೂಪಾಯಿಗಳು ಕೊಡುತ್ತೇವೆ. ನಿರೂಪಿಸದೆ ಹೋದರೆ ನೀವು ಲಕ್ಷ ರೂಪಾಯಿಗಳು ಯಾವುದೇ ಊರಿನಲ್ಲಾದರೂ ಶ್ರೀ ಕೃಷ್ಣನ ಮಂದಿರಕ್ಕೆ ಕೊಡಬೇಕು. ಈ ಷರತ್ತಿಗೆ ಯಾರಾದರೂ ಮುಂದಕ್ಕೆ ಬರುತ್ತೀರಾ? ಎಂದು ಕೇಳುತ್ತಿದ್ದೇವೆ.

ಇಂತಿ

**ಇಂದೂ ಜ್ಞಾನವೇದಿಕೆ**

# ಚರಿತ್ರೆಯಲ್ಲಿ ನಡೆದ ಅನ್ಯಾಯ ಹಿಂದೂಗಳಲ್ಲಿ ನಡೆಯುತ್ತಿರುವ ಯಥಾರ್ಥ

ನಾಲ್ಕುನೂರು ವರ್ಷಗಳ ಕೆಳಗೆ **ಆಧ್ಯಾತ್ಮಿಕ ರಂಗದಲ್ಲಿ ಮೆರೆದ ವಜ್ರ ವೇಮನಯೋಗಿ.** ಆಧ್ಯಾತ್ಮಿಕವೆಂಬ ಹಾಲನ್ನು ಕಡಿದು, **ದೈವಜ್ಞಾನ**ವೆಂಬ ಬೆಣ್ಣೆಯನ್ನು ತೆಗೆದು ಕೊಟ್ಟವನು ವೇಮನ. ವೇಮನ ತನ್ನ ಪದ್ಯಗಳಲ್ಲಿ ಹೇಳಿದ ಒಂದೊಂದು ಜ್ಞಾನ ವಿಷಯ ವಿವರವಾಗಿ ಬರೆದುಕೊಂಡರೆ ಒಂದೊಂದು ಗ್ರಂಥವಾಗಬಹುದು. ವೇಮನ ಸ್ವಚ್ಛವಾದ ತೆಲುಗು ಭಾಷೆಯಲ್ಲಿ ಪದ್ಯವನ್ನು ಬರೆದು ಹೇಳಿದ್ದಾನೆ. ಸಂಸ್ಕೃತದ ತಂಟೆಗೆ ಹೋಗಲಿಲ್ಲ. ಒಂದುಕಡೆ ಪದ್ಯಗಳು ಬರೆದು ಕವಿಯಂತೆ ಕಾಣಿಸಿದರೂ, ಒಂದುಕಡೆ ಅಂತ್ಯ ತಿಳಿಯದ **ಆಧ್ಯಾತ್ಮಿಕ ನಿಪುಣ ವೇಮನಯೋಗಿ.** ಆದರೆ ಆತನು ಹುಟ್ಟಿರುವುದು ರೆಡ್ಡಿ ಕುಲದಲ್ಲಿ.

ಚರಿತ್ರೆಯಲ್ಲಿ ನಮಗಿಂತ ಯಾರೂ ದೊಡ್ಡದಾಗಿ ಪ್ರಶಂಸಿಸಲ್ಪಡಬಾರದೆಂಬ ಗರ್ವದಲ್ಲಿರುವ ಅಗ್ರಕುಲದಲ್ಲಿನ ಕೆಲವರು ಅದೇ ಕೆಲಸವಾಗಿ ವೇಮನಯೋಗಿ ಯನ್ನು ಹುಚ್ಚನಂತೆ ಜಮಕಟ್ಟಿ, ಆತನು ಹೇಳಿರುವುದು ಜ್ಞಾನವೇ ಅಲ್ಲವೆಂದು ಪ್ರಜೆಗಳಲ್ಲಿ ಪ್ರಚಾರ ಮಾಡಿದ್ದಾರೆ. ಹುಚ್ಚನ ಮಾತುಗಳು ಹುಚ್ಚರೇ ಕೇಳುತ್ತಾರೆ ಎಂದು ಹೇಳನವಾಗಿ ಮಾತನಾಡುವುದು ನಡೆದಿದೆ. ಅನೇಕ ಕುಲಗಳಾಗಿರುವ ಹಿಂದೂಗಳಿಗೆ ಜ್ಞಾನ ವಿಷಯದಲ್ಲಿ ಪರಿಚಯ ಇಲ್ಲದಿರುವುದರಿಂದ, ಅಗ್ರಕುಲದವರು ವೇಮನ ಹೇಳಿರುವುದು ಜ್ಞಾನವೇ ಅಲ್ಲಗಳೆದಿರುವುದರಿಂದ, ವೇಮನ ತನ್ನ ಜ್ಞಾನಕ್ಕೆ ತಕ್ಕಂತೆ ಪ್ರಕಾಶಿಸಲಾಗದೆ ಹೋಗಿದ್ದಾನೆ. ತಾವು ಅಗ್ರಕುಲದವರೆಂದು, ಉಳಿದವರೆಲ್ಲರೂ ಸಣ್ಣ ಕುಲದವರೆಂದು ವಿಭಜಿಸಿ, ತಾವು ಹೇಳಿದಂತೆ ಕೇಳಬೇಕೆಂದು, ಹಾಗೆ ಕೇಳಿದರೇನೆ ಉಳಿದ ಕುಲದವರೆಲ್ಲರೂ ಸುಖವಾಗಿ ಬದುಕುತ್ತಾರೆಂದು, ಅಗ್ರಕುಲದವರು ಪ್ರಚಾರ ಮಾಡಿಕೊಂಡಿದ್ದಾರೆ. ಹಾಗೆ ತಮ್ಮನ್ನು ತಾವು ದೊಡ್ಡದಾಗಿ ಪ್ರಕಟಿಸಿಕೊಳ್ಳುವುದೇ ಅಲ್ಲದೇ ಹಿಂದೂಗಳ ಮನೆಗಳಲ್ಲಿ ನಡೆಯುವ ಪ್ರತಿ ಒಳ್ಳೆಯ ಕೆಲಸಕ್ಕು, ಕೆಟ್ಟ ಕೆಲಸಕ್ಕು, ಸಾವಿಗು ಹುಟ್ಟುವುದಕ್ಕೂ, ಮದುವೆಗು ಪ್ರತಿ ಕಾರ್ಯಕ್ಕೂ ತಾವು ಹೇಳಿದಂತೆ ಮಾಡಬೇ ಕೆಂದು, ತಾವು ನಿರ್ಣಯಿಸುವ ಕಾಲದಲ್ಲಿಯೇ ಮಾಡಬೇಕೆಂದು, ಹಾಗೆ ಮಾಡದೆಹೋದರೆ ನಷ್ಟ, ಕಷ್ಟ ಉಂಟಾಗುತ್ತದೆಂದು ಭಯ ಇಡುವುದರಿಂದ, ಭಯದಿಂದ ಜ್ಞಾನ ತಿಳಿಯದ ಉಳಿದ ಕುಲದವರೆಲ್ಲರೂ ಅವರು ಹೇಳುವುದನ್ನು ನಂಬುವುದು ನಡೆದಿದೆ. ಈ ವಿಧವಾಗಿ ಹಿಂದೂಮತದಲ್ಲಿ ಅಗ್ರಕುಲದವರು 'ಭಯ' ಎನ್ನುವ ಬ್ಲಾಕ್‌ಮೇಯಿಲ್ ಮಾಡಿ, ಸಣ್ಣ ಕುಲದವರೆಲ್ಲರನ್ನು ತಮ್ಮ ಮಾತು ಕೇಳುವಂತೆ ಮಾಡಿಕೊಂಡಿದ್ದಾರೆ. ಅಂದಿನಿಂದ ಹಿಂದೂ ಸಮಾಜವನ್ನು ಮೋಸ ಮಾಡುತ್ತಾ, ಯಾರಿಗೂ ಹಿಂದೂ ಜ್ಞಾನವನ್ನು ತಿಳಿಯದಂತೆ ಮಾಡಿ, ತಾವು ಹಿಂದೂ ಸಮಾಜವನ್ನು ಅನೇಕ ಹೆಸರುಗಳಿಂದ ದೋಚಿಕೊಳ್ಳುತ್ತಾ ಬದುಕುವುದಲ್ಲದೇ, ಉಳಿದ ಕುಲಗಳಲ್ಲಿ ಯಾರು ಜ್ಞಾನಿಗಳಾಗಿ ಹುಟ್ಟಿದರೂ, ಅವರನ್ನು ಅವಹೇಳನ ಮಾಡುವುದು, ಅಜ್ಞಾನಿಯಂತೆ ವರ್ಣಿಸುವುದೂ ನಡೆದಿದೆ.

ಚರಿತ್ರೆಯಲ್ಲಿ ನಾಲ್ಕುನೂರು ವರ್ಷಗಳ ಕೆಳಗೆ ಬಂದಿರುವ ವೇಮನ ನನ್ನು ಹುಚ್ಚನನ್ನಾಗಿ ವರ್ಣಿಸಿ, ಶಾಸ್ತ್ರ ತಿಳಿಯದವನೆಂದು ವರ್ಣಿಸಿದ್ದಾರೆ.

ನಂತರ ಮುನ್ನೂರ ಐವತ್ತು (350) ವರ್ಷಗಳ ಕೆಳಗೆ ಬಂದಿರುವ **ಪೋತುಲೂರು ವೀರಬ್ರಹ್ಮಯ್ಯನವರು** ಉತ್ತಮ ಜ್ಞಾನಿಯಾಗಿ ತಯಾರಾಗಿ, ಭವಿಷ್ಯತ್ತು ಕಾಲದಲ್ಲಿ ನಡೆಯುವ ಸಂಘಟನೆಗಳನ್ನು ಮೊದಲೇ ತಿಳಿಸಿ ದೊಡ್ಡ ಕಾಲಜ್ಞಾನವನ್ನೇ ಬರೆದಿದ್ದಾನೆ. ಆತನು ಬರೆದ ಭವಿಷ್ಯತ್ತು ಕಾಲಕ್ರಮವಾಗಿ ಇಂದಿಗೂ ನಡೆಯುತ್ತಲೇ ಇದೆ. ಅಂತಹ ದೊಡ್ಡ ಜ್ಞಾನಿಯಾದ ವೀರಬ್ರಹ್ಮಯ್ಯನವರು ಅಗ್ರಕುಲದವನಲ್ಲದೆ ಹೋಗಿರುವುದರಿಂದ, ವಿಶ್ವಕರ್ಮ (ಆಚಾರಿಗಳ) ಕುಲದಲ್ಲಿ ಹುಟ್ಟುವುದರಿಂದ, ಅಗ್ರಕುಲದವರು ಬ್ರಹ್ಮಯ್ಯನವರು ಬದುಕಿರುವ ಕಾಲದಲ್ಲಿಯೇ, ತಮ್ಮ ಊರಿ ನೊಳಗೆ ಬರದಂತೆ, ಆತನು ಜ್ಞಾನವನ್ನು ಪ್ರಚಾರ ಮಾಡದಂತೆ ತಡೆದಿದ್ದಾರೆ. ಆ ದಿನ ಇತರರು ಜ್ಞಾನಿಗಳು ಆಗಬಾರದೆಂಬ **ಅಸೂಯೆ** ಎಂಬ ಗುಣದಿಂದಲೂ, ನಾವೇ ತಿಳಿದವರೆಂಬ **ಗರ್ವ** ದಿಂದಲೂ ಆ ಕೆಲಸ ಮಾಡಿದ್ದಾರೆ. ಹಿಂದೂ ಸಮಾಜದಲ್ಲಿ ಇಂತಹವರು ಇರುವುದರಿಂದ ಬೇಸರಗೊಂಡ ಹಿಂದೂಗಳು ಹಿಂದೂ ಮತವನ್ನು ಬಿಟ್ಟು ಇತರ ಮತದೊಳಗೆ ಹೋಗುತ್ತಿದ್ದಾರೆ. ಇಂದೂ ಮತದಲ್ಲಿ ದೇವರಿಗು ಗುಡಿಗು ಅಂಟಬಾರದವರಾಗಿ ಇರಲಾರದ ವರೆಲ್ಲರೂ ಕೆಲವರು **ಜ್ಞಾನ**ಕ್ಕಾಗಿ, ಕೆಲವರು ಕುಲವಿವಕ್ಷ ಇಲ್ಲದ **ಸ್ವತಂತ್ರ**ಕ್ಕಾಗಿ ಮತವನ್ನು ಬದಲಾಯಿಸಿಕೊಂಡಿದ್ದಾರೆ. ಈ ವಿಧವಾಗಿ ಹಿಂದೂಮತದಲ್ಲಿನವರು ಇತರ ಮತಗಳಿಗೆ ಹೋಗುವುದಕ್ಕೆ ಮೊದಲ ಕಾರಕರು ಹಿಂದೂ ಮತದಲ್ಲಿನ ಅಗ್ರಕುಲ ದವರೇಯೆಂದು ಅನುಮಾನ ಇಲ್ಲದಂತೆ ಹೇಳಬಹುದು.

ತಮ್ಮಿಂದಲೇ ಹಿಂದೂಗಳು ಇತರ ಮತದೊಳಗೆ ಹೋಗುತ್ತಿದ್ದಾರೆಂದು ಅಗ್ರಕುಲದವರಿಗು ಕೂಡಾ ತಿಳಿದಿದೆ. ಆದರೆ ತಮ್ಮ ತಪ್ಪನ್ನು ಯಾರೂ ಗುರುತಿಸದಂತೆ ತಾವು ಹಿಂದೂ ಮತವನ್ನು ಉದ್ಧರಿಸುವವರಂತೆ, ಹಿಂದೂ ಧರ್ಮ ರಕ್ಷಕರಾಗಿ ವರ್ಣಿಸಿಕೊಂಡು ಹಿಂದೂ ಧರ್ಮ ಭಕ್ಷಕರಾಗಿ ಇಂದಿಗೂ ಸಮಾಜದಲ್ಲಿ ಮುಂದುವರೆಯುತ್ತಿದ್ದಾರೆ. ಅವರನ್ನು ಹಿಂದೂ ಧರ್ಮ ಭಕ್ಷಕರು, ಹಿಂದೂ ಧರ್ಮ ನಾಶಕರು ಎಂದು ಹೇಳುವುದಕ್ಕೆ ಅನೇಕ ಆಧಾರಗಳು ಇವೆ. ಅಂತವುಗಳನ್ನು ಪರಿಶೀಲಿಸಿದರೆ, ಹಿಂದೂಗಳಲ್ಲಿನ ಉಳಿದ ಕುಲದವರ ಹತ್ತಿರ ಭಗವದ್ಗೀತೆಯನ್ನು ಬೋಧಿಸುವ ಕೃಷ್ಣನು ಅರ್ಜುನನು ಇರುವ ಚಿತ್ರಪಟ (ಫೋಟೋ) ಇದ್ದರೆ ಅದನ್ನು ಮನೆಯಲ್ಲಿ ಇಟ್ಟುಕೊಳ್ಳಬಾರದೆಂದು, ಆ ಚಿತ್ರಪಟ

ಮನೆಯಲ್ಲಿದ್ದರೆ ಮನೆಯಲ್ಲಿ ಕೂಡಾ ಯುದ್ಧಗಳು ಬರುತ್ತವೆಂದು, ಅನೇಕ ಕಷ್ಟಗಳು ಬಂದು ಪಾಂಡವರು ಅರಣ್ಯವಾಸ ಹೋದಂತೆ ಬಾಧೆಪಡಬೇಕಾಗಿ ಬರುತ್ತದೆಂದು ಅಗ್ರಕುಲದವರು ಇಂದಿಗೂ ಹೇಳುತ್ತಲೇ ಇದ್ದಾರೆ. ಅಂತಹ ಭಗವದ್ಗೀತೆ ಪೋಟೋಗಳನ್ನು ಗುಡಿಗಳಲ್ಲಿ ಇಡಬೇಕೆಂದು ಇಲ್ಲದಿದ್ದರೆ ಕೆರೆ, ನದಿ ಪ್ರವಾಹದಲ್ಲಿ ಬಿಸಾಕಬೇಕೆಂದು ಹೇಳುವುದು, ಮಾಡಿಸುವುದು ಕೂಡಾ ನಡೆದಿದೆ. ಅಷ್ಟೇಅಲ್ಲದೆ ಭಗವದ್ಗೀತೆಯನ್ನು ಮನೆಯಲ್ಲಿ ಇಟ್ಟುಕೊಳ್ಳಬಾರದೆಂದು, ಭಗವದ್ಗೀತೆಯನ್ನು ಯಾರೂ ಓದಬಾರದೆಂದು, ಓದಿದರೆ ಕಷ್ಟಗಳು ಬರುತ್ತವೆಂದು, ಭಗವದ್ಗೀತೆಯನ್ನು ಯಾರ ಮನೆಯಲ್ಲಿ ಇಲ್ಲದಂತೆ ಮಾಡುತ್ತಿದ್ದಾರೆ. ಭಗವದ್ಗೀತೆ ಅರ್ಜುನನಿಗೆ ಯುದ್ಧರಂಗದಲ್ಲಿ ಯುದ್ಧ ಮಾಡುವುದಕ್ಕೆ ಹೇಳಿರುವುದು, ಆದ್ದರಿಂದ ಓದಬಾರದು, ಓದಿದರೆ ಓದಿದವರು ಕೂಡಾ ಅನೇಕ ತಗಾದೆಗಳಲ್ಲಿಯೂ, ಕೋರ್ಟು ವ್ಯವಹಾರಗಳಲ್ಲಿಯೂ ಸಿಲುಕಿಕೊಳ್ಳಬೇಕಾಗಿ ಬರುತ್ತದೆಂದು ಹೇಳುವುದು ನಡೆಯುತ್ತಿದೆ. ಇನ್ನೂ ಹಿಂದೂಗಳಿಗೆ ವೇದಗಳು ಮುಖ್ಯವಾದ ವೆಂದು, ಅವುಗಳನ್ನು ಎಲ್ಲಾ ಕುಲದವರು ಓದಬಾರದೆಂದು, ವೇದಗಳನ್ನು ತಾವೇ ಓದಬೇಕೆಂದು ಹೇಳುವುದು ಕೂಡಾ ನಡೆಯುತ್ತಿದೆ. ಈ ವಿಧವಾಗಿ ಭಗವದ್ಗೀತೆಗೆ ವಿರುದ್ಧವಾಗಿ ಮಾತನಾಡುವವರು ಹಿಂದೂ ಸಮಾಜಕ್ಕೆ ಕೀಡೆ ಹುಳಗಳಲ್ಲದೇ ಏನಾಗುತ್ತಾರೋ ನೀವೆ ಆಲೋಚಿಸಿರಿ!

ಇದೆಲ್ಲವೂ ಗತದಲ್ಲಿ ನಡೆದ ವಿಷಯಗಳು, ಅವು ಸಾಲದೆ ಪ್ರಸ್ತುತ ಕಾಲದಲ್ಲಿ ಇವರ 'ಸಹಿಸಲಾರದತನ, ನಾವೇ ದೊಡ್ಡವರು' ಎಂಬ ಗರ್ವ ಹೇಗಿದೆಯೋ ನೋಡಿರಿ. ವೇಮನಯೋಗಿಯನ್ನು, ಪೋತುಲೂರಿ ವೀರ ಬ್ರಹ್ಮಯ್ಯನವರನ್ನು ಅಗ್ರಕುಲದವರು ಎಷ್ಟು ಅವಹೇಳನ ಮಾಡಿದರೂ ವೇಮನ ಯೋಗಿಯನ್ನು ರೆಡ್ಡಿ ಕುಲಸ್ಥರು ವೇಮಾರೆಡ್ಡಿಗಳಾಗಿ ಕುದುರೆಯನ್ನೇ ಪ್ರಚಾರ ಮಾಡುವುದರಿಂದ, ವೀರಬ್ರಹ್ಮಯ್ಯನವರನ್ನು ವಿಶ್ವಕರ್ಮ (ಆಚಾರಿ) ಕುಲದವರು ಕಾಲಜ್ಞಾನವನ್ನು ಪ್ರಚಾರ ಮಾಡುವುದರಿಂದ, ವೇಮನ ಸಂಘಗಳು, ವಿಶ್ವಕರ್ಮ ಸಂಘಗಳು ತಯಾರಾಗಿ ವೇಮನನ್ನು, ಬ್ರಹ್ಮಯ್ಯನವರನ್ನು ಪ್ರಚಾರ ಮಾಡುವು ದರಿಂದ, ಸ್ವಲ್ಪಜನ ಪ್ರಜೆಗಳಿಗೆ ವೇಮನಯೋಗಿ ಪದ್ಯಗಳು, ವೀರಬ್ರಹ್ಮಯ್ಯನವರ ಕಾಲಜ್ಞಾನ ಸ್ವಲ್ಪಮಟ್ಟಿಗೆ ತಿಳಿಯುತ್ತದೆ. ವೇಮನಯೋಗಿ ಆ ಕಾಲದಲ್ಲಿಯೇ

ತನ್ನ ಪದ್ಯಗಳಲ್ಲಿ ಅಗ್ರಕುಲದವರು ಮಾಡುವ ತಪ್ಪುಗಳನ್ನು ಒಣಗಿ ಅಡುವುದು ನಡೆದಿದೆ. ವೀರಬ್ರಹ್ಮಯ್ಯನವರ ಚರಿತ್ರೆಯಲ್ಲಿ ಕೂಡಾ ಬ್ರಹ್ಮಯ್ಯನವರಿಗೆ ಅಗ್ರಕುಲದವರು ಮಾಡಿದ ಆತಂಕಗಳನ್ನು ಬರೆಯುವುದು ನಡೆದಿದೆ.

ವೀರಬ್ರಹ್ಮಯ್ಯನವರು ತನ್ನ ಕಾಲಜ್ಞಾನದಲ್ಲಿ **"ಪ್ರಬೋಧಾಶ್ರಮ ಉನ್ನತವಾದ ಜ್ಞಾನ ಇರುವುದು"** ಎಂದು ಮುನ್ನೂರ ಐವತ್ತು(350) ವರ್ಷಗಳ ಸಮಯದಲ್ಲೇ ಬರೆದಿಟ್ಟಿದ್ದಾನೆ. ಕಾಲಜ್ಞಾನದಲ್ಲಿ ಪ್ರಬೋಧಾಶ್ರಮವೊಂದರ ಹೆಸರಿರುವುದು ಈ ಮಧ್ಯದಲ್ಲಿ ಆರು ವರ್ಷಗಳ ಕೆಳಗೆ ನಮಗೆ ತಿಳಿದಿದೆ, ನಂತರ ಬ್ರಹ್ಮಯ್ಯನವರು ಬರೆದ ಕಾಲಜ್ಞಾನದಲ್ಲಿ **ಪ್ರಬೋಧಾಶ್ರಮಕ್ಕು ಪ್ರಬೋಧಾನಂದ ಯೋಗೀಶ್ವರರಿಗು** ಸಂಬಂಧಿಸಿದ ಬಹಳ ವಿಷಯಗಳು ಬರೆದಂತೆ ತಿಳಿದಿದೆ. ಎಷ್ಟೊ ದೊಡ್ಡ ಜ್ಞಾನಿ, ಕಾಲಜ್ಞಾನಿಯಾದ ಪೋತುಲೂರಿ ವೀರಬ್ರಹ್ಮಯ್ಯನವರು ಪ್ರಬೋಧಾಶ್ರಮಾಧಿಪತಿಯಾದ ಪ್ರಬೋಧಾನಂದ ಯೋಗೀಶ್ವರರನ್ನು ದೊಡ್ಡದಾಗಿ ಹೇಳುತ್ತಾ **"ಪ್ರಬೋಧಾಶ್ರಮದವರು ಶಯನಾಧಿಪತಿ ಗುಣಗಳು ಹೊಂದಿದ್ದಾರೆ. ಶಯನಾಧಿಪತಿಯೇ ಆನಂದ ಗುರು. ಆನಂದ ಗುರುವೇ ನನಗು ಗುರು, ನಿಮಗೂ ಗುರು"** ಎಂದು ಬರೆಯುವುದು ನಡೆದಿದೆ. ಪ್ರಬೋಧಾನಂದ ಯೋಗೀಶ್ವರರ ಜ್ಞಾನವೇನೊ, ಎಷ್ಟು ಶಕ್ತಿವಂತವಾದುದೊ ಜ್ಞಾನ ಜಿಜ್ಞಾಸಿಗಳಿಗು ಕೂಡಾ ತಿಳಿಯುತ್ತಿದೆ. ಎಷ್ಟೋಜನ ಜ್ಞಾನಿಗಳಾದವರು ಯೋಗೀಶ್ವರರು ಹೇಳುತ್ತಿರುವ ಜ್ಞಾನ ಎಷ್ಟೋ ದೊಡ್ಡದೆಂದು ಪ್ರಶಂಸಿಸುತ್ತಿದ್ದಾರೆ. ಬ್ರಹ್ಮಯ್ಯನವರೇ ಸ್ವತಃವಾಗಿ **'ತನ್ನಗುರು'** ವಾಗಿ ಹೇಳಿಕೊಂಡ ವ್ಯಕ್ತಿ ಎಂತಹವನಾಗಿರುತ್ತಾನೋ ನಾವು ಕೂಡಾ ಆಲೋಚಿಸಬೇಕಾಗಿರುತ್ತದೆ. ಆದರೂ ಪ್ರಬೋಧಾನಂದ ಯೋಗೀಶ್ವರರು ಒಂದು ದೈವಜ್ಞಾನದಲ್ಲಿ ಹೊರತುಪಡಿಸಿ ಉಳಿದೆಲ್ಲವುಗಳಲ್ಲಿ ಸಾಧಾರಣ ವ್ಯಕ್ತಿಯಾಗಿಯೇ ಕಾಣಿಸುತ್ತಾನೆ. ಎದುರುಗಡೆ ನೋಡಿದರೆ ಈತನಿಗೆ ಜ್ಞಾನ ತಿಳಿದಿದೆಯಾ! ಎನ್ನುವಂತೆ ಕಾಣಿಸಿದರೂ, ಹೌದು ಆತನು ಯಾರಿಗೂ ತಿಳಿಯದ ದೊಡ್ಡವನೇ. ಎನ್ನುವಂತೆ ಆತನು ಬರೆದ **ಗ್ರಂಥಗಳೇ ದೊಡ್ಡ ಶಕ್ತಿಗಳಾಗಿ** ನಿರೂಪಿಸಿಕೊಂಡಿವೆ. ಒಂದು ಗ್ರಂಥ ಹತ್ತಿರಕ್ಕೆ ಬರುತ್ತಲೇ ಕೆಲವರಲ್ಲಿ ಬದಲಾವಣೆ ಕಾಣಿಸುವುದೂ,

ಕೆಲವರು ಗ್ರಂಥವನ್ನು ಓದಿದ ತಕ್ಷಣ ಅಲ್ಲಿಯವರೆಗು ಗುಣವಾಗದ ರೋಗಗಳು ಹೋಗುವುದು ನಡೆಯುತ್ತಿದೆ.

ಮೇಲ್ನೋಟಕ್ಕೆ ಕಾಣಿಸದ **ಶಕ್ತಿ** ಯೋಗೀಶ್ವರರಲ್ಲಿ ನಿಕ್ಷಿಪ್ತವಾಗಿರುವುದು ಹೊರಗೆ ಕಾಣಿಸದೆ ಹೋದರೂ ಆತನ ಹತ್ತಿರಕ್ಕೆ ಹೋದವರಿಗೆ ದೇಹದಲ್ಲಿ ಗುಣವಾಗದ, ಔಷಧಿಗಳಿಲ್ಲದ ಏಡ್ಸ್, ಕ್ಯಾನ್ಸರ್, ಡೆಂಗಿ ಜ್ವರಗಳು ಸಹಿತ ಶಾಂತಿಸಿ ಹೋಗುವುದು ನಡೆಯುತ್ತಿರುವುದರಿಂದ ಯೋಗೀಶ್ವರರು ಎಂತಹವರೊ ಯಾರಿಗಾದರೂ ಸುಲಭಗವಾಗಿ ಅರ್ಥವಾಗಿ ಹೋಗುತ್ತದೆ.

ವೀರಬ್ರಹ್ಮಯ್ಯನವರು ತನ್ನ ಕಾಲಜ್ಞಾನದಲ್ಲಿ **"ಆನಂದ ಯೋಗಿಯನ್ನು ದೂಷಿಸಿದವರು ಬಹಳ ತೊಂದರೆಗಳ ಪಾಲಾಗುತ್ತಾರೆಂದು"** ಬರೆಯುವುದು ನಡೆದಿದೆ. ಹಾಗೆಯೇ ಆತನನ್ನಾಗಲಿ, ಆತನ ಗ್ರಂಥಗಳನ್ನಾಗಲಿ ದೂಷಿಸಿದವರು ಇಲ್ಲಿಯವರೆಗು ಯಾರೂ ಸುರಕ್ಷಿತವಾಗಿಲ್ಲ. ತಿಳಿಯದ ರೋಗಗಳಿಂದ, ಅರ್ಥ ವಾಗದ ಬಾಧೆಗಳಿಂದ ಕೆಲವರಿರುವಾಗ, ಕೆಲವರು ಚಿತ್ರಹಿಂಸೆಗಳ ಪಾಲಾಗಿ ಮರಣಿಸುವುದು ನಡೆದಿದೆ. ಹಾಗೆ ಏಕೆ ನಡೆಯುತ್ತಿದೆಯೋ ತಿಳಿಯದವರು, ಪಾಪವನ್ನು ಮೂಟೆಕಟ್ಟಿಕೊಳ್ಳುವುದಕ್ಕೆ ಯೋಗೀಶ್ವರರ ಜ್ಞಾನಕ್ಕೆ ಅಲ್ಲಲ್ಲಿ ಆತಂಕಗಳನ್ನು ಉಂಟುಮಾಡುತ್ತಿದ್ದಾರೆ. ಹಿಂದೂಮತದಲ್ಲಿ ಆದಿ ಶಂಕರಾ ಚಾರ್ಯರು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ. ನಂತರ ಸ್ವಲ್ಪ ಕಾಲಕ್ಕೆ ವಿಶಿಷ್ಟಾದ್ವೈತ ಸಿದ್ಧಾಂತವನ್ನು ರಾಮಾನುಜಾಚಾರ್ಯರು ಪ್ರತಿಪಾದಿ ಸಿದ್ದಾನೆ. ಮತ್ತೆ ಸ್ವಲ್ಪ ಕಾಲಕ್ಕೆ ದ್ವೈತ ಸಿದ್ಧಾಂತವನ್ನು ಮಧ್ವಾಚಾರ್ಯರು ಪ್ರಕಟಿಸಿದ್ದಾನೆ. ಇವರು ಮೂವರೂ ಅಗ್ರಕುಲದವರು ಆಗಿರುವುದು ವಿಶೇಷ. ಗತ ಮೂವತ್ತೊಂಭತ್ತು (39 ವರ್ಷಗಳಿಂದ) **"ತ್ರೈತ ಸಿದ್ಧಾಂತ"**ವನ್ನು ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು, ಪ್ರಕಟಿಸಿ ಆ ಸಿದ್ಧಾಂತವನ್ನೇ ಪ್ರಚಾರ ಮಾಡುತ್ತಾ ತ್ರೈತ ಸಿದ್ಧಾಂತದ ಪ್ರಕಾರ **ಭಗವದ್ಗೀತೆ**ಯನ್ನು ವಿವರಿಸಿ ಬರೆಯುವುದು ನಡೆದಿದೆ. ಹಿಂದೂ ಮತದಲ್ಲಿನ ಸಿದ್ಧಾಂತಗಳ ವಿವರ ತಿಳಿಯದ ಪ್ರಜೆಗಳಿಗೆ, ಅಗ್ರಕುಲದವರು "ತ್ರೈತ ಎಂದರೇ ಕ್ರೈಸ್ಥರಿಗೆ ಸಂಬಂಧಿಸಿರುವುದೆಂದು, ತ್ರೈತ ಸಿದ್ಧಾಂತ ಭಗವದ್ಗೀತೆಯೆಂದು ಮೇಲ್ನೋಟಕ್ಕೆ ಹೇಳುತ್ತಾ ಒಳೊಳಗೆ ಕ್ರೈಸ್ಥವ

ಮತವನ್ನು ಬೋಧಿಸುತ್ತಿದ್ದಾರೆಂದು" ಯೋಗೀಶ್ವರರಿಗು, ಯೋಗೀಶ್ವರರ ಜ್ಞಾನಕ್ಕು ವಿರುದ್ಧವಾಗಿ ಹೇಳುವುದು ನಡೆದಿದೆ. ಹಿಂದೂತ್ವವನ್ನು ಒಂದುಕಡೆ ಸರ್ವನಾಶ ಮಾಡುತ್ತಿರುವ. ಅಗ್ರಕುಲದವರು ಹಿಂದೂಮತವನ್ನು ಕಾಪಾಡುವವರಂತೆ ನಟಿಸುತ್ತಾ, ಯೋಗೀಶ್ವರರ ಜ್ಞಾನಕ್ಕೆ ಕೆಲವು ಕಡೆ ಆತಂಕ ಉಂಟುಮಾಡುವುದು ನಡೆದಿದೆ. ಮೂರು ಕಡೆ ಅನ್ಯಮತ ಪ್ರಚಾರವೆಂದು, ಭಗವದ್ಗೀತೆಯನ್ನು ಪ್ರಚಾರ ಮಾಡುವ ಯೋಗೀಶ್ವರರ ಶಿಷ್ಯರ ಮೇಲೆ ಕೇಸುಗಳು ಇಡುವುದು ಕೂಡಾ ನಡೆದಿದೆ. ಕೆಲವು ಕಡೆ ಪ್ರತ್ಯಕ್ಷ ದಾಳಿಗಳಿಗೆ ಇಳಿಯುವುದು ನಡೆದಿದೆ. ಆದರೂ ಪ್ರಬೋಧಾನಂದ ಶಿಷ್ಯರು ಎಲ್ಲವುಗಳಿಗು ತಾಳ್ಮೆಯನ್ನು ವಹಿಸಿ **ಜ್ಞಾನ ಪ್ರಚಾರ** ಮಾಡುತ್ತಿದ್ದಾರೆ. ಈ ಮಧ್ಯಕಾಲದಲ್ಲಿ ನಲ್ಗೊಂಡ ಜಿಲ್ಲೆ ಭುವನಗಿರಿಯಲ್ಲಿ ದೇವೇಂದ್ರ ಎಂಬ ನಮ್ಮ ಸಂಘದ ಸದಸ್ಯನ ಮೇಲೆ ಅನ್ಯಮತ ಪ್ರಚಾರ ಮಾಡುತ್ತಿದ್ದಾನೆಂದು ಆರೋಪಿಸಿ ಕೇಸು ಇಡುವುದು ನಡೆದಿದೆ. ಅಷ್ಟೇಅಲ್ಲದೆ ನಮ್ಮ ಪ್ರಚಾರವಾಹನ ಭುವನಗಿರಿಯೊಳಗೆ ಹೋದಾಗ ನಮ್ಮ ಊರಿನಲ್ಲಿ ಪ್ರಚಾರ ಮಾಡಬೇಡವೆಂದು ತಡೆದು ಹಿಂದಕ್ಕೆ ಕಳಿಸುವುದು ನಡೆದಿದೆ. ಕರೀಂನಗರದಲ್ಲಿ ಗೋಡೆ ಮೇಲೆ "ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಓದಿರಿ". ಎಂದು ಬರೆದರೆ, ಅಗ್ರಕುಲದವರು ಬಂದು ಇದು ಕ್ರೈಸ್ತವ ಮತಪ್ರಚಾರ ಅದನ್ನು ಅಳಸಿ ಹಾಕಿರೆಂದು ಹೇಳುವುದು ನಡೆದಿದೆ. ಎರಡು ದಿನಗಳ ಕೆಳಗೆ ಆರ್ಲಗಡ್ಡೆ ಎಂಬ ಊರಿನಲ್ಲಿ ಪ್ರಚಾರವಾಹನ ಇರುವಾಗ ಅಲ್ಲಿಗೆ ಒಬ್ಬ ಅಗ್ರಕುಲಸ್ಥನು ಬಂದು ಇದು ಕ್ರೈಸ್ಥವ ಪ್ರಚಾರ ಈ ಪ್ರಚಾರವನ್ನು ನಿಲ್ಲಿಸಿರೆಂದು ಘರ್ಷಣೆ ಮಾಡುತ್ತಿರುವಾಗ ಆ ಸಮಯಕ್ಕೆ ನಮ್ಮ ಗ್ರಂಥಗಳನ್ನು ಓದಿದವರು ಅಲ್ಲಿರುವುದರಿಂದ ಅವರೇ ಅಗ್ರಕುಲದವರಿಗೆ ಬುದ್ಧಿಹೇಳಿ ಕಳಿಸುವುದು ನಡೆದಿದೆ. ಅಲ್ಲಿರುವ ಪ್ರಜೆಗಳು ಹೇಳಿದ ಮಾತುಗಳು **"ಇದು ಎಷ್ಟೋ ಶ್ರೇಷ್ಠವಾದ ಜ್ಞಾನ, ಇಷ್ಟುಕಾಲಕ್ಕೆ ಶ್ರೇಷ್ಠವಾದ ಜ್ಞಾನ. ದೊರೆತಿದೆಯೆಂದು ನಾವು ಸಂತೋಷಪಡುತ್ತಿದ್ದರೆ, ಸಮಾಜವನ್ನು ಸರ್ವನಾಶ ಮಾಡಿದ ನೀವು ಇದನ್ನು ಜ್ಞಾನವಲ್ಲ ಎನ್ನುತ್ತೀರಾ? ಹೀಗೇ ಮಾತನಾಡಿದರೆ ಊರಿನಲ್ಲಿ ಇಲ್ಲದಂತೆ ನಿಮ್ಮನ್ನು ನಾವೇ ಕಳಿಸುತ್ತೇವೆ."** ಎಂದು ಹೇಳುವುದು ನಡೆದಿದೆ. ಈ ವಿಧವಾಗಿ ಪ್ರಜೆಗಳೇ ತಿರುಗಿಬಿದ್ದು ಬುದ್ಧಿಹೇಳುವ ಸಮಯ ಎಲ್ಲಾಕಡೆ ಬರುತ್ತದೆ.

ಗೌತಮಬುದ್ಧನು ಜ್ಞಾನ ಹೇಳಿದರೆ ಆತನು ಅಗ್ರಕುಲದವನು ಅಲ್ಲವೆಂದು, ಆತನದ್ದು ಬೇರೆ ಮತವೆಂದು ಪ್ರಚಾರ ಮಾಡಿದ್ದಾರೆ. ಆ ದಿನ ಗೌತಮನು ಹಿಂದೂವೇ ಅಲ್ಲವೇ! ತಮ್ಮ ಆಧಿಪತ್ಯಕ್ಕಾಗಿ ಹಿಂದೂಮತದಿಂದ ಬುದ್ಧನನ್ನು ಹೊರಹಾಕಿ ಆತನದ್ದು ಬೌದ್ಧಮತವೆಂದು ಹೇಳಿ ಹಿಂದೂಮತದಿಂದ ಬೇರ್ಪಡಿಸಿದ್ದಾರೆ. ಈ ದಿನ ಬೌದ್ಧಮತ ವಿದೇಶಗಳಲ್ಲಿ ವ್ಯಾಪಿಸಿದ್ದರೂ ಸ್ವದೇಶದಲ್ಲಿ ಇಲ್ಲದಂತೆ ಮಾಡಿರುವುದು ಅಗ್ರಕುಲದವರು ಅಲ್ಲವೇ! ಈ ದಿನ ಬುದ್ಧನು ನಮ್ಮವನೇ ಬೌದ್ಧವು ಹಿಂದೂಮತವೇ ಎಂದು ಹೇಳಕೊಳ್ಳಲಾರದ ಪರಿಸ್ಥಿತಿ ನಮಗೆ ಏರ್ಪಟ್ಟಿದೆ. ಹಾಗೆಯೇ ಪ್ರಬೋಧಾನಂದ ಯೋಗೀಶ್ವರರು ಹೇಳುವ ತ್ರೈತ ಸಿದ್ಧಾಂತವನ್ನು ಹಿಂದೂ ಮತದಲ್ಲಿನ ಭಾಗ ಅಲ್ಲವೆನ್ನುವುದೂ, ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಭಗವದ್ಗೀತೆಯೇ ಅಲ್ಲವೆನ್ನುವುದನ್ನು ಒಂದುಕಡೆ ಪ್ರಜೆಗಳು ಗಮನಿಸುತ್ತಿದ್ದಾರೆ. ಪ್ರಬೋಧಾನಂದ ಯೋಗೀಶ್ವರರು ಕಳೆದ 39 ವರ್ಷಗಳಿಂದ ಬೋಧಿಸುತ್ತಿರುವ ಬೋಧನೆ ಹಿಂದೂತ್ವದಲ್ಲಿಯೇ ಎಷ್ಟೋ ದೊಡ್ಡದೆಂದು ಎಲ್ಲಾ ಮತದವರು ಒಪ್ಪಿಕೊಳ್ಳುತ್ತಿರುವಾಗ, ಅಲ್ಪ ಕುಲದವರೆಂದು ಅಗ್ರಕುಲದಿಂದ ಕಾಣಿಸಿದವರೆಲ್ಲರೂ ಹಿಂದೂ (ಇಂದೂ) ಜ್ಞಾನವನ್ನು ತಿಳಿದುಕೊಂಡು ಚೈತನ್ಯವಂತರಾಗಿ ಅಗ್ರಕುಲದವರಿಗೆ ತಿರುಗಿಬಿದ್ದು ಜ್ಞಾನವನ್ನು ಹೇಳುವ ಸ್ಥಿತಿಗೆ ಬೆಳೆದಿದ್ದಾರೆ. ಅಲ್ಪ ಕುಲದವರ ಮೇಲೆ ಆಧಾರಪಟ್ಟು ಬದುಕುತ್ತಿರುವ ಅಗ್ರಕುಲದವರನ್ನು ಅಲ್ಪ ಕುಲದವರೆಲ್ಲರೂ ಒಂದುಸಲ ಹೊರಹಾಕಿದರೆ ನಿಮ್ಮೊಂದಿಗೆ ನಮಗೆ ಸಂಬಂಧ ಬೇಡ ಎಂದರೇ ಏನಾಗುತ್ತದೋ ಹೇಳಬೇಕಾದ ಅಗತ್ಯವಿಲ್ಲ. ಅಂತಹ ಸ್ಥಿತಿ ಬರದಂತಿರುವುದಕ್ಕೆ ನಮ್ಮ **ಜ್ಞಾನಕ್ಕೆ** ಅಡ್ಡ ಬರಬೇಡವೆಂದು ಅಗ್ರಕುಲದವರಿಗೆ ಪದೇ ಪದೇ ಹೇಳುತ್ತಿದ್ದೇವೆ.ಧಿಂತಿ

ಇಂತಿ

**ಪ್ರಬೋಧ ಸೇವಾಸಮಿತಿ**

*****

**ಅಸತ್ಯವನ್ನು ಸಾವಿರ ಮಂದಿ ಹೇಳಿದರೂ, ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರ ಮಂದಿ ಅಲ್ಲಗಳೆದರೂ, ಅದು ಅಸತ್ಯವಲ್ಲ.**